actionaid
ActionAid Association (India)

# ಅಗೋಚರವಾಗಿರುವ ಕಾರ್ಮಿಕರು

## ಚೌಲ್ಟ್ರಿ ಕಾರ್ಮಿಕರ ಜೀವನದಲ್ಲಿ ಘನತೆ ಮತ್ತು ಭದ್ರತೆಯನ್ನು ಖಾತರಿಪಡಿಸುವುದು



# ಅಗೋಚರವಾಗಿರುವ ಕಾರ್ಮಿಕರು

## ಚೌಲ್ಟ್ರಿ ಕಾರ್ಮಿಕರ ಜೀವನದಲ್ಲಿ ಘನತೆ ಮತ್ತು ಭದ್ರತೆಯನ್ನು ಖಾತರಿಪಡಿಸುವುದು

actionaid
ActionAid Association (India)

1972-2022
50 YEARS OF SERVICE & SOLIDARITY
actionaid
ActionAid Association

# ಅಗೋಚರವಾಗಿರುವ ಕಾರ್ಮಿಕರು

**ಚೌಲ್ಟ್ರಿ ಕಾರ್ಮಿಕರ ಜೀವನದಲ್ಲಿ ಘನತೆ ಮತ್ತು ಭದ್ರತೆಯನ್ನು ಖಾತರಿಪಡಿಸುವುದು**

First Published October, 2022

Some rights reserved

CC BY NC SA

This work is licensed under a Creative Commons Attribution Non Commercial-ShareAlike 4.0 International License. Provided they acknowledge the source, users of this content are allowed to remix, tweak, build upon and share for non-commercial purposes under the same original license terms.

actionaid

**ActionAid Association (India)**

www.actionaidindia.org @actionaidindia

actionaidcomms @company/actionaidindia actionaid_india

Actionaid Association, 139 Richmond Road, Bengaluru - 560 025.

+91-80-4365 0615/650

“ನ್ಯಾಯವು ನಮ್ಮ ಪರವಾಗಿದ್ದಾಗ ಹೋರಾಟದಲ್ಲಿ ಸೋಲುವ ಪ್ರಶ್ನೆಯೇ ಇಲ್ಲ.
ನಮ್ಮ ಹೋರಾಟವು ಸಂಪತ್ತು ಅಥವಾ ಅಧಿಕಾರಕ್ಕಾಗಿ ಅಲ್ಲ.
ಅದು ನಮ್ಮ ಸ್ವಾತಂತ್ರ್ಯಕ್ಕಾಗಿ, ಮಾನವ ವ್ಯಕ್ತಿತ್ವದ ಮರುಗಳಿಕೆಗಾಗಿ ಈ ಹೋರಾಟ.”

~ ಬಿ.ಆರ್. ಅಂಬೇಡ್ಕರ್

ಚೌಲ್ಟ್ರಿ ಕಾರ್ಮಿಕರ ಮೂಲಭೂತ ಹಕ್ಕುಗಳು ಮತ್ತು ಮಹಿಳೆಯಾಗಿ ಮತ್ತು
ಕಾರ್ಮಿಕರಾಗಿ ಅವರ ಘನತೆಗಾಗಿ ನಡೆಯುತ್ತಿರುವ ಸಂಘಟಿತ ಹೋರಾಟಕ್ಕೆ
ಒತ್ತಾಸೆಯಾಗಿ ಈ ಅಧ್ಯಯನವು ಅರ್ಪಿತವಾಗಿದೆ.

# ಪರಿವಿಡಿ


ಮುನ್ನುಡಿ vii

ಸ್ವೀಕೃತಿಗಳು ix

ಸಾರಾಂಶ xi

**ಅಧ್ಯಾಯ ಒಂದು: ಅನೌಪಚಾರಿಕ ಕಾರ್ಮಿಕರಾಗಿ ಚೌಲ್ಟ್ರಿ ಕಾರ್ಮಿಕರು – ಒಂದು ಸಾಂದರ್ಭಿಕ ಅವಲೋಕ 01**

ಅವರ ಕೆಲಸ 01

ಯಾರವರು? 01

ಆರ್ಥಿಕತೆಯು ಔಪಚಾರಿಕವೆನಿಸಿ, ಅದರ ಕೆಲಸವು ಅನೌಪಚಾರಿಕವೆನಿಸಿದಾಗ 04

ಚೌಲ್ಟ್ರಿ ಕಾರ್ಮಿಕರಿಗೆ ಅನಿಶ್ಚಿತತೆಯ ಕಾನೂನು ಚೌಕಟ್ಟು 05

**ಅಧ್ಯಾಯ ಎರಡು: ಚೌಲ್ಟ್ರಿ ಕಾರ್ಮಿಕರ ಧ್ವನಿಗಳನ್ನು ಆಲಿಸಿದಾಗ 09**

ವೈವಿಧ್ಯಮಯ ಮತ್ತು ದುರ್ಬಲತೆಯೇ ಮೂಲ 10

ಅವರು ಕೆಲಸ ಮಾಡುವ ಸ್ಥಳ ಮತ್ತು ಅಲ್ಲಿನ ಪರಿಸ್ಥಿತಿ 12

ಲಿಂಗ ಅಸೂಕ್ಷ್ಮತೆ, ಮೂಲಭೂತ ಸೌಕರ್ಯಗಳ ಕೊರತೆ, ವೈಯಕ್ತಿಕ ಸುರಕ್ಷಿತೆ ಮತ್ತು ಲೈಂಗಿಕ ಕಿರುಕುಳ 15

ಕೋಣೆಯಲ್ಲಿ ಆನೆ: ಕೆಲಸದ ಸ್ಥಳದಲ್ಲಿ ಜಾತಿ ತಾರತಮ್ಯ 20

ಕೋವಿಡ್‌ನ ಪರಿಣಾಮ 22

ನಾವು ನೋಡಲು ಬಯಸುವ ಬದಲಾವಣೆಗಳು 23

**ಅಧ್ಯಾಯ ಎರಡು: ಚೌಲ್ಟ್ರಿ ಕಾರ್ಮಿಕರ ಧ್ವನಿಗಳನ್ನು ಆಲಿಸಿದಾಗ 25**

ಜಾಲಿ ಮೊಹಲ್ಲಾ 25

ರುಕ್ಮಿಣಿ 25

ಹನುಮಕ್ಕ 26

ಕುಪ್ಪಮ್ಮ 27

ಜಯಲಕ್ಷ್ಮಿ 28

ಅಮ್ಮು 28

ವೆನ್ನಿಲಾ 29

ಲಕ್ಷ್ಮಿ 30

ಮಹೇಶ್ವರಿ 30

ಗೌರಿ 31

**ಅಧ್ಯಾಯ ನಾಲ್ಕು: ಸಾರಾಂಶ ಸಂಶೋಧನೆಗಳು ಮತ್ತು ಶಿಫಾರಸ್ಸುಗಳು 33**

ಶಿಫಾರಸುಗಳು 34

ಅನುಬಂಧ: ಚೌಲ್ಟ್ರಿ ಕೆಲಸಗಾರರೊಂದಿಗೆ FGD ಗಾಗಿ ಪ್ರಶ್ನೆಗಳು 37

# ಮುನ್ನುಡಿ

ಅದೃಶ್ಯತೆ, ಅನೌಪಚಾರಿಕತೆ, ಕಠಿಣತೆ ಮತ್ತು ವಿಪರೀತ ದುರ್ಬಲತೆಯು ಮಹಿಳೆಯರ ಕೆಲಸದ ಪ್ರಪಂಚವನ್ನು ನಿರೂಪಿಸುತ್ತದೆ. ಪಾವತಿಸಿದರೂ ಸಹ, ಉದ್ಯೋಗ ಮತ್ತು ಸಂಭಾವನೆಯ ಪರಿಸ್ಥಿತಿಗಳು ದಬ್ಬಾಳಿಕೆಯ ಮತ್ತು ಶೋಷಣೆಯ, ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಕಾರ್ಮಿಕ ಮಾನದಂಡಗಳನ್ನು ಉಲ್ಲಂಘಿಸುತ್ತವೆ. ಸಮಾಜದಲ್ಲಿ ಪ್ರಾಬಲ್ಯ ಹೊಂದಿರುವ ಪಿತೃಪ್ರಧಾನತೆಯ ಮೌಲ್ಯಗಳು ಮತ್ತು ರಚನೆಗಳು ಮಹಿಳಾ ಕಾರ್ಮಿಕರ ಸ್ಥಿತಿಯನ್ನು ಮತ್ತಷ್ಟು ಪ್ರಭಾವಿಸುತ್ತವೆ. ಕಾರ್ಮಿಕ ಮಾರುಕಟ್ಟೆಯಲ್ಲಿ ಅವರ ಉಪಸ್ಥಿತಿಯು ಸಾಮಾಜಿಕ ಮತ್ತು ಕೌಟುಂಬಿಕ ನಿಯಮಾವಳಿಗನುಸಾರವಾಗಿದ್ದು, ಬಲವಂತವಾಗಿ ಅವರನ್ನು ಪಾವತಿಸದ ಆರೈಕೆಯ ಕೆಲಸಕ್ಕೆ ಹೆಚ್ಚುವರಿಯಾಗಿ ತೊಡಗಿಸಿಕೊಳ್ಳುವಂತೆ ಮಾಡಿದೆ. ಹೀಗಾಗಿ ಮಹಿಳಾ ಕಾರ್ಮಿಕರು ಬಹು ಚಟುವಟಿಕೆಗಳನ್ನು ಮಾಡಬೇಕೆಂಬ ನಿರೀಕ್ಷೆಯೂ ಇದೆ.

ಭಾರತದಲ್ಲಿ ಮಹಿಳಾ ಉದ್ಯೋಗಿಗಳ ಭಾಗವಹಿಸುವಿಕೆ ಕಡಿಮೆಯಿತ್ತು, ಅದು ಕ್ಷೀಣಿಸುತ್ತಿದೆ. ಕಳೆದ ದಶಕಗಳಲ್ಲಿ ಭಾರತದಲ್ಲಿ 21 ಮಿಲಿಯನ್ ಮಹಿಳೆಯರು ಉದ್ಯೋಗವನ್ನು ತೊರೆದಿದ್ದಾರೆ. ವೇತನವಿಲ್ಲದ, ಕಡಿಮೆ ಸಂಬಳದ ಮತ್ತು ಬಲವಂತದ ಕೆಲಸದ ಕ್ಷೇತ್ರಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಜ್ಞಾನವನ್ನು ಹರಡುವ ಅವಶ್ಯಕತೆಯಿದೆ. ಮಹಿಳೆಯರ ಕೆಲಸವನ್ನು ಅದೃಶ್ಯಗೊಳಿಸುವುದನ್ನು ವಿರೋಧಿಸುವುವ ಅವಶ್ಯಕತೆಯಿದೆ, ಮಹಿಳೆಯರ ಕೆಲಸವನ್ನು ಗುರುತಿಸಲು ಪ್ರಚಾರ ಮಾಡುವುದು ಮತ್ತು ಅವರನ್ನು ಕಾರ್ಮಿಕರಾಗಿ ಗುರುತಿಸುವ ಆಚರಿಸುವ ಅವಶ್ಯಕತೆಯಿದೆ. ರಾಜ್ಯವನ್ನು ಹೊಣೆಗಾರರನ್ನಾಗಿ ಮಾಡಲು ಮತ್ತು ಕಾರ್ಮಿಕರಾಗಿ ಅವರ ಹಕ್ಕುಗಳನ್ನು ಒತ್ತಾಯಿಸಲು ಮಹಿಳಾ ಕಾರ್ಮಿಕರ ಪ್ರಯತ್ನಗಳನ್ನು ನಾವು ಬೆಂಬಲಿಸಬೇಕಾಗಿದೆ. ಮಹಿಳಾ ರೈತರು, ಎಂ.ಜಿ.ಎನ್.ಆರ್.ಇ.ಜಿ.ಎ ಕಾರ್ಯಕರ್ತರು, ಬೀದಿ ಬದಿ ವ್ಯಾಪಾರಿಗಳು, ಗೃಹಾಧಾರಿತ ಮಹಿಳಾ ಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರ ಸಾಮರ್ಥ್ಯಗಳನ್ನು ನಾವು ಬಲಪಡಿಸಬೇಕಾಗಿದೆ ಮತ್ತು ಕಾರ್ಮಿಕರ ಸಮೂಹಗಳು, ರೈತರ ಸಂಘಟನೆಗಳು, ಸಹಕಾರಿ ಮತ್ತು ಮಹಿಳಾ ಕಾರ್ಮಿಕರ ನೆಟ್‌ವರ್ಕ್‌ಗಳ ರಚನೆಯನ್ನು ಬೆಂಬಲಿಸಬೇಕು. ಈ ವಲಯಗಳಲ್ಲಿ ಸಾರ್ವತ್ರಿಕ ವಿಷಯಗಳು ಕಂಡುಬರುತ್ತವೆಯಾದರೂ, ಪ್ರತಿಯೊಂದು ವಲಯವು ಕಾರ್ಯಾಚರಣೆಗಳ ಸ್ವರೂಪ ಮತ್ತು ಐತಿಹಾಸಿಕವಾಗಿಯೂ ಕಾರ್ಮಿಕರು ಎದುರಿಸುತ್ತಿರುವ ದುರ್ಬಲತೆಗಳಿಂದ ಉಂಟಾದ ನಿರ್ದಿಷ್ಟ ದುರ್ಬಲತೆಗಳನ್ನು ಹೊಂದಿದೆ. ಈ ಸಂದರ್ಭದಲ್ಲಿ, ನಾವು ಈ ವರದಿಯನ್ನು ಪ್ರಸ್ತುತಪಡಿಸುತ್ತೇವೆ: ಅಗೋಚರವಾಗಿರುವ ಕಾರ್ಮಿಕರು: ಚೌಲ್ಟ್ರಿ ಕಾರ್ಮಿಕರ ಜೀವನದಲ್ಲಿ ಘನತೆ ಮತ್ತು ಭದ್ರತೆಯನ್ನು ಖಾತರಿಪಡಿಸುವುದು.

ಕರ್ನಾಟಕದ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಚೌಲ್ಟ್ರಿಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರು ಎದುರಿಸುತ್ತಿರುವ ಸವಾಲುಗಳನ್ನು ವರದಿಯು ಪ್ರಸ್ತುತಪಡಿಸುತ್ತದೆ. ಸಾಂಪ್ರದಾಯಿಕವಾಗಿ ಚೌಲ್ಟ್ರಿಗಳು ಪ್ರವಾಸಿಗರು, ಯಾತ್ರಿಕರು ಅಥವಾ ಸ್ಥಳಗಳಿಗೆ ಭೇಟಿ ನೀಡುವವರಿಗೆ ವಿಶ್ರಾಂತಿ ತಾಣಗಳಾಗಿವೆ, ಹೆಚ್ಚಾಗಿ ಧಾರ್ಮಿಕ ಸ್ಥಳವಾಗಿದೆ. ಕಾಲಕ್ರಮೇಣ, ಚೌಲ್ಟ್ರಿಗಳು ಮದುವೆ ಛತ್ರಗಳಾಗಿ, ಸಭೆ–ಸಮಾರಂಭ ನಡೆಸುವ ತಾಣಗಳಾಗಿ ಹಾಗೂ ಇತರೆ ಸಾಂಪ್ರದಾಯಿಕ ವಿಧಿ ಆಚರಣೆಗಳನ್ನು ನಡೆಸುವ ಸ್ಥಳಗಳಾಗಿವೆ. ಈ ಎಲ್ಲಾ ಸಮಾರಂಭಗಳಲ್ಲಿ ಮತ್ತು ಹೊಸ ಮನೆಯ ಆಚರಣೆಗಳು ಮತ್ತು ಇತರೆ ವಿವಿಧ ಕಾರ್ಯಕ್ರಮಗಳಿಗೆ ಸ್ವಚ್ಛತೆಯ ಕೆಲಸ ಮಾಡಲು ಕಾರ್ಮಿಕರನ್ನು ನೇಮಿಸಿಕೊಂಡಿವೆ.

ಈ ಅಧ್ಯಯನದ ವರದಿಯನ್ನು ಬೆಂಗಳೂರಿನ ಮಹಿಳಾ ಸಂಘಟನೆಯಾದ ಸ್ಲಂ ಮಹಿಳಾ ಸಂಘಟನೆಯ ಸದಸ್ಯರ ಬೆಂಬಲದಿಂದ ಮಾಡಲಾಗಿದೆ. ಸ್ಲಂ ಮಹಿಳಾ ಸಂಘಟನೆಯು ಆಕ್ಷನ್‌ಏಯ್ಡ್ ಅಸೋಸಿಯೇಶನ್ ಸಂಸ್ಥೆಯ ಸಮುದಾಯಾಧಾರಿತ ನಿರಂತರ ಚಟುವಟಿಕೆಯ ಪರಿಣಾಮವಾಗಿ ಸಂರಚನೆಗೊಂಡಿದೆ. ಈ ಸಂಘಟನೆಯ ಸದಸ್ಯರು ದುಡಿಯುವ ವರ್ಗ ವಾಸಿಸುವ ಸ್ಲಂ ಪ್ರದೇಶಗಳಲ್ಲಿ ವಾಸಿಸುತ್ತಿದ್ದು, ಈ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅಲ್ಲಿ ವಾಸಿಸುವ ಕಾರ್ಮಿಕರ ಸಮಸ್ಯೆಗಳನ್ನು ಸಮುದಾಯ ಕೇಂದ್ರಿತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯಪ್ರವರ್ತರಾಗಿದ್ದಾರೆ. ಈ ಸದಸ್ಯರು ಚೌಲ್ಟ್ರಿ ಕಾರ್ಮಿಕರನ್ನು ಗುರುತಿಸಿ, ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಮತ್ತು ಅವರ ಬೇಡಿಕೆಗಳನ್ನು ಧ್ವನಿಸಲು ಸ್ಥಳೀಯವಾಗಿ ಸಜ್ಜುಗೊಳಿಸಿದರು. ಆಕ್ಷನ್‌ಏಯ್ಡ್ ಅಸೋಸಿಯೇಶನ್ ಸಂಸ್ಥೆಯ ದೀರ್ಘಾವಧಿಯ ಸಹ–ಪ್ರಯಾಣಿಕರಾಗಿರುವ ಮಧು ಭೂಷಣ್ ರವರು ಕರ್ನಾಟಕ ರಾಜ್ಯದಲ್ಲಿ ನಮ್ಮ ಕೆಲಸವನ್ನು ಮುನ್ನಡೆಸುವ ಸಹೋದ್ಯೋಗಿಗಳೊಂದಿಗೆ ಈ ಸಂವಾದಗಳಲ್ಲಿ ಭಾಗವಹಿಸಿದ್ದಾರೆ ಮತ್ತು ಈ ಎಲ್ಲಾ ನಿರೂಪಣೆಗಳನ್ನು ಈ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ, ಚೌಲ್ಟ್ರಿ ಕಾರ್ಮಿಕರ ಜೀವನಾನುಭವವನ್ನು ನಿರೂಪಿಸುವ ಅನೇಕ ಬಹುಮುಖ್ಯ ಕ್ಷಣಗಳನ್ನು ಅವರು ಬಹಳ ಸೂಕ್ಷ್ಮತೆಯಲ್ಲಿ ಗುರುತಿಸಿ ಸೆರೆಹಿಡಿದಿದ್ದಾರೆ.

ಮಹಿಳಾ ಕಾರ್ಮಿಕರು ಧ್ವನಿಗೂಡಿಸಿದಂತೆ ಮುಂದಿನ ದಾರಿಯನ್ನು ಈ ವರದಿಯು ಪ್ರಸ್ತುತಪಡಿಸುತ್ತದೆ. ಭವಿಷ್ಯದಲ್ಲಿ ಅನೌಪಚಾರಿಕ ಮಹಿಳಾ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಮತ್ತು ಉತ್ತೇಜಿಸುವ ಸಾಮೂಹಿಕ ದೂರದೃಷ್ಟಿಯನ್ನು ವರದಿಯು ಹೊಂದಿದೆ.

ನಾವು ಈ ವರದಿಯನ್ನು ವಿಶಾಲವಾದ ಪ್ರೇಕ್ಷಕರಿಗೆ ಪ್ರಸ್ತುತಪಡಿಸುತ್ತೇವೆ. ಆದ್ದರಿಂದ ನಾವು ಕೆಲಸದ ಜಗತ್ತಿನಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸಬಹುದು ಮತ್ತು ಆಚರಿಸಬಹುದು ಮತ್ತು ಅವರ ಹಕ್ಕುಗಳನ್ನು ಪ್ರತಿಪಾದಿಸಲು ಮತ್ತು ಮುನ್ನಡೆಸಲು ಅವರ ಏಜೆನ್ಸಿಯನ್ನು ನಿರ್ಮಿಸಲು ಸಹಾಯ ಮಾಡಬಹುದು.

ಐಕ್ಯಮತದೊಂದಿಗೆ,

ಸಂದೀಪ್ ಚಾಚ್ರಾ

ಕಾರ್ಯನಿರ್ವಾಹಕ ನಿರ್ದೇಶಕರು

ಆಕ್ಷನ್‌ಏಯ್ಡ್ ಅಸೋಸಿಯೇಶನ್

# ಸ್ವೀಕೃತಿಗಳು

ಈ ಅಧ್ಯಯನದಲ್ಲಿ ಭಾಗಿಯಾದ ಎಲ್ಲಾ ಮಹಿಳಾ ಚೌಲ್ಟ್ರಿ ಕಾರ್ಮಿಕರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇವೆ. ಸ್ಲಂ ಮಹಿಳಾ ಸಂಘಟನೆ (ಎಸ್‌ಎಂಎಸ್) ಭಾಗಿಯಾಗದೆ ಈ ವರದಿ ಸಾಧ್ಯವಾಗುತ್ತಿರಲಿಲ್ಲ. ಹೋಲಿಕೆಯ ದೃಷ್ಟಿಯಿಂದ ಗಮನಿಸಿದರೆ ಎಸ್‌ಎಂಎಸ್ ಹೊಸ ಮಹಿಳಾ ಸಂಘಟನೆಯಾಗಿದ್ದು, ಕರ್ನಾಟಕದ ಬೆಂಗಳೂರಿನಲ್ಲಿ ಅನೌಪಚಾರಿಕ ಕಾರ್ಮಿಕ ವರ್ಗವು ನೆಲೆನಿಂತ ಸ್ಥಳಗಳಲ್ಲಿನ ಮಹಿಳೆಯರನ್ನು ಒಳಗೊಂಡಿರುವ ಸಂಘಟನೆಯಾಗಿದೆ. ಈ ಸಂಘಟನೆಯ ಸದಸ್ಯರು ಜನರು ಅನುಭವಿಸುತ್ತಿರುವ ಮೂಲಭೂತ ಸೌಕರ್ಯಗಳ ಸಮಸ್ಯೆಗಳು, ಹಕ್ಕುಗಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಂವಿಧಾನಾತ್ಮಕ ಹಕ್ಕುಗಳನ್ನು ಪ್ರತಿಪಾದಿಸುತ್ತಿದ್ದಾರೆ. ಕೋವಿಡ್19 ಆರೋಗ್ಯ ತುರ್ತು ಪರಿಸ್ಥಿತಿಯಲ್ಲಿ ಸ್ಲಂ ಮಹಿಳಾ ಸಂಘಟನೆಯು ಅಭಿಯಾನಗಳನ್ನು ನಡೆಸಿದೆ, ಸಾರ್ವಜನಿಕ ಆರೋಗ್ಯ ಕೇಂದ್ರಗಳಿಂದ ಚಿಕಿತ್ಸೆ ಮತ್ತು ಔಷಧವನ್ನು ಪಡೆಯಲು ಜನರಿಗೆ ಸಹಾಯ ಮಾಡುವ ಮೂಲಕ ಸಮುದಾಯಗಳ ಆರೋಗ್ಯ ಹಕ್ಕುಗಳನ್ನು ಖಾತ್ರಿಪಡಿಸುತ್ತಾ ಸಹಕರಿಸುತ್ತಿದೆ. ಕೋವಿಡ್ ನಂತರದ ಸಂದರ್ಭದಲ್ಲಿ ಅವರು ಜನರನ್ನು ಸಜ್ಜುಗೊಳಿಸಲು ಮತ್ತು ಜನಸಮುದಾಯ ಸರ್ಕಾರ ಅನುಷ್ಠಾನಗೊಳಿಸಿರುವ ಕಾರ್ಯಕ್ರಮವನ್ನು ಪಡೆಯುವ ದಿಶೆಯಲ್ಲಿ ಜನಕೇಂದ್ರಿತವಾಗಿ ದುಡಿಯುತ್ತಿದ್ದಾರೆ. ಅವರು ಕೆಲಸ ಮಾಡುವ ಪ್ರದೇಶಗಳಲ್ಲಿ ವಾಸಿಸುವ ಅದೃಶ್ಯ ಅಸಂಘಟಿತ ಕಾರ್ಮಿಕರು ಅವರ ಹಕ್ಕುಗಳನ್ನು ಪಡೆಯುವ ಸಲುವಾಗಿಯೂ ಕಾರ್ಯಪ್ರವರ್ತವಾಗಿದೆ. ಇದರಲ್ಲಿ ಚೌಲ್ಟ್ರಿ ಕಾರ್ಮಿಕರು, ಅಗರಬತ್ತಿ ಹೊಸೆಯುವವರು, ಹೂ ಕಟ್ಟುವವರು ಮತ್ತು ಬೀದಿ ವ್ಯಾಪಾರಿಗಳು ಸೇರಿದ್ದಾರೆ. ಈ ವರದಿಗಾಗಿ ಸ್ಲಂ ಮಹಿಳಾ ಸಂಘಟನೆಯು ಚೌಲ್ಟ್ರಿಗಳಲ್ಲಿ (ಮದುವೆ ಛತ್ರಗಳಲ್ಲಿ) ಕೆಲಸ ಮಾಡುವ ಮಹಿಳೆಯರನ್ನು ಒಟ್ಟುಗೂಡಿಸಿ, ಅವರು ಎದುರಿಸುತ್ತಿರುವ ಸವಾಲುಗಳನ್ನು ಹಂಚಿಕೊಳ್ಳಲು ಮತ್ತು ಈ ಸಮಸ್ಯೆಗಳನ್ನು ಸಾರ್ವಜನಿಕವಲಯಕ್ಕೆ ತರಲು ಪ್ರೋತ್ಸಾಹಿಸಿದರು.

ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಮಹಿಳಾ ಚೌಲ್ಟ್ರಿ ಕಾರ್ಮಿಕರ ಸ್ಥಿತಿಯ ಕುರಿತು ಈ ಅಧ್ಯಯನವನ್ನು ಒಟ್ಟಿಗೆ ತಂದಿದ್ದಕ್ಕಾಗಿ ಕರ್ನಾಟಕದ ಸ್ತ್ರೀವಾದಿ ಮತ್ತು ಮಹಿಳಾ ಹಕ್ಕುಗಳ ಕಾರ್ಯಕರ್ತೆ ಶ್ರೀಮತಿ ಮಧು ಭೂಷಣ್ ಅವರಿಗೆ ನಾವು ಕೃತಜ್ಞರಾಗಿರುತ್ತೇವೆ. ಮಧು ಭೂಷಣ್ ಚೌಲ್ಟ್ರಿ ಕಾರ್ಮಿಕರೊಂದಿಗೆ ಹಲವಾರು ಸಂವಾದಗಳಲ್ಲಿ ಭಾಗವಹಿಸಿದ್ದಾರೆ ಮತ್ತು ಕಾರ್ಮಿಕರ ಕೆಲಸದ ಪರಿಸ್ಥಿತಿಗಳನ್ನು ಹೊರತಂದಿದ್ದಾರೆ ಮತ್ತು ಅಸಂಘಟಿತ, ಅದೃಶ್ಯ ಮತ್ತು ಅನೌಪಚಾರಿಕ ಕೆಲಸಗಳ ಜಗತ್ತಿನಲ್ಲಿ ಮಹಿಳಾ ಕಾರ್ಮಿಕರು ಹಕ್ಕುಗಳನ್ನು ಖಾತ್ರಿಪಡಿಸಿಕೊಳ್ಳಲು, ಶಿಫಾರಸ್ಸುಗಳನ್ನು ರೂಪಿಸಲು ಸಹಾಯ ಮಾಡಿದ್ದಾರೆ. ಪ್ರಸಿದ್ಧ ಲೇಖಕಿ ಶ್ರೀಮತಿ ಶಾರದ ಅವರು ವರದಿಯನ್ನು ಕನ್ನಡ ಭಾಷೆಗೆ ಅನುವಾದಿಸಿದ್ದಾರೆ, ಆದ್ದರಿಂದ ನಾವು ಅದನ್ನು ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಪ್ರಕಟಿಸಬಹುದು.

ಐತಿಹಾಸಿಕವಾಗಿ ಶೋಷಣೆಗೆ ಒಳಗಾದ ಅತ್ಯಂತ ದುರ್ಬಲ ವರ್ಗದ ಕಾರ್ಮಿಕರ ಹಕ್ಕುಗಳನ್ನು ಬೆಂಬಲಿಸುವ ಉದ್ದೇಶದಿಂದ, ಚೌಲ್ಟ್ರಿ ಕೆಲಸದಲ್ಲಿರುವ ಮಹಿಳೆಯರ ಜೀವನದ ಬಗ್ಗೆ ವರದಿ ಮಾಡಲು ನಮಗೆ ಸಾಧ್ಯವಾಗಿಸಿದ ಎಲ್ಲಾ ಸಹೋದ್ಯೋಗಿಗಳಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

# ಸಾರಾಂಶ

ಚೌಲ್ಟ್ರಿ ಕೆಲಸಗಾರರು ಎಂದರೆ ಮದುವೆ ಅಥವಾ ಯಾವುದೇ ಸಂಬಂಧಿತ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗಾಗಿ ಬಾಡಿಗೆಗೆ ನೀಡಿರುವ "ಚೌಲ್ಟ್ರಿಗಳು" ಅಥವಾ ಮದುವೆ ಹಾಲ್‌ಗಳಲ್ಲಿ ಸ್ವಚ್ಛಗೊಳಿಸುವ ಮತ್ತು ಕೆಲವೊಮ್ಮೆ ಅಡುಗೆ ಮಾಡುವ ಕೆಲಸದಲ್ಲಿ ಸಹಾಯ ಮಾಡುವವರು. ಅವರ ಅನುಭವದಲ್ಲಿ ಚೌಲ್ಟ್ರಿಗಳಲ್ಲಿ ಕೆಲಸಕ್ಕೆ ಹೋಗುವ ಹೆಚ್ಚಿನ ಮಹಿಳೆಯರು ನಗರದ ಕೊಳೆಗೇರಿ ಸಮುದಾಯಗಳಿಂದ ಬಂದವರು ಮತ್ತು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಂದ ಬಂದವರು – ಹೆಚ್ಚಾಗಿ ದಲಿತ ಮತ್ತು ನಗರ ಮತ್ತು ಗ್ರಾಮೀಣ ಬಡವರು.

ಸ್ಲಂ ಮಹಿಳಾ ಸಂಘಟನೆಯ ಬೆಂಬಲದೊಂದಿಗೆ ಆಕ್ಷನ್‌ಏಯ್ಡ್ ಅಸೋಸಿಯೇಶನ್ ಈ ಅಧ್ಯಯನವನ್ನು ನಡೆಸಿತು. ಚೌಲ್ಟ್ರಿ ಕೆಲಸಗಾರರ ಧ್ವನಿಯನ್ನು ಒಟ್ಟುಗೂಡಿಸುವುದು, ದಾಖಲಿಸುವುದು ಮತ್ತು ಪ್ರಸ್ತುತಪಡಿಸುವುದು ಅವರು ಕೆಲಸ ಮಾಡುವ ಸ್ಥಳದಲ್ಲಿ ಅನುಭವಿಸುತ್ತಿರುವ ತಾರತಮ್ಯದ ಪರಿಸ್ಥಿತಿಗಳನ್ನು ಗೋಚರಿಸುವಂತೆ ಮಾಡುವುದು ಮತ್ತು ನೀತಿ ಮಟ್ಟದ ಬದಲಾವಣೆಗಳ ಮೇಲೆ ಪರಿಣಾಮ ಬೀರುವುದು ಈ ಅಧ್ಯಯನದ ಉದ್ದೇಶ. ಮೊದಲ ಹಂತವಾಗಿ ವೈಯಕ್ತಿಕ ಪ್ರಕರಣದ ಅಧ್ಯಯನಗಳನ್ನು ದಾಖಲಿಸಲಾಗಿದೆ. ಇದರ ಆಧಾರದ ಮೇಲೆ ನಿರ್ದಿಷ್ಟ ಗುಂಪು ಚರ್ಚೆಯ ವಿಧಾನವನ್ನು ಬೆಂಗಳೂರಿನ ಹೃದಯಭಾಗ ಮತ್ತು ಹೊರವಲಯದಲ್ಲಿರುವ ನಗರ ಬಡವರು ನೆಲೆನಿಂತ ಸ್ಥಳಗಳಲ್ಲಿ ವಾಸಿಸುವ ಚೌಲ್ಟ್ರಿ ಕಾರ್ಮಿಕರ ಸಮೂಹಗಳೊಂದಿಗೆ ಅವರ ಕೆಲಸದ ಅನುಭವ, ಎದುರಿಸಿದ ಸಮಸ್ಯೆಗಳ ವಿಶ್ಲೇಷಣೆ ಮಾತ್ರವಲ್ಲದೆ, ರಾಜ್ಯ ಸರ್ಕಾರದ ಮುಂದೆ ಅವರು ಮುಂದೂಡ ಬಯಸುತ್ತಿರುವ ಬೇಡಿಕೆಗಳ ವಿಶ್ಲೇಷಣೆಯನ್ನು ಒಳಗೊಂಡಿದೆ. ಸಮಾಜದಲ್ಲಿ, ಅವರು ತಮ್ಮ ಕೆಲಸ ಮತ್ತು ಸ್ಥಾನಮಾನದಲ್ಲಿ ನೋಡಲು ಬಯಸುವ ಬದಲಾವಣೆಗಳನ್ನು ಈ ವರದಿ ಉಲ್ಲೇಖಿಸುತ್ತದೆ. ಈ ಚರ್ಚೆಗಳು ಮತ್ತು ನಿರೂಪಣೆಗಳನ್ನು ಈ ವರದಿಯಲ್ಲಿ ಒಟ್ಟಿಗೆ ಹೆಣೆಯಲಾಗಿದೆ ಮತ್ತು ಅವರ ಕೆಲಸದ ವಿಶಾಲ ಸ್ವರೂಪವನ್ನು ಸಂದರ್ಭೋಚಿತವಾಗಿ ಹೆಣೆಯಲಾಗಿದೆ, ಇದನ್ನು ಅನೌಪಚಾರಿಕ ಕಾರ್ಮಿಕ ಎಂದು ಪರಿಗಣಿಸಲಾಗುತ್ತದೆ, ಅದು ಸ್ತ್ರೀಕರಣವೂ ಆಗಿದೆ – ಇವೆರಡೂ ತಾರತಮ್ಯ ಮತ್ತು ಶೋಷಣೆಯ ಸ್ವರೂಪವನ್ನು ವ್ಯಾಖ್ಯಾನಿಸಿವೆ.

ಮಹಿಳೆಯರ ಮಾತನ್ನು ಆಲಿಸುವ ಮೂಲಕ ಮಹಿಳೆಯರ ದುಡಿಮೆಯ ಮತ್ತೊಂದು ಅಗೋಚರವಾದ ಜಗತ್ತನ್ನು ಅನಾವರಣಗೊಳಿಸಲು ಸಹಾಯ ಮಾಡಿತು, ಈ ಕಾರ್ಮಿಕವಲಯವು ಕಡಿಮೆ ಮೌಲ್ಯಯುತ, ಅಗೋಚರ ಮತ್ತು ಶೋಷಣೆಗೆ ಒಳಗಾಗಿದೆ.

ಆದಾಗ್ಯೂ, ಮಹಿಳೆಯರು ತಾವು ದುಡಿಯುವ ಅವಮಾನಕರ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಪೂರ್ಣ ಸ್ಪಷ್ಟತೆಯನ್ನು ತೋರಿಸಿದರು ಮತ್ತು ತಮ್ಮ ಘನತೆಯನ್ನು ಸ್ಥಾಪಿಸುವ ಮೊದಲ ಹೆಜ್ಜೆಯಾಗಿ ಈ ವಲಯದ ಕಾರ್ಮಿಕರಿಗೆ ಸಾಮಾಜಿಕ ಹಕ್ಕುಗಳು, ಭದ್ರತೆ ಮತ್ತು ರಕ್ಷಣೆಯ ವಿಷಯದಲ್ಲಿ ನಿರ್ದಿಷ್ಟ ಮತ್ತು ತೀಕ್ಷ್ಣವಾದ ಬೇಡಿಕೆಗಳನ್ನು ಸರ್ಕಾರಕ್ಕೆ ಮಾಡುವ ಮೂಲಕ ಕಾರ್ಮಿಕರ ಶ್ರಮ ಮತ್ತು ಅವರ ವ್ಯಕ್ತಿತ್ವದ ದೃಢೀಕರಣಕ್ಕಾಗಿ ಮೊದಲ ಹೆಜ್ಜೆಯನ್ನಿಡುತ್ತಿದ್ದಾರೆ. ಮತ್ತು ಆ ಅರಿವಿನಲ್ಲಿ, ನಾವು ಅವರ ವೈಯಕ್ತಿಕ ಹಾಗೂ ಸಂಘಟಿತ ಸಾಮರ್ಥ್ಯವನ್ನರಿತಿದ್ದೇವೆ. ಕಾರ್ಮಿಕರು ವಾಸ್ತವಿಕತೆಯಲ್ಲಿ ತಮ್ಮ ಜೀವನದಲ್ಲಿ ಬಯಸುವ ಬದಲಾವಣೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗಿದೆ.

# 1

# ಅಧ್ಯಾಯ ಒಂದು: ಅನೌಪಚಾರಿಕ ಕೆಲಸಗಾರರಾಗಿ ಚೌಲ್ಟ್ರಿ ಕಾರ್ಮಿಕರು: ಸಂದರ್ಭೋಚಿತ ವಿಮರ್ಶೆ

## ಅವರ ಕೆಲಸ

### ಹೆಚ್ಚಾಗಿ ಇವರೆಲ್ಲರೂ ಮಹಿಳಾ ಕಾರ್ಮಿಕರು

ಅವರು ಬೆಳಿಗ್ಗೆ ಬೇಗನೆ ಎದ್ದೇಳುತ್ತಾರೆ. ತಮ್ಮ ಮನೆಯ ಕಸಗುಡಿಸಿ, ಸ್ವಚ್ಛಮಾಡಿ; ತರಕಾರಿಗಳನ್ನು ತೊಳೆದು ಸ್ವಚ್ಛಗೊಳಿಸಿ ಮತ್ತು ಕತ್ತರಿಸಿ, ಆಹಾರವನ್ನು ಬೇಯಿಸಿ, ಪಾತ್ರೆಗಳನ್ನು ಸ್ವಚ್ಛಗೊಳಿಸಿ, ಬಟ್ಟೆಗಳನ್ನು ಒಗೆದು, ಮತ್ತು ಅವರ ಎಲ್ಲಾ ಮನೆಕೆಲಸಗಳನ್ನು ಪೂರ್ಣಗೊಳಿಸಿ, ಮನೆಯಲ್ಲಿರುವ ಹಿರಿಯರು ಮತ್ತು ಮಕ್ಕಳನ್ನು ನೋಡಿಕೊಳ್ಳುವುದು ಸೇರಿದಂತೆ, ಅವರು ಹಳ್ಳಿಗಳಲ್ಲಿ ವಾಸಿಸುತ್ತಿದ್ದರೆ ಅವರ ಕೆಲಸವು ದನದ ಕೊಟ್ಟಿಗೆ ಅಥವಾ ಕೋಳಿ ಗೂಡನ್ನು ಸ್ವಚ್ಛಗೊಳಿಸುವುದನ್ನು ಒಳಗೊಂಡಿರುತ್ತದೆ; ಮತ್ತು ದನ ಮತ್ತು ಕುರಿಗಳನ್ನು ಮೇಯಿಸುವುದನ್ನೂ ಒಳಗೊಂಡಿದೆ.

ನಂತರ ಅವರನ್ನು ಸಾಮಾನ್ಯವಾಗಿ ತಮ್ಮ ಸಮುದಾಯದ ಮಹಿಳೆಯಾಗಿರುವ ಸ್ಥಳೀಯ ಗುತ್ತಿಗೆದಾರರು ತಂಡದ ಭಾಗವಾಗಿ ಚೌಲ್ಟ್ರಿ/ಛತ್ರ (ಮದುವೆ ಮಂಟಪ), ಪಾರ್ಟಿ ಹಾಲ್, ಉದ್ಘಾಟನೆ ಮಾಡಬೇಕಾದ ಹೊಸ ಮನೆ ಅಥವಾ ದೇವಸ್ಥಾನ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಸಭೆ ಸಮಾರಂಭಗಳಿಗೆ ಕರೆದೊಯ್ಯುತ್ತಾರೆ. ಇದು ಅವರ ಮನೆ, ಗ್ರಾಮ ಅಥವಾ ನೆಲೆನಿಂತ ಜಾಗಕ್ಕೆ ಹತ್ತಿರವಾಗಿರಬಹುದು. ಇದು ನಗರದ ಹೊರಗಿರಲೂಬಹುದು ಮತ್ತು ಕೆಲವೊಮ್ಮೆ ಇತರೆ ರಾಜ್ಯವೂ ಆಗಿರಬಹುದು.

ಅಲ್ಲಿ ಅವರು ಆ ಸ್ಥಳವನ್ನು ಗುಡಿಸಲು ಮತ್ತು ಸ್ವಚ್ಛಗೊಳಿಸಿ, , ಕುರ್ಚಿಗಳನ್ನು ಸಮರ್ಪಕವಾಗಿ ಜೋಡಿಸಿಟ್ಟು, ತರಕಾರಿಗಳನ್ನು ಕತ್ತರಿಸಲು ಸಹಾಯ ಮಾಡಿ, ಎಲ್ಲಾ ಪಾತ್ರೆಗಳನ್ನು ಸ್ವಚ್ಛಗೊಳಿಸಿ, ಆಹಾರವನ್ನು ಸೇವಿಸಿದ ನಂತರ ಎಲ್ಲಾ ಎಲೆಗಳು / ತಟ್ಟೆಗಳನ್ನು ತೆಗೆದುಹಾಕಿ, ಪಾತ್ರೆಗಳನ್ನು ತೊಳೆದು, ಅಡುಗೆಮನೆಯನ್ನು ಸ್ವಚ್ಛಗೊಳಿಸಿ ಮತ್ತು ಚೌಲ್ಟ್ರಿಯನ್ನು ಸ್ವಚ್ಛಗೊಳಿಸುವರು.

ರಾತ್ರಿ ಒಂದು ಗಂಟೆಗೆ ಮಲಗಿ, ಮತ್ತೆ ನಾಲ್ಕು ಗಂಟೆಗೆಲ್ಲ ಅದೇ ಕೆಲಸಗಳನ್ನು ಮತ್ತೊಮ್ಮೆ ಮಾಡಲು ಏಳಬೇಕು.

ಸಾಮಾನ್ಯವಾಗಿ ಒಂದು ಮದುವೆಯೆಂದರೆ ಎರಡು ದಿನಗಳ ಸಮಾರಂಭ.

ಎರಡನೇ ದಿನ ಸಂಜೆ ಅಥವಾ ರಾತ್ರಿ ವೇಳೆಗೆ ಅವರ ಕೆಲಸವು ಮುಗಿದಿರುತ್ತದೆ. ನಂತರ ಜೀವನೋಪಾಯವೇ ದುರ್ಲಭವಾಗಿರುವಂಥ ಸ್ಲಂನಲ್ಲಿಯೋ, ಸಮೀಪದ ಹಳ್ಳಿಯಲ್ಲಿಯೋ ಇರುವ ತಮ್ಮ ತಮ್ಮ ಮನೆಗಳತ್ತ ಇವರು ಹೆಜ್ಜೆ ಹಾಕಬೇಕು.

ಮತ್ತೆ ಮನೆಯಲ್ಲಿ ಅದೇ ಕೆಲಸಗಳ ಪುನರಾವರ್ತನೆ. ಮತ್ತೆ ಮತ್ತೆ ಎಂದೂ ಮುಗಿಯದ ಕೆಲಸಗಳು. ಯಾರ ಕಣ್ಣಿಗೂ ಕೆಲಸವಾಗಿ ಕಾಣದ, ಅದಕ್ಕೆ ಮೌಲ್ಯವೇ ಇಲ್ಲದ, ಗುರುತೂ ಆಗದ, ಎಷ್ಟೋ ಬಾರಿ ಕಳಂಕಿತವಾಗಿ ಕಾಣುವ ಕೆಲಸಗಳು. ಈ ವರದಿಯನ್ನು ಓದಿದ ನಂತರ ಅದು ಇನ್ನೂ ಹೆಚ್ಚು ಸ್ಪಷ್ಟವಾಗುತ್ತ ಹೋಗುತ್ತದೆ.

## ಇವರು ಯಾರು?

ನಾವು ಈ ವರದಿಯಲ್ಲಿ ಇವರನ್ನು “ಚೌಲ್ಟ್ರಿ ಕಾರ್ಮಿಕರು” ಎಂದು ಕರೆದಿದ್ದೇವೆ. ಅವರ ಮಾತುಗಳಲ್ಲಿ ಅವರ ಬಗ್ಗೆ ಹೆಚ್ಚಿನ ವಿವರಗಳನ್ನು ನಾವು ಕೇಳುತ್ತೇವೆ. ಈ ಅಧ್ಯಾಯದಲ್ಲಿ ನಾವು ಹೆಚ್ಚಾಗಿ ಲಿಂಗತ್ವ ಮತ್ತು ಅನೌಪಚಾರಿಕವಾಗಿ ಅವರು ಮಾಡುವ ಕೆಲಸದ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ಮತ್ತು

ಈ ಎರಡೂ ಆಯಾಮಗಳನ್ನು ಅರ್ಥಮಾಡಿಕೊಳ್ಳಬೇಕು, ಒಂದು ಈ ಕಾರ್ಮಿಕರ ನಿಜವಾದ ಅವಶ್ಯಕತೆಗಳೇನು, ನೀತಿಯಾಗಿ ಇದರ ಗುರುತಿಸುವಿಕೆ ಮತ್ತು ಪರಿಹಾರ ಕಾರ್ಯವಿಧಾನಗಳ ವಿಷಯದಲ್ಲಿ ಅವರ ನಿರ್ದಿಷ್ಟ ಅಗತ್ಯಗಳನ್ನು ಮತ್ತು ಕುಂದುಕೊರತೆ ನಿವಾರಿಸುವುದು ಹೇಗೆ ಎನ್ನುವುದು ಅರ್ಥವಾಗುತ್ತದೆ.

## ಮನೆಗೆಲಸದಂತೆಯೇ!

ಚೌಲ್ಟಿ ಕಾರ್ಮಿಕರ ಕೆಲಸವು "ಮಹಿಳೆಯರ" ಕೆಲಸ ಎಂದು ವರ್ಗೀಕರಿಸಲ್ಪಟ್ಟಿದೆ – ಅದು ಉತ್ಪಾದಕ ಅಥವಾ ಸಂತಾನೋತ್ಪತ್ತಿ – ಸ್ವಂತ ಮನೆ ಮತ್ತು ಇತರೆ ಮನೆಗಳಲ್ಲಿ ಮಾಡುವ ಕೆಲಸದಂತೆಯೇ. ವ್ಯಾಖ್ಯಾನ ಮತ್ತು ಸ್ವಭಾವತಃ ಈ ಕೆಲಸಕ್ಕೆ ಸಂಬಳವಿಲ್ಲ, ಮಾತ್ರವಲ್ಲದೆ ಹೆಚ್ಚಾಗಿ ಅಗೋಚರವಾಗಿ ಉಳಿದಿದೆ, ಕಡಿಮೆ ಮೌಲ್ಯಯುತವಾಗಿದೆ ಮತ್ತು ಗುರುತಿಸಲಾಗಿಲ್ಲ – ವಿತ್ತೀಯವಲ್ಲದ ಪರಿಭಾಷೆಯಲ್ಲಿ. ಇದು ಕುಟುಂಬವನ್ನು ಉಳಿಸಿಕೊಳ್ಳಲು ಮತ್ತು ಕಾಳಜಿ ವಹಿಸಲು ಮಹಿಳೆಯರು ಮಾಡಬೇಕಾದ "ಪ್ರೀತಿಯ ಶ್ರಮ" ಎಂದು ಭಾವಿಸಲಾಗಿದೆ, ಅದು ವಾಸ್ತವವಾಗಿ ನಮ್ಮ ಸಮಾಜದ ಅತ್ಯಂತ ಮೂಲಭೂತ ಆರ್ಥಿಕ ಘಟಕವಾಗಿದೆ. ಆದ್ದರಿಂದ, ಈ ಕೆಲಸದ ವಿಸ್ತರಣೆಯ ಮೂಲಕ, ಇದೇ ರೀತಿಯ ಶ್ರಮವು ಅಡುಗೆ, ಶುಚಿಗೊಳಿಸುವಿಕೆ ಮತ್ತು ಸೇವೆಯ ಸುತ್ತ ಸುತ್ತುತ್ತದೆ ಎಂದು ತೋರುತ್ತದೆ, ಅದು "ಉತ್ಪಾದಕ" ಆಗಿರುವಾಗಲೂ ಮತ್ತು ಮನೆಕೆಲಸ ಮಾಡುವವರು ತಮ್ಮ ಮನೆಗಳನ್ನು ಹೊರತುಪಡಿಸಿ ಇತರ ಮನೆಗಳಲ್ಲಿ ಕೆಲಸ ಮಾಡುತ್ತಾರೆ, ಇದು ಅದೃಶ್ಯ, ಕಡಿಮೆ ಮೌಲ್ಯಯುತ ಮತ್ತು ಗುರುತಿಸಲ್ಪಡುವುದಿಲ್ಲ. ಅದರಲ್ಲೂ ಇಲ್ಲಿ ಕೆಲಸ ಮಾಡುವ ಮಹಿಳೆಯರೆಲ್ಲ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದೆ ಉಳಿದಿರುವಂಥ ಸಮುದಾಯಗಳಿಂದ ಬಂದವರಾದುದರಿಂದ ಆ ಕೆಲಸಗಳು ಇನ್ನೂ ಮರೆಯೊಳಗೇ ಉಳಿದುಬಿಡುತ್ತದೆ. ಚೌಲ್ಟಿ ಕಾರ್ಮಿಕರನ್ನು ಗೃಹ ಕಾರ್ಮಿಕರ ಒಂದು ಭಾಗ ಅಥವಾ ಇವರನ್ನು ಸ್ವ ಉದ್ಯೋಗಿ ಗೃಹೋದ್ಯೋಗಿಗಳೆನ್ನಬಹುದು.

ಗೃಹ ಉದ್ಯೋಗವು ಹೆಚ್ಚಾಗಿ ಮಹಿಳೆಯರೇ ಮಾಡುವ ಉದ್ಯೋಗವಾದ್ದರಿಂದ ಅದಕ್ಕೆ ಮನೆಯೊಳಗಿನ ಕೆಲಸದಂತೆ ಲಿಂಗಾಧಾರಿತ ತಾರತಮ್ಯವು ಸೇರಿಕೊಂಡೇ ಇರುತ್ತದೆ. ಅದಕ್ಕೆ ಸಂಬಳವಿಲ್ಲ, ಮನೆಗೆಲಸಕ್ಕೆ ಬೆಲೆಯಿಲ್ಲ, ಅದೇ ರೀತಿಯ ಕೆಲಸವನ್ನು ಬೇರೆ ಮನೆಯಲ್ಲಿ ಅಥವಾ ಚೌಲ್ಟಿಯಲ್ಲಿ ಮಾಡಿದಾಗಲೂ ಕೂಡ ಕೀಳು ಕೆಲಸ ಅಥವಾ ಗುರುತು ಇಲ್ಲದ ಕೆಲಸವೆಂದೇ ಪರಿಗಣಿತವಾಗುತ್ತದೆ. ಅದರ ಜೊತೆಗೆ ಕೆಲಸ ಮಾಡುವ ವ್ಯಕ್ತಿಯ ವಯಸ್ಸು, ಜಾತಿ, ಕುಲ ಮತ್ತು ನಾಗರಿಕತ್ವ ಆ ಮೌಲ್ಯಕ್ಕೆ ಇನ್ನಷ್ಟು ತನ್ನ ಭಾರವನ್ನು ಹೊರಿಸುತ್ತದೆ.

ಲಿಂಗ, ಜಾತಿ, ವರ್ಗ ಮತ್ತು ಜನಾಂಗೀಯತೆಯು ಪಿತೃಪ್ರಧಾನತೆಯ ಪಿರಮಿಡ್‌ನಲ್ಲಿ ಕೆಳಭಾಗದಲ್ಲಿ ಕೆಲಸ ಮಾಡುವವರು ಈ ಕೆಲಸದ ಸ್ಥಳದ ಸ್ವರೂಪದಿಂದಾಗಿ ಶ್ರೇಣಿಯಲ್ಲಿನ ಉನ್ನತ ವರ್ಗದವರಿಂದ ಲೈಂಗಿಕ ಕಿರುಕುಳ ಮತ್ತು ಹಿಂಸಾಚಾರಕ್ಕೆ ಹೆಚ್ಚು ಒಳಗಾಗುತ್ತಾರೆಂಬುದು ಸತ್ಯ. ಅದು ಸಮಾಜದ ಅತ್ಯಂತ ಚಿಕ್ಕ ಪಿತೃಪ್ರಧಾನ ಘಟಕವೂ ಆಗಿದೆ. ಐತಿಹಾಸಿಕವಾಗಿ ಮಹಿಳೆಯರು, ಹೆಂಡತಿಯಾಗಿ, ತಾಯಿಯಾಗಿ ಮತ್ತು ಹೆಣ್ಣು ಮಕ್ಕಳು ಅಥವಾ ಗುಲಾಮರು, ಜೀತದಾಳುಗಳಾಗಿಯೂ ಮತ್ತು ಸಾಲಬಂಧಿಯಾಗಿರುವುದು, ಮಹಿಳೆಯರ ಪಾವತಿಸದ ಸಂತಾನೋತ್ಪತ್ತಿ ಮತ್ತು ಲೈಂಗಿಕ ದುಡಿಮೆಯೊಂದಿಗೆ ಪಾವತಿಸಿದ ಮನೆಕೆಲಸದ ನಿರಂತರತೆಯನ್ನು ಗಮನಿಸಿದರೆ ಇದು ಆಶ್ಚರ್ಯವೇನಿಲ್ಲ. ಊಳಿಗಮಾನ್ಯ ಪಿತೃಪ್ರಧಾನತೆಯು ಗೃಹಕಾರ್ಮಿಕರಾಗಿ ಮಹಿಳೆಯರು ಮಾಡುವ ಕೆಲಸವನ್ನು ತಿಳಿಸುವುದನ್ನು ಮುಂದುವರಿಸುತ್ತದೆ, ಅಲ್ಲಿ ಲೈಂಗಿಕ ಸೇವೆಗಳು ಕುಟುಂಬ ಮತ್ತು ಕುಟುಂಬವನ್ನು ನಿರ್ವಹಿಸಲು ಮಹಿಳೆ ಮಾಡಬೇಕಾದ ಯಾವುದೇ ಕೆಲಸದ ಪ್ಯಾಕೇಜ್ ಒಪ್ಪಂದದ ಭಾಗವಾಗಿರಬೇಕು. ಮತ್ತು ಅವರ ಕೆಲಸದ ನಿರಂತರ ಅಪಮೌಲ್ಯೀಕರಣ ಮತ್ತು ಲೈಂಗಿಕ ಕಿರುಕುಳ ಮತ್ತು ಹಿಂಸಾಚಾರಕ್ಕೆ ಗುರಿಯಾಗುವುದು ಸಾಮಾನ್ಯವಾಗಿವೆ, ಉಳಿದಿರುವ ಸಾಮಾನ್ಯ ವಿಷಯವೆಂದರೆ ಮನೆ ಅಥವಾ ಮನೆಯೊಳಗೆ ಯಜಮಾನ ಅಥವಾ ಪಿತೃಪ್ರಧಾನ ಪತಿ, ಜಮೀನುದಾರ ಅಥವಾ ಉದ್ಯೋಗದಾತರಾಗಿರುತ್ತಾರೆ. ಈ ವರದಿಯಲ್ಲಿಯೂ ಕೂಡ ಮಹಿಳೆಯರು ತಮ್ಮ ಮೇಲೆ ಅಡಿಗೆಮಾಡುವವನಿಂದ, ಆತನೂ ಕೂಡ ಇವರಂತೆಯೇ ಕೆಲಸಕ್ಕೆ ಬಂದಿರುವವನಾಗಿದ್ದರೂ ಚೌಲ್ಟಿಯೊಳಗೆ ಎಲ್ಲಾ ಕೆಲಸದಾಳುಗಳ ಮುಖ್ಯಸ್ಥನೆಂದು ಪರಿಗಣಿತನಾಗಿ, ಕೆಲಸದ

ಸಮಯದಲ್ಲಿ ಸುಲಭವಾಗಿ ಸಿಗುವ ಮಹಿಳೆಯರನ್ನು ಲೈಂಗಿಕವಾಗಿ ಬಳಸಿಕೊಳ್ಳುವವನಾಗಿ, ಅವರಿಂದ ಆಗುವ ಲೈಂಗಿಕ ಕಿರುಕುಳಗಳನ್ನು ಈ ಕಾರ್ಮಿಕರು ಹೇಳಿದ್ದಾರೆ.

2011ರಲ್ಲಿ ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಸೇಷನ್ ತನ್ನ ಸಮಾವೇಶದಲ್ಲಿ ಹೇಳಿರುವ 'ಮನೆಕೆಲಸ ಕೂಡ ಘನತೆಯುಕ್ತವಾದ ಕೆಲಸ'ಎಂಬ ಮಾತು ಬಹಳ ಮುಖ್ಯವಾಗುತ್ತದೆ. 'ಕೆಲಸದವಳು'ಎಂಬ ಶಬ್ದ ಮರೆಗೆ ಹೋಗಿ ಕಾರ್ಮಿಕಳು ಎಂದು ನೋಡುವಷ್ಟು ಮಾನಸಿಕತೆಯನ್ನು ಬದಲು ಮಾಡುವಲ್ಲಿ ಅದು ಸಹಾಯ ಮಾಡುತ್ತದೆ. ಮಹಿಳೆಯರಲ್ಲೂ ಕೂಡ ತಮ್ಮ ಕೆಲಸವೇನೂ ಕೀಳು ಮಟ್ಟಾದ್ದಲ್ಲ ಎಂಬ ಕೀಳರಿಮೆಯನ್ನು ಹೋಗಲಾಡಿಸಿ ಕಾನೂನಿನ ಚೌಕಟ್ಟಿನೊಳಗೆ ನುಸುಳಲು ಸಹಾಯ ಮಾಡಬಹುದು.[1]

ಸಾಕಷ್ಟು ಸಂಘಟನೆಗಳು ಗೃಹಕೃತ್ಯದೊಳಗಿರುವಂತಹ ಮಹಿಳೆಯರನ್ನು ಒಗ್ಗೂಡಿಸಿ ಸಂಘಟನೆಗಳನ್ನು ಮಾಡಿ ಸತತವಾಗಿ ಹೋರಾಟ ಮತ್ತು ವಕಾಲತ್ತುಗಳನ್ನು ನಡೆಸಿರುವುದರಿಂದಲೇ ಗೃಹ ಕಾರ್ಮಿಕರನ್ನು 'ಕಾರ್ಮಿಕರು' ಎಂದು ಕರೆಯಲು ಸಾಧ್ಯವಾಗಿದೆ. ಗೃಹ ಕಾರ್ಮಿಕರು ತಮಗೆ ಬರಬೇಕಾಗಿರುವ ಸವಲತ್ತುಗಳನ್ನು ಗಟ್ಟಿಯಾಗಿ ಕೇಳುವಂತಹ, ಕುಟುಂಬದೊಳಗೇ ಇರಬಹುದು ಅಥವಾ ಕೆಲಸ ಮಾಡುತ್ತಿರುವ ಮನೆಯೊಳಗೆ ನಡೆಯಬಹುದಾದ ಲೈಂಗಿಕ ಕಿರುಕುಳಗಳ ವಿರುದ್ಧವೂ ಧ್ವನಿ ಎತ್ತಲು ಸಾಧ್ಯವಾಗುತ್ತಿದೆ.

ಬಹುಶಃ ಚೌಲ್ಟಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ಕೂಡ ಅವರ ಕೆಲಸವು ಘನತೆಯಿಂದ ಕೂಡಿದ್ದು, ಅದನ್ನು ಕಾರ್ಮಿಕರೆಂಬ ಚೌಕಟ್ಟಿನೊಳಗಿಟ್ಟು ಲೈಂಗಿಕ ಶೋಷಣೆಯ ವಿರುದ್ಧ ಮಾತನಾಡಲಿಕ್ಕೂ ಅದೇ ರೀತಿಯ ಚಳುವಳಿಯ ಅವಶ್ಯಕತೆ ಇದೆ.

## ಲಿಂಗ ತಾರತಮ್ಯ ಹೊತ್ತ ಕೆಲಸಗಾರರು

ಚೌಲ್ಟಿಯಲ್ಲಿ ಕೆಲಸ ಮಾಡುವ ಜನರೆಲ್ಲ ಕುಶಲ ಕರ್ಮಿಗಳು ಅಥವಾ ಕೃಷಿಯೇತರ ಕ್ಷೇತ್ರದ ಕೂಲಿಕಾರರಿದ್ದಂತೆ ಅನಿಯಮಿತವಾಗಿ ಕೆಲಸ ಪಡೆಯುವ ಅಸಂಘಟಿತ ಕ್ಷೇತ್ರದ ಅನೌಪಚಾರಿ ಕೂಲಿಕಾರರೆನಿಸುತ್ತಾರೆ ಆದರೆ ಸ್ವ ಉದ್ಯೋಗದವರಲ್ಲ. ಸೂಕ್ಷ್ಮವಾಗಿ ನೋಡಿದಾಗಲಷ್ಟೇ ಈ ಅನೌಪಚಾರಿಕ ಕೂಲಿಕಾರ ಕೆಲಸದ ಲಿಂಗ ತಾರತಮ್ಯ ಗೊತ್ತಾಗುತ್ತದೆ. ನಾವು ಅದನ್ನು ಸ್ವಲ್ಪ ಹೆಚ್ಚು ಹತ್ತಿರದಿಂದ ನೋಡಿದಾಗ. ಭಾರತದ ಅನೌಪಚಾರಿಕ ಆರ್ಥಿಕತೆಯಲ್ಲಿ ಅಂದಾಜು 9.6 ಕೋಟಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ ಎಂದು ಇನಿಶಿಯೇಟಿವ್ ಫಾರ್ ವಾಟ್ ವರ್ಕ್ಸ್ ಟು ಅಡ್ವಾನ್ಸ್ ವುಮೆನ್ ಅಂಡ್ ಗರ್ಲ್ಸ್ ಇನ್ ದಿ ಇಕಾನಮಿ, ಲಿಂಗ ಸಂಶೋಧನೆ ಮತ್ತು ವಕಾಲತ್ತು ಸಂಸ್ಥೆ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸ್ಟಡೀಸ್ ಟ್ರಸ್ಟ್ ವರದಿಯು ಸ್ಪಷ್ಟಪಡಿಸಿದೆ. ಭಾರತದಲ್ಲಿ ಉತ್ಪಾದನೆ, ಸಾರಿಗೆ, ಮುಂತಾದ ಎಲ್ಲಾ ಕೈಗಾರಿಕೆಗಳನ್ನೂ ಒಳಗೊಂಡರೂ ಔಪಚಾರಿಕ ಕ್ಷೇತ್ರಗಳಲ್ಲಿ ಮಹಿಳೆಯರ ಸಂಖ್ಯೆ ಶೇಕಡಾ 23%ರಷ್ಟ ನ್ನು ಮೀರುವುದಿಲ್ಲ. ನಿಯಮಿತವಾಗಿ ಸಂಬಳ ಪಡೆಯುವ, ವೃತ್ತಿನಿರತ ಮರು ಸಂಘಟಿತ ವ್ಯಾಪಾರೋದ್ದಿಮೆಗಳು ನೇಮಿಸಿಕೊಳ್ಳುವಲ್ಲೆಲ್ಲ 85% ಗಂಡಸರೇ ತುಂಬಿದ್ದಾರೆ. ಹೀಗಾಗಿ ಅಸಂಘಟಿತ ಅನೌಪಚಾರಿಕ ಕ್ಷೇತ್ರವು 90% ಮಹಿಳೆಯರಿಂದಲೇ ತುಂಬಿದೆ. ಹೀಗಾಗಿ ಈ ಕ್ಷೇತ್ರವು ಅತ್ಯಂತ ಅವಗಣನೆಗೆ ಒಳಗಾಗಿದ್ದು ಅಲ್ಲಿ ಯಾವುದೇ ಕಟ್ಟುನಿಟ್ಟಿನ ನಿಯಮಗಳಿಲ್ಲ, ಕೂಲಿಕಾರರ ಹಕ್ಕುಗಳೆಂಬುದು ಇಲ್ಲ, ಕೂಲಿಕಾರರ ಕೆಲಸಕ್ಕೆ ಬೆಲೆಯಿಲ್ಲ, ಸಾಮಾಜಿಕ ಭದ್ರತೆಯೆಂಬುದು ಕನಿಷ್ಟ ಅಥವಾ ಇಲ್ಲವೇ ಇಲ್ಲವೆನ್ನಿಸುವಷ್ಟು, ಔಪಚಾರಿಕ ರಂಗದ ಕಾರ್ಮಿಕರಿಗೆ ಸಿಗುವ ಕಾರ್ಮಿಕ ಕಾನೂನುಗಳು, ಪಿಂಚಣಿ ಸೌಲಭ್ಯಗಳ ರಕ್ಷಣೆಯೂ ಇಲ್ಲ, ಎಷ್ಟೋ ಕಡೆ ಅವರು ಮಾಡುವ ಕೆಲಸವನ್ನು ಅದೆಷ್ಟು ಕೀಳು ಮಟ್ಟದ್ದೆಂದು ತಿಳಿಯಲಾಗುತ್ತದೆಂದರೆ ಅವರಿಗೆ 'ಕಾರ್ಮಿಕ' ಎಂದು ಕರೆಯುವುದಕ್ಕೂ ಹಿಂಜರಿಯುತ್ತಾರೆ. ಮತ್ತೆ ಅವರ ಕೆಲಸವು ಕೂಡ ಯಾವಾಗೆಂಬುದು ನಿರ್ಧರಿತವಿಲ್ಲ.[2]

1. https://www.actionaidindia.org/publications/ensuring-decent-work-and-dignity/
2. https://wcd.nic.in/sites/default/files/FINAL%20DRAFT%20REPORT_0.pdf

ಕಾರ್ಮಿಕರಿಗೆ ಚೌಕಾಶಿ ಮಾಡುವ ಹಕ್ಕಿಲ್ಲ, ತಮ್ಮ ಕೆಲಸದ ಮೌಲ್ಯವನ್ನು ಅವರು ನಿರ್ಧರಿಸುವಂತಿಲ್ಲ, ಕೆಲಸದ ನಿರ್ದಿಷ್ಟ ವೇಳೆಯೆಂಬುದು ಇಲ್ಲದಿರುವುದರಿಂದ ಒಗ್ಗೂಡಲು, ಸಂಘಟಿತರಾಗಲು ಅವಕಾಶವೇ ಇಲ್ಲ. ಗಳಿಕೆಯ ಮೇಲೆ ನಿಯಂತ್ರಣವಿಲ್ಲ. ಉದ್ಯೋಗ ಮತ್ತು ಮಗುವಿನ ಆರೈಕೆ, ಮನೆಗೆಲಸ ಎಲ್ಲವನ್ನೂ ಹೊಂದಿಸಿಕೊಂಡು ನಿಭಾಯಿಸಿಕೊಳ್ಳಬೇಕು. ಸಂಸ್ಥೆಗಳಿಂದ ಸಾಲ ಸೌಲಭ್ಯ ಮತ್ತು ತರಬೇತಿಗಳು, ಸಾಧನಗಳೆಲ್ಲದರಿಂದ ವಂಚಿತರು.

ಈ ಎಲ್ಲ ಕಾರಣಗಳಿಂದ ಚೌಲ್ಟಿ ಕಾರ್ಮಿಕರನ್ನೊಳಗೊಂಡ ಅಸಂಘಟಿತ ಮತ್ತು ಅನೌಪಚಾರಿಕ ಉದ್ಯೋಗ ರಂಗವು ಮಹಿಳಾ ರಂಗವಾಗಿದೆ, ಇಲ್ಲಿನ ಕೆಲಸಗಳೆಲ್ಲ 'ಹೆಣ್ಣುಮಕ್ಕಳು ಮಾಡುವ ಕೆಲಸಗಳೆಂದು' ಲಿಂಗಾಧಾರಿತ ಕೆಲಸಗಳಾಗಿ ಗುರುತುಗೊಂಡವು. ಮನೆಯಲ್ಲಿ ಮಾಡುವ 'ಅನುತ್ಪಾದಿತ ಕೆಲಸಕ್ಕೂ' ಹೊರಗೆ ಅಂಚಿಗೆ ತಳ್ಳಲ್ಪಟ್ಟಿರುವ ಸಮುದಾಯಗಳ

ಮಹಿಳೆಯರು ಚೌಲ್ಟಿಯಲ್ಲಿ, ಗೃಹ ಕಾರ್ಮಿಕರಾಗಿ ಮಾಡುವ'ಉತ್ಪಾದಕ' ಕೆಲಸಕ್ಕೂ ಬಹಳವೇನೂ ವ್ಯತ್ಯಾಸವಿಲ್ಲ. ಆರ್ಥಿಕತೆಯ ನಗಣ್ಯ ನಾಣ್ಯದ ಎರಡು ಮುಖಗಳಷ್ಟೇ ಅವು.

## ಆರ್ಥಿಕತೆಯು ಔಪಚಾರಿಕವೆನಿಸಿ, ಅದರ ಕೆಲಸವು ಅನೌಪಚಾರಿಕವೆನಿಸಿದಾಗ

ಎನ್.ಎಸ್.ಎಸ್.ಓ. ವರದಿಗಳು ಹೇಳುವ ಪ್ರಕಾರ ಚೌಲ್ಟಿ ಕೆಲಸಗಾರರು ಭಾಗವಾಗಿರುವ ಅನೌಪಚಾರಿಕ ಉದ್ಯೋಗ ರಂಗವು 2000 ನೇ ಇಸವಿಯ ನಂತರ ಬಲು ವೇಗದಿಂದ ಬೆಳೆಯುತ್ತಿದೆ. ದೇಶದ ಕಾರ್ಮಿಕ ಮಾರುಕಟ್ಟೆಯಲ್ಲಿ ಬಹಳ ಬದಲಾವಣೆಗಳು ಆಗಿ ಅದೇ ವೇಳೆಗೆ ಸಂಘಟಿತವಲಯದ ಉದ್ಯೋಗ ಪ್ರಮಾಣವು ಕಡಿಮೆಯಾಗಿ ಕಾರ್ಮಿಕ ಸಂಘಟನೆಗಳು ಸತ್ವಹೀನವಾಗಿ ಒಗ್ಗಟ್ಟಾಗಿ ಕೇಳುವಂಥ ಬಲವನ್ನೇ ಕಳೆದುಕೊಂಡ, ಸಾಮಾಜಿಕ ಭದ್ರತೆಯೆನ್ನುವುದು ಹೆಚ್ಚುಕಡಿಮೆ ಸಂಪೂರ್ಣ ನೆಲಕಚ್ಚಿದ, ಕೆಲಸದ ಭದ್ರತೆ, ಕೆಲಸದಲ್ಲಿನ ನಿಯಮಾವಳಿಗಳು ಮುಂತಾದ ಉದ್ಯೋಗದ ಗುಣಮಟ್ಟವು ಕಡಿಮೆಯಾಗಿ ಬೆಳೆಯುತ್ತಿರುವ ಜಾಗತೀಕರಣವನ್ನು ಕಂಡ ದಶಕಗಳಿವು. ಇವೆಲ್ಲವುಗಳ ಸೂಕ್ಷ್ಮ ವಿಶ್ಲೇಷಣೆಯನ್ನು ಮಾಡಿ ನೋಡಿದಾಗ ಒಟ್ಟಾರೆಯಾಗಿ ಕಾರ್ಮಿಕ ಮಾರುಕಟ್ಟೆಯು ಸಡಿಲಗೊಂಡು, ಅನೌಪಚಾರಿಕಗೊಂಡಿದ್ದು ಈ ಎಲ್ಲ ಜಾಗತೀಕರಣದ ಪ್ರಕ್ರಿಯೆಗಳ ಕೇಂದ್ರಬಿಂದುವಾಗಿದ್ದು, ಅದರಲ್ಲೂ ಲಿಂಗತ್ವದ ಉದ್ಯೋಗಗಳ ಮೇಲೆ ಬಹಳ ಪರಿಣಾಮಗಳಾಗಿವೆ, ಹಾಗೆಯೇ ಸಾಮಾನ್ಯ/ ಸಂಬಳದ ಉದ್ಯೋಗಗಳಲ್ಲಿ ಕೂಡ ಲಿಂಗತ್ವದ ಪರಿಣಾಮವು ಎದ್ದು ಕಾಣುತ್ತದೆ.[3]

ಗ್ಲೋಬಲ್ ಸಿಟಿಗಳು ಎನಿಸಿಕೊಳ್ಳುತ್ತಿರುವ, ಹಾಗೆಂದು ಪ್ರಚಾರ ಪಡೆಯುತ್ತಿರುವ ಭಾರತದ ಬಹುದೊಡ್ಡ, ಆಧುನಿಕ ಶಹರಗಳಲ್ಲಿಯೂ ಕೂಡ ಲಕ್ಷಾಂತರ ಜನರು ತಮ್ಮ ನಿತ್ಯದ ಊಟಕ್ಕೆ ಮೈಬಗ್ಗಿಸಿ ದುಡಿದೇ ಗಳಿಸಿಕೊಳ್ಳಬೇಕಾಗಿದೆ. ಅವರನ್ನು ಕೆಲಸಕ್ಕಿಟ್ಟುಕೊಂಡವರ ಶ್ರೀಮಂತಿಕೆ ಹೆಚ್ಚಿರಬಹುದು, ಆದರೆ ಅವರ ಕೆಲಸಗಾರರ ಗಳಿಕೆಯಲ್ಲಿ ಮಾತ್ರ ಏರಿಕೆ ಕಂಡಿಲ್ಲ. ಏರುತ್ತಿರುವ ಬೆಲೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಕಳೆದೆರಡೂವರೆ ದಶಕಗಳಲ್ಲಿ ಜನರ ಗಳಿಕೆಯು ತೀರಾ ಕೆಳಕ್ಕೆ ಬಿದ್ದಿದ್ದು, ಜನರು ತೀವ್ರ ಬಡತನಕ್ಕೆ ಕುಸಿದಿದ್ದಾರೆ. ಭಾರತದ ಆರ್ಥಿಕತೆಯ ಬೆಳವಣಿಗೆಯು ವಿರೋಧಾಭಾಸದಿಂದಲೇ ಕೂಡಿದ್ದು, ಒಂದೆಡೆ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿರುವುದು ಕಂಡುಬಂದಾಗಲೂ ಸಹ ಅದು ಹೆಚ್ಚು ಜನರಿಗೆ ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಸೋತಿದೆ. ಇದು ಕಾರ್ಮಿಕ ವರ್ಗದ ಬಹುದೊಡ್ಡ ಭಾಗಕ್ಕೆ ಮಾರುಕಟ್ಟೆಯ ಏರಿಳಿತಗಳಿಗೆ ಮೈಯೊಡ್ಡಿಯೂ ಸ್ವಉದ್ಯೋಗದತ್ತ ಹೊರಳುವಂತೆ ಮಾಡಿಟ್ಟಿದೆ.

3. Vikaspedia-Unorganised Labour force in India) Working and living conditions of workers in the Unorganised Sector – A Review of Literature....www.researchgate.net

2018ರ ಐ.ಎಲ್.ಓ. ವರದಿಯ ಪ್ರಕಾರ ಅತಿಹೆಚ್ಚಿನ ಅಭಿವೃದ್ಧಿಶೀಲ ದೇಶಗಳಲ್ಲಿ ಅನೌಪಚಾರಿಕ ಕಾರ್ಮಿಕ ರಂಗವು ಬಡತನದತ್ತ ನೂಕಲ್ಪಟ್ಟಿದ್ದು ಮಾತ್ರವಲ್ಲದೆ, ಅದರ ಇನ್ನೂ ಕೆಲವು ಗುರುತುಗಳಿವೆ:

- » ಮಹಿಳಾ ಅನೌಪಚಾರಿಕ ಕೆಲಸಗಾರರು ಪುರುಷ ಅನೌಪಚಾರಿಕ ಕೆಲಸಗಾರರಿಗಿಂತಲೂ ಹೆಚ್ಚು ಬಡವರಾಗಿದ್ದಾರೆ.
- » ಹೆಚ್ಚು ವಯಸ್ಸಾದ ಮಹಿಳೆಯರನ್ನು ಕೆಲಸಕ್ಕೆ ಸೇರಿಸಿಕೊಳ್ಳುವಾಗ, ಅದೇ ಕೆಲಸಕ್ಕೆ ಕಡಿಮೆ ವಯಸ್ಸಿನ ಮಹಿಳೆಯರನ್ನು ಸೇರಿಸಿಕೊಳ್ಳುವುದಕ್ಕಿಂತ ಹೆಚ್ಚು ಅನೌಪಚಾರಿಕವಾಗಿರುತ್ತದೆ.
- » ಹೆಂಗಸರಿರಲಿ, ಗಂಡಸರಿರಲಿ, ಇತರೆ ಜಾತಿಗಳವರಿಗಿಂತಲೂ ಪರಿಶಿಷ್ಟ ಜಾತಿಯ ಜನರು ಅನೌಪಚಾರಿಕ ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚು ಇರುತ್ತಾರೆ.
- » ಉಳಿದ ಜಾತಿ ಧರ್ಮಗಳ ಮಹಿಳೆಯರಿಗೆ ಹೋಲಿಸಿದರೆ ಮುಸ್ಲಿಂ ಮಹಿಳೆಯರೇ ಹೆಚ್ಚು ಅನೌಪಚಾರಿಕ ಉದ್ಯೋಗ ಕ್ಷೇತ್ರದಲ್ಲಿದ್ದಾರೆ. ಮುಸ್ಲಿಮರಲ್ಲಿ ಹತ್ತಕ್ಕೆ ಒಂಬತ್ತು ಕೆಲಸಗಾರರು ಅನೌಪಚಾರಿಕ ಆರ್ಥಿಕ ರಂಗದಲ್ಲಿಯೇ ಇದ್ದಾರೆ.[4]

ಈ ಎಲ್ಲಾ ವಿವರಗಳನ್ನು ಗಮನಿಸಿದರೆ, ಅತಿ ಹೆಚ್ಚು ಬಡತನಕ್ಕೆ ತಳ್ಳಲ್ಪಡುವ ಜನರಲ್ಲಿ ಪರಿಶಿಷ್ಟ ಜಾತಿ, ಜನಾಂಗದವರು, ಹಿಂದುಳಿದ ಧರ್ಮದವರು ಮತ್ತು ಮಹಿಳೆಯರೇ ಎನ್ನುವುದು ಬಹಳ ಸ್ಪಷ್ಟವಾಗಿ ನಮಗೆ ಕಾಣುತ್ತದೆ. ಬಡತನವೆನ್ನುವುದು ಜಾತಿ, ವರ್ಗ ಮತ್ತು ಧರ್ಮವನ್ನು ಆರಿಸಿಕೊಂಡು ಹೋಗುವುದು ಬಹಳವಾಗಿ ಎದ್ದು ಕಾಣುತ್ತದೆ.

ಗಿಞಭೆಠಿಜಜುಚಿ–ಗಟಿಂಡಿಂಚಿಟ್ಥಿಜಜ ಐಚಿಛಂಣಡಿ ಜಿಂಡಿಛಿಜ ುಟಿ ಖಟಿಜುಚಿ) ಘಾಂಡಿಞುಟಿಂ ಚಿಟಿಜ ಟುತುಟಿಂ ಛಿಂಟಿಜುಣುಂಛಿ ಂಜಿ ತಿಂಡಿಞಜಢಿ ುಟಿ ಙುಜ ಗಟಿಂಡಿಂಚಿಟ್ಥಿಜಜ ಖಜಛಿಣಂಡಿ–––––ಂ ಖಜತುಜತಿ ಂಜಿ ಋಣಜಡಿಚಿಣಾಡಿಜ .ತಿತಿತಿ.ಡಿಥಜಚಿಡಿಛಿಂಚಿಣಜ.ಟಿಜಣ

## ಚೌಲ್ತಿ ಕಾರ್ಮಿಕರಿಗೆ ಅನಿಶ್ಚಿತ ಕಾನೂನು ಚೌಕಟ್ಟು

ಇದು ಲಿಂಗತ್ವ ಮತ್ತು ಅನೌಪಚಾರಿಕವಾಗಿರುವುದರ ಹೊರತಾಗಿ ನಾವು ಚೌಲ್ತಿ ಕೆಲಸದ "ಕಾನೂನು" ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕಾದರೆ ಅದನ್ನು ಮೂಲಭೂತ ಅರ್ಥದಲ್ಲಿ ಗುತ್ತಿಗೆ ಎಂದು ಪರಿಗಣಿಸಬಹುದು. ಆದಾಗ್ಯೂ ಈ ಅಧ್ಯಯನದಲ್ಲಿ ಕಂಡುಕೊಂಡಂತೆ ಈ "ಒಪ್ಪಂದದ" ಸಂಬಂಧದಲ್ಲಿರುವ ಕೆಲಸದಲ್ಲಿ ಒಬ್ಬ ಉದ್ಯೋಗದಾತ ಮತ್ತು ಉದ್ಯೋಗಿ ಎಂಬ ಸ್ಪಷ್ಟ ಸಂಬಂಧವೇ ಇಲ್ಲಿ ಕಾಣುವುದಿಲ್ಲ.[5]

ಇದಲ್ಲದೆ ಜಾಗತೀಕರಣಗೊಂಡ ಆರ್ಥಿಕತೆಯಲ್ಲಿ ಹೆಚ್ಚುತ್ತಿರುವ ಅಸಂಘಟಿತ ವಲಯದಲ್ಲಿನ ಗುತ್ತಿಗೆ ಕಾರ್ಮಿಕರ ಸಂದರ್ಭದಲ್ಲಿಯೂ ಸಹ ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳು ಔಪಚಾರಿಕ ವಲಯದ ಕಾರ್ಮಿಕರಿಗೆ ಸಮಾನವಾದ ವೇತನ ಮತ್ತು ಕೆಲಸದ ಪರಿಸ್ಥಿತಿಗಳನ್ನು ಅಸಂಘಟಿತ ವಲಯದ ಕಾರ್ಮಿಕರಿಗೆ ಒದಗಿಸುವುದಿಲ್ಲ. ಈ ಕಾರ್ಮಿಕರಿಗೆ ಔಪಚಾರಿಕ ಕೈಗಾರಿಕಾ ಸಂಬಂಧಗಳ ಯಂತ್ರೋಪಕರಣಗಳ ಸಾಧನವಿಲ್ಲ. ಕಾರ್ಮಿಕರ ಕುಂದುಕೊರತೆಗಳ ನಿವಾರಣೆಗೆ ಯಾವುದೇ ಸಾಮೂಹಿಕ ಅಥವಾ ವೈಯಕ್ತಿಕ ಮಟ್ಟದಲ್ಲಿ ಪ್ರಯತ್ನಗಳನ್ನು ಉದ್ಯೋಗದಾತರು ನಿರಾಕರಿಸುತ್ತಾರೆ. ಇದು ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕಾ ವಲಯದಲ್ಲಿ ಸ್ಫೋಟಕ ಸಂಘರ್ಷಗಳಿಗೆ ಕಾರಣವಾಗಿದೆ. ಇದು ಕಾರ್ಮಿಕರ ಸಂಘಟನಾ ಸ್ವಾತಂತ್ರ್ಯ ಮತ್ತು ಸಾಮೂಹಿಕ ಚೌಕಾಸಿಯ

4. https://www.indiaspend.com/uploads/2021/03/26/file_upload-446784.pdf
5. https://scroll.in/article/990984/in-indias-informal-economy-crores-of-women-face-gender-bias-and-insecurity

ಹಕ್ಕಿನ ಮೇಲೆ ಪರಿಣಾಮ ಬೀರಿದೆ ಮತ್ತು ಗುತ್ತಿಗೆ ಕಾರ್ಮಿಕರಿಗೆ ಕೆಲಸದ ಸ್ಥಳದಲ್ಲಿ ನಿರಂತರ ತಾರತಮ್ಯಕ್ಕೆ ಕಾರಣವಾಗಿದೆ. ಉದಾಹರಣೆಗೆ ಗೃಹ ಕಾರ್ಮಿಕರಂತೆ, ಅವರು ಅನೇಕ ಮನೆಗಳಲ್ಲಿ ಭಿನ್ನ ಭಿನ್ನ ಮೇಲ್ವಿಚಾರಣೆ ಕೂಡ ಇಲ್ಲದಂತಹ ಜಾಗಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಒಟ್ಟಿಗೆ ಬರಲು, ಸಂಘಟಿತರಾಗಲು ಆಸ್ಪದವಿಲ್ಲದೆ, ಅದೊಂದು ಅನೌಪಚಾರಿಕ ಅಥವಾ ಗುತ್ತಿಗೆಯಾಧಾರಿತ ಕಾರ್ಮಿಕರ ಗುಂಪು ಎಂದು ಗುರುತಿಸಲೂ ಅವಕಾಶವಿಲ್ಲದಂತಹ ಸಂಪೂರ್ಣ ಅಸ್ಥಿತ್ವವೇ ಇಲ್ಲದಂತಹ ಕಾರ್ಮಿಕರ ಗುಂಪಾಗಿದೆ.

ಚೌಲ್ಟ್ರಿ ಕಾರ್ಮಿಕರು, ಮನೆಗೆಲಸದವರು, ಗೃಹಾಧಾರಿತ ಕಾರ್ಮಿಕರು, ಸಣ್ಣ ಸ್ವೀಟ್ ಶಾಪ್‌ಗಳಲ್ಲಿ ಕೆಲಸ ಮಾಡುವವರು, ದಿನಗೂಲಿ ನೌಕರರು ಮುಂತಾದ "ಅದೃಶ್ಯ ಕಾರ್ಮಿಕರ" ಪ್ರಮುಖ ದೌರ್ಬಲ್ಯವೆಂದರೆ, ಎಲ್ಲಿಯೂ ನೋಂದಾಯಿಸದಿರುವುದು. ಅವರನ್ನು ಅಸಂಘಟಿತ ವ್ಯಾಪ್ತಿಗೆ ತರುವುದು ಕಷ್ಟವಾದ್ದರಿಂದ ಅವರಿಗೆ ಅವರ ಮೂಲಭೂತ ಹಕ್ಕುಗಳನ್ನು ಖಾತ್ರಿಪಡಿಸಲು ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆಯನ್ನು ಬಳಸುವುದೂ ಕಷ್ಟವಾಗಿದೆ. ಗುರುತಿಸುವಿಕೆಯ ಮೊದಲ ಹೆಜ್ಜೆಯಾಗಿ ಔಪಚಾರಿಕ ಒಪ್ಪಂದದ ಕರಾರು ಪತ್ರದಿಂದ ಆರಂಭಿಸಿ, ಸಾಧ್ಯವಿರುವಲ್ಲೆಲ್ಲಾ ಸಾರ್ವತ್ರಿಕ ಸಾಮಾಜಿಕ ಭದ್ರತಾ ಕಾರ್ಡ್ ಲಿಂಕ್ ಮಾಡಿ, ಅದನ್ನು ಇತ್ತೀಚೆಗೆ ಅಸಂಘಟಿತ ಕಾರ್ಮಿಕರಿಗೆ ಕೊಡಲಾಗುತ್ತಿರುವ ಸ್ಮಾರ್ಟ್ ಕಾರ್ಡ್ ಸಂಯೋಜಿಸಿ ಉದ್ಯೋಗದಾತ–ಉದ್ಯೋಗಿಗಳ ಸಂಬಂಧವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಬೇಕು,

ದುರದೃಷ್ಟವಶಾತ್ ಅವರಿಗೆ ಕೆಲವು ರಕ್ಷಣೆ ನೀಡಬಹುದಾದ ಈ ಕಾಯಿದೆಯನ್ನು ಈಗ ಸಾಮಾಜಿಕ ಭದ್ರತೆಯ ಕೋಡ್ ಅಡಿಯಲ್ಲಿ ತರಲಾಗುತ್ತಿದೆ. ಎಲ್ಲಾ 44 ಕಾರ್ಮಿಕ ಕಾನೂನುಗಳನ್ನು ಒಂದುಗೂಡಿಸಿ ತರಲಾಗುತ್ತಿರುವ ನಾಲ್ಕು ಕೋಡ್‌ಗಳಲ್ಲಿ ಇದೂ ಒಂದಾಗಿದೆ. ಈ ಕ್ರಮವನ್ನು ಕಾರ್ಮಿಕರ ಹಕ್ಕುಗಳು ಮತ್ತು ಮಾಲೀಕರ ಜವಾಬ್ದಾರಿಗಳನ್ನು ಸಡಿಲಗೊಳಿಸುವ ಪ್ರಯತ್ನ ಎಂದು ಎಲ್ಲಾ ಕಾರ್ಮಿಕ ಸಂಘಗಳು ಟೀಕಿಸಿವೆ.

ಆದ್ದರಿಂದ ಈ ಕಾರ್ಮಿಕರನ್ನು ಅಸ್ತಿತ್ವದಲ್ಲಿರುವ ಅಥವಾ ಹೊಸ ಕಾನೂನು ನಿಬಂಧನೆಗಳ ವ್ಯಾಪ್ತಿಯಲ್ಲಿ ತಂದರೂ, ನಿಯಮಗಳನ್ನು ರೂಪಿಸಿದ ನಂತರ ಹೊಸ ಕೋಡ್‌ಗಳು ಅವರ ಹಕ್ಕುಗಳನ್ನು ಹೇಗೆ ಸಹಾಯವಾಗಬಹುದು ಎಂಬುದನ್ನು ನೋಡಬೇಕಾಗಿದೆ.

## ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ನಿಯಂತ್ರಕ ಚೌಕಟ್ಟು

ಚೌಲ್ಟ್ರಿ ಕೆಲಸಗಾರರ ಲೈಂಗಿಕ ಕಿರುಕುಳದ ಸ್ಥಳೀಯ ಸ್ವರೂಪವನ್ನು ಗಮನಿಸಿದರೆ, 'ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ, ಪರಿಹಾರ) ಕಾಯಿದೆ, 2013(ಆಕ್ಟ್) ಇದು ಪರಿಹಾರ ಮತ್ತು ನ್ಯಾಯಕ್ಕಾಗಿ ಒದಗಬಹುದಾದ ಒಂದು ಕಾನೂನಿನ ಸಾಧನವಾಗಿದೆ.

ಇದಲ್ಲದೆ, ಭಾರತದ ಸಂವಿಧಾನದ 21 ನೇ ವಿಧಿಯು ಮಹಿಳೆಯರಿಗೆ ಜೀವನ ಮತ್ತು ಘನತೆಯಿಂದ ಬದುಕುವ ಹಕ್ಕು ಮತ್ತು ಯಾವುದೇ ವೃತ್ತಿಯನ್ನು ಮಾಡುವ ಅಥವಾ ಯಾವುದೇ ಉದ್ಯೋಗ, ವ್ಯಾಪಾರ ಅಥವಾ ವ್ಯಾಪಾರವನ್ನು ನಡೆಸುವ ಹಕ್ಕನ್ನು ಕಡ್ಡಾಯಗೊಳಿಸುತ್ತದೆ, ಇದು ಲೈಂಗಿಕ ಕಿರುಕುಳ ಮುಕ್ತ ವಾತಾವರಣದ ಹಕ್ಕನ್ನು ಒಳಗೊಂಡಿದೆ.

ಇದಲ್ಲದೆ, ಲೈಂಗಿಕ ಕಿರುಕುಳದ ವಿರುದ್ಧ ರಕ್ಷಣೆ ಮತ್ತು ಘನತೆಯಿಂದ ಕೆಲಸ ಮಾಡುವ ಹಕ್ಕನ್ನು ಅಂತರರಾಷ್ಟ್ರೀಯ ಸಮಾವೇಶಗಳು ಮತ್ತು ಮಹಿಳೆಯರ ವಿರುದ್ಧದ ಎಲ್ಲಾ ರೀತಿಯ ತಾರತಮ್ಯಗಳ ನಿರ್ಮೂಲನದ ಒಡಂಬಡಿಕೆಯಂತಹ ಸಾಧನಗಳಿಂದ ಸಾರ್ವತ್ರಿಕವಾಗಿ ಗುರುತಿಸಲ್ಪಟ್ಟ ಮಾನವ ಹಕ್ಕುಗಳಾಗಿವೆ.

POSH ಕಾಯಿದೆಯು ತನ್ನ ವ್ಯಾಪ್ತಿಯಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಕೆಲಸಗಾರರನ್ನು ಸಷ್ಟವಾಗಿ ಒಳಗೊಳ್ಳುತ್ತದೆ. ಇದು ಲೈಂಗಿಕ ಕಿರುಕುಳದ ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರಕ್ಕಾಗಿ ಸಾಂಸ್ಥಿಕ ಮಟ್ಟದಲ್ಲಿ ಆಂತರಿಕ ಸಮಿತಿ (ಐ.ಸಿ) ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಥಳೀಯ ಸಮಿತಿ (ಎಲ್.ಸಿ.)ಯನ್ನು ಕಡ್ಡಾಯಗೊಳಿಸುತ್ತದೆ.

ಬೃಹತ್ ಪ್ರಮಾಣದಲ್ಲಿರುವ, ಅನೌಪಚಾರಿಕ ಮತ್ತು ಸಾಂಸ್ಥಿಕವಲ್ಲದ ಚೌಲ್ಟಿ ಕೆಲಸದ ಸ್ವರೂಪವನ್ನು ಪರಿಗಣಿಸಿ, ಚೌಲ್ಟಿ ಕೆಲಸದಲ್ಲಿ ನಿರತ ಮಹಿಳಾ ಕಾರ್ಮಿಕರು ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾದಾಗ ಸ್ಥಳೀಯ ದೂರುಗಳ ಸಮಿತಿಯಿಂದ (ಎಲ್.ಸಿ.ಸಿ.) ಪರಿಹಾರವನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ. ಕಾಯಿದೆಯ ಸೆಕ್ಷನ್ 6 ರ ಅಡಿಯಲ್ಲಿ ರಚಿಸಲಾದ ಎಲ್.ಸಿ.ಸಿ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದ ದೂರುಗಳನ್ನು ಸ್ವೀಕರಿಸಲು ಇಡೀ ಜಿಲ್ಲೆಯ ಮೇಲೆ ಅಧಿಕಾರವನ್ನು ಹೊಂದಿದೆ. ಅವರು ಸಿವಿಲ್ ಪ್ರೊಸೀಜರ್ ಕೋಡ್, 1908 ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದಷ್ಟೇ ಅಧಿಕಾರವನ್ನು ಹೊಂದಿದ್ದಾರೆ. ಕಾಯಿದೆಯ ನಿಬಂಧನೆಗಳ ಬಗ್ಗೆ ಅವರಿಗೆ ಅರಿವು ಮೂಡಿಸಲು ಕಾರ್ಮಿಕರು ಮತ್ತು ಉದ್ಯೋಗದಾತರಿಗೆ ನಿಯಮಿತ ಜಾಗೃತಿ ಮತ್ತು ಸಂವೇದನಾ ಶಿಬಿರಗಳನ್ನು ನಡೆಸಲು ಕಾಯಿದೆಯು ಎಲ್.ಸಿಗಳಿಗೆ ಕಡ್ಡಾಯಗೊಳಿಸಿದೆ.

ಆದರೆ ವಾಸ್ತವವೆಂದರೆ ದೇಶದ 655 ಜಿಲ್ಲೆಗಳ ಸಮೀಕ್ಷೆಯ ಪ್ರಕಾರ 191 ಜಿಲ್ಲೆಗಳು ಮಾತ್ರ ಸ್ಥಳೀಯ ದೂರು ಸಮಿತಿಯನ್ನು ಸ್ಥಾಪಿಸಿವೆ.[6] ಮತ್ತು ಹಿಂಸಾಚಾರದ ಸಾಮಾನ್ಯ ರೂಪವಾಗಿರುವ ಲೈಂಗಿಕ ಕಿರುಕುಳಕ್ಕೆ ಯಾವುದೇ ಮನ್ನಣೆ ಇಲ್ಲ, ಪರಿಹಾರದ ಸಾಧನವಾಗಿ ಸ್ಥಳೀಯ ದೂರುಗಳ ಸಮಿತಿಯ ಅಸ್ತಿತ್ವದ ಬಗ್ಗೆ ಯಾವುದೇ ಅರಿವು ಇಲ್ಲ. ಎಲ್‌ಸಿಸಿ ಸ್ಥಾಪಿಸುವ ಮತ್ತು ತಮ್ಮ ವ್ಯಾಪ್ತಿಯಲ್ಲಿರುವ ಎಲ್ಲಾ ಚೌಲ್ಟಿಗಳಲ್ಲಿ ನಿಯಮಿತವಾಗಿ ಜಾಗೃತಿ ಅಧಿವೇಶನಗಳನ್ನು ನಡೆಸುವ ಮೂಲಕ ಚೌಲ್ಟಿ ಮಾಲೀಕರಿಗೆ ಕೆಲಸದ ಜಾಗದಲ್ಲಿ ಲೈಂಗಿಕ ಕಿರುಕುಳವನ್ನು ನಿಷೇಧಿಸುವ ತಮ್ಮ ಜವಾಬ್ದಾರಿಯ ಬಗ್ಗೆ ಚೌಲ್ಟಿಗಳ ಮಾಲಿಕರಿಗೆ ಕನಿಷ್ಠ ಅರಿವು ಮೂಡಿಸುವಂತೆ ಜಿಲ್ಲಾಡಳಿತದ ಮೇಲೆ ಒತ್ತಡ ಹೇರಲು ನಾಗರಿಕ ಸಮಾಜ ಮತ್ತು ಸಂಘಗಳಿಂದ ಸಂಘಟಿತ ಪ್ರಯತ್ನಗಳಾಗುವ ಅಗತ್ಯವಿದೆ.

## ಮಹಿಳಾ ಅನೌಪಚಾರಿಕ ಕಾರ್ಮಿಕರ ಮೇಲೆ ಕೋವಿಡ್ ಸಾಂಕ್ರಾಮಿಕದ ಪರಿಣಾಮ

ಕೋವಿಡ್ ಸಾಂಕ್ರಾಮಿಕ ರೋಗದ ನಂತರದ ಆರ್ಥಿಕ ಹಿಂಜರಿತದ ಪರಿಣಾಮವಾಗಿ 1.50 ಕೋಟಿ ಭಾರತೀಯರು ಅದರಲ್ಲೂ ಹೆಚ್ಚು ಪ್ರಮಾಣದಲ್ಲಿ ಮಹಿಳೆಯರು ಹೊಡೆತ ತಿಂದಿದ್ದಾರೆ. ಸೆಪ್ಟೆಂಬರ್ 2020ರ ಹೊತ್ತಿಗೆ ಪುರುಷ ಕಾರ್ಮಿಕರಲ್ಲಿ ನಿರುದ್ಯೋಗವು 12.6% ಹೆಚ್ಚಾದರೆ ಮಹಿಳೆಯರಲ್ಲಿ ನಿರುದ್ಯೋಗ ದರವು 15.8% ಕ್ಕೆ ತಲುಪಿದೆ. ಆದರೆ ಕೋವಿಡ್ ಸಾಂಕ್ರಾಮಿಕದ ದುಷ್ಪರಿಣಾಮವನ್ನು ಕೃಷಿ ಮತ್ತು ಕಾರ್ಖಾನೆಯ ಕಾರ್ಮಿಕರು ಮತ್ತು ಮನೆಕೆಲಸದಂತಹ ಕಡಿಮೆ ಕೌಶಲ್ಯದ ಕೆಲಸದಲ್ಲಿರುವ ಮಹಿಳೆಯರು ಹೆಚ್ಚು ತೀವ್ರವಾಗಿ ಅನುಭವಿಸಿದರು.

ಕೋವಿಡ್‌ನ ಎರಡನೇ ಅಲೆಗೆ ಪೂರ್ವದಲ್ಲಿ ಮಾರ್ಚ್ ಮತ್ತು ಡಿಸೆಂಬರ್ ನಡುವೆ ಕೆಲಸ ಕಳೆದುಕೊಂಡ 47% ಮಹಿಳಾ ಕಾರ್ಮಿಕರನ್ನು ಶಾಶ್ವತವಾಗಿ ಉದ್ಯೋಗಹೀನರನ್ನಾಗಿಸಲಾಗಿದೆ ಎಂದು ಎಪಿಯು ಅಧ್ಯಯನವು ತೋರಿಸಿದೆ. ಕೆಲಸ ಕಳೆದುಕೊಂಡ ಪುರುಷ ಕಾರ್ಮಿಕರು 7% ಇದ್ದರು, ಅವರಲ್ಲಿ ಅನೇಕರು ತಮ್ಮ ಹಳೆಯ ಉದ್ಯೋಗಗಳಿಗೆ ಮರಳಲು ಅಥವಾ ತರಕಾರಿ ಮಾರಾಟದಂತಹ ಸ್ವತಂತ್ರ ಕೆಲಸವನ್ನು ತೆಗೆದುಕೊಳ್ಳಲು ಸಾಧ್ಯವಾಗಿದೆ.

ಭಾರತದಲ್ಲಿನ ಸಾಂಪ್ರದಾಯಿಕ ಗೃಹಕೃತ್ಯಗಳು ಮಹಿಳೆಯರಿಗೆ ಉದ್ಯೋಗಕ್ಕೆ ಮರಳದಂತೆ ಮತ್ತಷ್ಟು ತಡೆಯುತ್ತದೆ. ಭಾರತದಲ್ಲಿ ಮನೆಕೆಲಸದಲ್ಲಿ ಹೆಣ್ಣಿನ ಪಾಲು ಪುರುಷನ ಪಾಲಿಗಿಂತ ಅತಿ ದೊಡ್ಡದಾಗಿದೆ ಮತ್ತು ಸಾಂಕ್ರಾಮಿಕದ ಸಮಯದಲ್ಲಿ ಶಾಲೆಗಳನ್ನು ಮುಚ್ಚಿದ್ದರ ಪರಿಣಾಮವಾಗಿ ಮಹಿಳೆಯರು ಮಕ್ಕಳ ಆರೈಕೆಯ ಭಾರವನ್ನು

6. https://www.ungender.in/how-you-can-help-domestic-workers-fight-sexual-abuse/

ಹೊರ ಬೇಕಾಯಿತು. ಮಹಿಳೆಯರು ಮಕ್ಕಳನ್ನು ನೋಡಿಕೊಳ್ಳಬೇಕಾಗಿರುವುದರಿಂದ ಕೆಲವು ಕೆಲಸಗಳು ತೆರೆದುಕೊಂಡರೂ ದೂರದ ಕಾರ್ಖಾನೆಗಳಿಗೆ ಹೋಗಲು ಅವರಿಗೆ ಸಾಧ್ಯವಾಗಲಿಲ್ಲ.[7]

ಸಾಂಕ್ರಾಮಿಕ ಸಮಯದಲ್ಲಿ ಮತ್ತು ನಂತರ ಚೌಲ್ಟ್ರಿ ಕಾರ್ಮಿಕರ ಜೀವನೋಪಾಯವು ಧ್ವಂಸಗೊಂಡಿದೆ ಎಂದು ವರದಿಯು ಕಟುವಾದ ಪದಗಳಲ್ಲಿ ಬಹಿರಂಗಪಡಿಸುತ್ತದೆ. ಮತ್ತು ವಿನಾಶದ ಪ್ರಮಾಣ ಎಷ್ಟಿದೆಯೆಂದರೆ, ಸಾಂಕ್ರಾಮಿಕ ರೋಗವು ಕಳೆದ ನಂತರವೂ ಅವರು ಚೇತರಿಸಿಕೊಳ್ಳುವುದು ಕಷ್ಟಕರವಾಗಿದೆ. ಏಕೆಂದರೆ, ಅದೃಶ್ಯ ಕಾರ್ಮಿಕರಾದ ಅವರು ಆಟೋ ಚಾಲಕರು ಅಥವಾ ಕಟ್ಟಡ ಕಾರ್ಮಿಕರಂತಹ ದೈನಂದಿನ ಕೂಲಿಗಾರರಿಗೆ ಲಭ್ಯವಿರುವ ಪರಿಹಾರವನ್ನು ಸಹ ಪಡೆಯಲು ಸಾಧ್ಯವಾಗಲಿಲ್ಲ.

ಕೊನೆಯಲ್ಲಿ, ಜಾಗತೀಕರಣದ ನಂತರದ ಮತ್ತು ಸಾಂಕ್ರಾಮಿಕ ನಂತರದ ಜಗತ್ತಿನಲ್ಲಿ ಔಪಚಾರಿಕ ಉದ್ಯೋಗದ ಸ್ಥಿರವಾದ ವಿಘಟನೆಯನ್ನು ಕಂಡ ಹೆಚ್ಚಿನ ಜನರು, ವಿಶೇಷವಾಗಿ ಮಹಿಳೆಯರು, ಅನೌಪಚಾರಿಕ ಉದ್ಯೋಗಕ್ಕೆ ಪ್ರವೇಶಿದ್ದು ಅವರ ಆಯ್ಕೆಯಿಂದಲ್ಲ, ಬದಲಿಗೆ ಉದ್ಯೋಗಾವಕಾಶಗಳ ಕೊರತೆ ಮತ್ತು ಜೀವನೋಪಾಯಕ್ಕಾಗಿ ಯಾವುದೇ ಇತರ ಅವಕಾಶಗಳ ಕೊರತೆಯಿಂದಾಗಿ ಎಂಬುದು ಕಂಡುಬರುತ್ತದೆ.

7. https://cse.azimpremjiuniversity.edu.in/publications/down-and-out-the-gendered-impact-of-the-covid-19-pandemic-on-indias-labour-market/

# 2 ಅಧ್ಯಾಯ ಎರಡು: ಚೌಲ್ಟ್ರಿ ಕಾರ್ಮಿಕರ ಧ್ವನಿಗಳನ್ನು ಆಲಿಸಿದಾಗ

ಬೆಂಗಳೂರಿನಾದ್ಯಂತ ಅಂದಾಜು 3000 ಚೌಲ್ಟ್ರಿ ಕೆಲಸಗಾರರಿದ್ದಾರೆ ಎಂದು ನಾವು ಸ್ವತಃ ಮಾತನಾಡಿದ ಮಹಿಳೆಯರು ನಮಗೆ ತಿಳಿಸಿದರು. ಮತ್ತು ಇದು ಖಂಡಿತವಾಗಿಯೂ ತೀರಾ ಅಂದಾಜಿನ ಲೆಕ್ಕ, ಏಕೆಂದರೆ ಎಷ್ಟು ಮಹಿಳೆಯರು ಈ ರೀತಿಯ ಕೆಲಸವನ್ನು ಮಾಡುತ್ತಿದ್ದಾರೆ ಎಂಬುದನ್ನು ಲೆಕ್ಕಹಾಕಲು ಯಾವುದೇ ಔಪಚಾರಿಕ ಎಣಿಕೆಯನ್ನು ಸಹ ಇನ್ನೂವರೆಗೆ ಎಲ್ಲಿಯೂ ಪ್ರಯತ್ನಿಸಲಾಗಿಲ್ಲ.

ಜನ್ಮದಿನಗಳು, ಮದುವೆ, ಮರಣದ ಆಚರಣೆಗಳಂತಹ ಸಾಮೂಹಿಕ ಅನ್ನಸಂತರ್ಪಣೆಗಳು, ಶಾದಿ ಮಹಲ್‌ಗಳು, ಅಥವಾ ದೇವಸ್ಥಾನದಲ್ಲಿ ಸಾಮೂಹಿಕ ಅನ್ನಸಂತರ್ಪಣೆ ನಡೆಯುತ್ತಿರುವಲ್ಲಿ ಅಥವಾ ಗೃಹ ಪ್ರವೇಶವನ್ನು ನಡೆಸುತ್ತಿರುವಲ್ಲಿ, ನಾವು ಹೋಗಬಹುದಾದ ಯಾವುದೇ ಆಚರಣೆಗಳಲ್ಲಿ ಈ ಕಾರ್ಮಿಕರು ಇದ್ದೂ ಇಲ್ಲದಂತಿರುತ್ತಾರೆ. ನಮ್ಮ ಕಣ್ಣಿಗೆ ಬಿದ್ದೂ ಕಾಣದವರಂತಿರುತ್ತಾರೆ. ಆಚರಣೆಗಳು ಪವಿತ್ರ ಮತ್ತು ಸಂತೋಷದಾಯಕ. ಆದರೆ ಸಂದರ್ಭವನ್ನು ಪವಿತ್ರ ಮತ್ತು ಸಂತೋಷದಾಯಕವಾಗಿಸಲು ಶ್ರಮಿಸುವ ಮಹಿಳೆಯರು ಕಣ್ಣಿಗೆ ಕಾಣುವುದಿಲ್ಲ. ಅವರ ಕೆಲಸವನ್ನು ಕೀಳು ಮತ್ತು ಕೊಳಕು ಎಂದು ಪರಿಗಣಿಸಲಾಗುವುದರಿಂದ ನಮ್ಮ ದೃಷ್ಟಿ ಮತ್ತು ಮನಸ್ಸಿನಿಂದ ದೂರವಿಡಲಾಗುತ್ತದೆ. ಅವರಲ್ಲಿ ಕಿರಿಯ ಮತ್ತು ಹೆಚ್ಚು ಸುಂದರವಾಗಿರುವವರು ಆಕರ್ಷಕ ಬಟ್ಟೆಯನ್ನು ಧರಿಸಿ ಪ್ರವೇಶದ್ವಾರದಲ್ಲಿ ನಿಂತು ಸ್ವಾಗತ ಹೂವುಗಳು ಮತ್ತು ಸ್ವಾಗತ ಪಾನೀಯಗಳನ್ನು ಹಂಚುತ್ತಾರೆ.

ಅವರ ಜೀವನ, ಅವರ ಕೆಲಸದ ಪರಿಸ್ಥಿತಿಗಳು, ಅವರ ಕನಸುಗಳು ಮತ್ತು ಅವರ ಬೇಡಿಕೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಹೊರಜಗತ್ತಿಗೆ ಗೋಚರಿಸುವಂತೆ ಮಾಡಲು, ಮಾರ್ಚ್ 2022ರಲ್ಲಿ ಒಂದು ತಿಂಗಳು ಪೂರ್ತಿ ನಾವು ವಿವಿಧ ಸ್ಥಳಗಳಲ್ಲಿ ಅವರನ್ನು ಭೇಟಿಯಾದೆವು. ಅವರು ವಾಸಿಸುವ ಸ್ಥಳಗಳಲ್ಲಿ ಅವರ ಗುಂಪುಗಳೊಂದಿಗೆ ಕೆಲವು ವಿವರವಾದ ಫೋಕಸ್ ಗ್ರೂಪ್ ಚರ್ಚೆಗಳನ್ನು ನಡೆಸಿದೆವು. ಪ್ರತಿ ಸ್ಥಳದಲ್ಲಿ ನಾವು ಸುಮಾರು 20– 30 ಮಹಿಳೆಯರ ಗುಂಪುಗಳನ್ನು ಭೇಟಿಯಾದೆವು.

ಮಹಿಳೆಯರು ಈ ಕೆಳಗಿನ ಸ್ಥಳಗಳಿಂದ ಬಂದಿದ್ದರು:

1. ಆನಂದಪುರ, ಅಂಜನಪ್ಪ ಗಾರ್ಡನ್, ಜೊಲಿ ಮೋಹಲ್ಲಾ
2. ಜನತಾ ಕಾಲೋನಿ
3. ಎಂಸಿಟಿಸಿ ಕಾಲೋನಿ, ಕೆಂಗೇರಿ, ಎಕೆ ಕಾಲೋನಿ, ಸಂಜಯನಗರ, ನರಸಿಂಹಯ್ಯ ಕಾಲೋನಿ
4. ಬನ್ನೇರುಘಟ್ಟ

ಆಕ್ಷನ್‌ಏಯ್ಡ್ ಅಸೋಸಿಯೇಶನ್ ಮತ್ತು ಸ್ಲಂ ಮಹಿಳಾ ಸಂಘಟನೆ ಕೆಲಸ ಮಾಡುವ ಮೊದಲ ಮೂರು ಪ್ರದೇಶಗಳು ನಗರದ ಹೃದಯ ಭಾಗದಲ್ಲಿವೆ. ಪ್ರಾಥಮಿಕವಾಗಿ ಕಳೆದ ಹಲವು ದಶಕಗಳಿಂದ ಬೆಂಗಳೂರಿನ ನಗರ ಭೂದೃಶ್ಯದ ಭಾಗವಾಗಿರುವ ಸ್ಲಂ ಪ್ರದೇಶಗಳಿವು. ಕೊನೆಯದು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಅಂಚಿನಲ್ಲಿದೆ. ಇದು ಸೊಸೈಟಿ ಫಾರ್ ಇನ್‌ಫಾರ್ಮಲ್ ಎಜುಕೇಷನ್ ಆಂಡ್ ಡೆವೆಲಪ್‌ಮೆಂಟ್ ಸ್ಟಡೀಸ್ (SIEDS) ಸಂಸ್ಥೆಯು ಕೆಲಸ ಮಾಡುತ್ತಿರುವ ಅತ್ತ ನಗರ ಮತ್ತು ಅರಣ್ಯದ ಅಂಚುಗಳಲ್ಲಿ ಸಮುದಾಯ ನೆಲೆಗೊಂಡಿದೆ. ನಾವು ಸ್ಥಳೀಯ ಸಮುದಾಯ ಕೇಂದ್ರಗಳಲ್ಲಿ, ಮರದ ಕೆಳಗೆ, ಮತ್ತು ದೇವಸ್ಥಾನ ಸೇರಿದಂತೆ ತೆರೆದ ಸ್ಥಳಗಳಲ್ಲಿ ಭೇಟಿಯಾದೆವು.

ಈ ಅಧ್ಯಾಯದಲ್ಲಿ ನಾವು ವೈಯಕ್ತಿಕ ವೀಕ್ಷಣೆಗಳು, ಕಥೆಗಳು ಮತ್ತು ನಮ್ಮ ಕೆಲವು ಅವಲೋಕನಗಳ ಸಂಕ್ಷಿಪ್ತ ವಿಚಾರಗಳೊಂದಿಗೆ ಅವರು ಹಂಚಿಕೊಂಡದ್ದನ್ನು ನಿಮ್ಮ ಮುಂದಿಡಲು ಪ್ರಯತ್ನಿಸಿದ್ದೇವೆ.

# ವೈವಿಧ್ಯಮಯ ಮತ್ತು ದುರ್ಬಲತೆಯೇ ಮೂಲ

ಅವರು ವಿವಿಧ ಸಮುದಾಯಗಳಿಂದ ಬಂದವರು – ಹಿಂದೂ, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಆದರೆ ಹೆಚ್ಚಿನವರು ದಲಿತ/ಒಬಿಸಿ ಸಮುದಾಯಗಳಿಂದ ಮತ್ತು ಬನ್ನೇರುಘಟ್ಟದಲ್ಲಿರುವ ಬುಡಕಟ್ಟು ಸಮುದಾಯದವರು. ಈ ಕೆಲಸ ಮಾಡುವ ಮಹಿಳೆಯರ ಬಗ್ಗೆ ಎಂ.ಸಿ.ಟಿ.ಸಿ.ಯ ಪುಷ್ಪಲತಾ ಹೇಳುವಂತೆ, "ನಾವು ಭಜಂತ್ರಿ, ಎಸ್‌ಸಿ, ಮುದಲಿಯಾರ್, ಮುಸ್ಲಿಂ ಇತ್ಯಾದಿ ವಿವಿಧ ಜಾತಿಗಳು ಮತ್ತು ಧರ್ಮಗಳಿಗೆ ಸೇರಿದವರು.... ನಾವು ಕೆಲಸಕ್ಕಾಗಿ ಎಲ್ಲೆಡೆ ಹೋಗುತ್ತೇವೆ."

ಚರ್ಚೆಯಲ್ಲಿ ಭಾಗವಹಿಸಿದವರಲ್ಲಿ ಹೆಚ್ಚಿನವರು 17 ರಿಂದ 30/40ರ ಮಧ್ಯವಯಸ್ಸಿನವರಾಗಿದ್ದರು. ಕೆಲವು ಹಿರಿಯ ಮತ್ತು ವಯಸ್ಸಾದ ಮಹಿಳೆಯರೇ ಸ್ಥಳೀಯ ಗುತ್ತಿಗೆದಾರರಾಗಿದ್ದು, ಕಿರಿಯರನ್ನು ಚೌಲ್ಟ್ರಿಗಳಿಗೆ ಕೆಲಸಕ್ಕೆ ಕರೆದೊಯ್ಯುತ್ತಾರೆ. ಚಿಕ್ಕವರಾಗಿದ್ದಾಗಿನಿಂದಲೂ ಚೌಲ್ಟ್ರಿಗಳಲ್ಲಿಯೇ ಕೆಲಸ ಮಾಡುತ್ತಿರುವ ಬಹುತೇಕ ಈ ಎಲ್ಲರೂ ಮದುವೆಯಾಗಿ ಇಬ್ಬರು ಅಥವಾ ಹೆಚ್ಚು ಮಕ್ಕಳನ್ನು ಹೊಂದಿದ್ದಾರೆ. ಅವರಲ್ಲಿ ಅನೇಕರು ಹತ್ತನೇ ತರಗತಿಯನ್ನು ಮೀರಿ ಓದಿಲ್ಲ, ಕೆಲವರಿಗಂತೂ ಶಿಕ್ಷಣವೇ ಇಲ್ಲ. ಕೌಟುಂಬಿಕ ಪರಿಸ್ಥಿತಿಗಳು ಅವರನ್ನು ಚಿಕ್ಕ ವಯಸ್ಸಿನಲ್ಲೇ ಕೆಲಸಕ್ಕೆ ಹೋಗುವಂತೆ ಮಾಡಿದೆ. ಮನೆಯ ಹಿರಿಯ ತಲೆಮಾರು ಮಾಡಿದ ಕೆಲಸವನ್ನೇ ಅವರೂ ಮುಂದುವರೆಸಿದ್ದಾರೆ.

- 10ನೇ ತರಗತಿವರೆಗೆ ಓದಿರುವ ಹದಿನಾರರ ಹರೆಯದ ಸ್ವರ್ಣಶ್ರೀ, ತಾನು ಮತ್ತು ಆಕೆಯ 14 ವರ್ಷದ ಸಹೋದರಿ ಶ್ರುತಿ ಇಬ್ಬರೂ ತಮ್ಮ ಕುಟುಂಬವನ್ನು ಪೋಷಿಸಲು ಈ ಕೆಲಸಕ್ಕೆ ಹೋಗುತ್ತೇವೆ, ಏಕೆಂದರೆ ತನ್ನ ತಂದೆ ಪೈಂಟಿಂಗ್ ಕೆಲಸ ಮಾಡುತ್ತಿದ್ದರು, ಅಪಘಾತದ ನಂತರ ಅಶಕ್ತರಾಗಿರುವ ಆಕೆಯ ತಂದೆ ಸೇರಿದಂತೆ ಅವರ ತಂದೆ–ತಾಯಿ ಇಬ್ಬರೂ ಕೆಲಸ ಮಾಡಲು ಸಾಧ್ಯವಿಲ್ಲ, ಶ್ರುತಿ ಕೂಡ ಮೂಕಳಾಗಿದ್ದು, ಮಾತನಾಡಲು ಬರುವುದಿಲ್ಲ.
- ಜಾಲಿ ಮೊಹಲ್ಲಾದ ಇಪ್ಪತ್ತೊಂಬತ್ತು ವಯಸ್ಸಿನ ಕಾಮಾಕ್ಷಿ ಮದುವೆಯಾಗಿ ಇಬ್ಬರು ಮಕ್ಕಳೊಂದಿಗಿದ್ದಾಳೆ, ಅವರು ತನ್ನ 11 ವರ್ಷ ವಯಸ್ಸಿನಿಂದಲೂ ಕಳೆದ 18 ವರ್ಷಗಳಿಂದ ಚೌಲ್ಟ್ರಿಗಳಲ್ಲಿ ಕೆಲಸ ಮಾಡುತ್ತಿದ್ದಾಳೆ.
- ಎಂ.ಸಿ.ಟಿ.ಸಿಯ ಇಪ್ಪತ್ತೊಂಬತ್ತು ವರ್ಷದ ಲತಾ ಅವರು ತಮ್ಮ 14 ವರ್ಷ ವಯಸ್ಸಿನಿಂದಲೂ ಕಳೆದ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ.
- ಜಾಲಿ ಮೊಹಲ್ಲಾದ ಐವತ್ತು ವರ್ಷದ ಶಾರದಮ್ಮ ಹತ್ತು ವರ್ಷದಿಂದ ಕೆಲಸ ಮಾಡುತ್ತಿದ್ದಾರೆ.

> ನಾನು ಮೂವರು ಸಹೋದರಿಯರಲ್ಲಿ ಒಬ್ಬಳು. ನನ್ನ ಅಕ್ಕನನ್ನು ಮದ್ಯವ್ಯಸನಿಯಾಗಿರುವ ಅವಳ ಗಂಡ ಸುಟ್ಟುಹಾಕಿದ. ನಾನು ಅವಳನ್ನು ನೋಡಿಕೊಳ್ಳುತ್ತ ಅವಳೊಂದಿಗೆ ವಾಸಿಸುತ್ತಿದ್ದೇನೆ. ನಮಗೆ ಪೋಷಕರಿಲ್ಲ. ನನ್ನ ತಂಗಿಗೆ ಇಬ್ಬರು ಮಕ್ಕಳಿದ್ದರು ಅವರಲ್ಲಿ ಒಬ್ಬರು ರಸ್ತೆಯಲ್ಲಿ ಜನಿಸಿದರು. ನಾನು ಒಂದು ವರ್ಷದ ಹಿಂದೆ ಮದುವೆಯಾದೆ. ನನ್ನ ಪತಿ ಗ್ಯಾರೇಜ್‌ನಲ್ಲಿ ಕೆಲಸಕ್ಕೆ ಹೋಗುತ್ತಾನೆ. ಹಾಸ್ಟೆಲ್‌ನಲ್ಲಿರುವ ನನ್ನ ಸಹೋದರಿಯ ಇಬ್ಬರು ಮಕ್ಕಳನ್ನು ನಾನು ನೋಡಿಕೊಳ್ಳುತ್ತೇನೆ. ನನ್ನ ತಂಗಿ ಭಿಕ್ಷೆ ಬೇಡಲು ಹೋಗುತ್ತಾಳೆ. ನನ್ನ ಪತಿ ನಮ್ಮ ಮತ್ತು ಅವರ ಕುಟುಂಬವನ್ನು ನೋಡಿಕೊಳ್ಳುತ್ತಾರೆ.
>
> **~ ಅನ್ನಪೂರ್ಣ, 18 ವರ್ಷ**

ಅನೇಕ ಮಹಿಳೆಯರು ವಿಧವೆಯರು ಅಥವಾ ಯಾವುದೇ ನಿಯಮಿತ ಉದ್ಯೋಗವಿಲ್ಲದ, ದೀರ್ಘಕಾಲದ ಅನಾರೋಗ್ಯ ಅಥವಾ ಮದ್ಯವ್ಯಸನಿಗಳಾಗಿರುವ ಗಂಡನನ್ನು ಹೊಂದಿರುವರು. ಅವರು ಚೌಲ್ಟ್ರಿಯಿಂದ ಬರುವ ಆದಾಯದ ಮೇಲೆ ತಮ್ಮ ಕುಟುಂಬಗಳನ್ನು ಪೋಷಿಸುವ ಮೂಲಕ ಒಂಟಿ ಗಳಿಕೆದಾರರು. ಅನೇಕ ಸಂದರ್ಭಗಳಲ್ಲಿ ಹೆಣ್ಣುಮಕ್ಕಳು ಬೆಳೆದಂತೆ ತಮ್ಮ ತಾಯಂದಿರೊಂದಿಗೆ ಕೆಲಸದಲ್ಲಿ ಸೇರಿಕೊಂಡಿರುವುದರಿಂದ ಇದು ತಲೆಮಾರುಗಳು ಒಟ್ಟಿಗೆ ಗಳಿಸುತ್ತಿರುವ ಉದಾಹರಣೆಗಳಿವೆ. ಕೆಲವು ಸಂದರ್ಭಗಳಲ್ಲಿ ಕುಲೀನರು ಹೆಚ್ಚಿನ

ಸಂಭಾವನೆ ಪಡೆದು ಲಾಭ ಗಳಿಸುತ್ತಿರುವವರೂ ಇದ್ದಾರೆ. ಎಂಸಿಟಿಸಿಯ ಧನಲಕ್ಷ್ಮಿ ಅವರ ಮಗಳು ಚೌಲ್ಟ್ರಿಯ ಪ್ರವೇಶದ್ವಾರದಲ್ಲಿ ನಿಂತು ಅತಿಥಿಗಳನ್ನು ಸ್ವಾಗತಿಸುವವಳಾಗಿ ಸೇರಿದ್ದು, ಇದಕ್ಕಾಗಿ ಅವರು ದಿನಕ್ಕೆ ರೂ 400/– ಪಡೆಯುತ್ತಾಳೆ. ಅವಳ ತಾಯಿಯ ದುಡಿಮೆ ಹೆಚ್ಚಾಗಿದ್ದರೂ ಸಹ ಅವರು ದಿನವೊಂದಕ್ಕೆ 250 ರೂಪಾಯಿ ಪಡೆಯುತ್ತಿದ್ದಾರೆ.

ನಾನು ಈಗ 14 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಈ ದುಡಿಮೆಯಿಂದ ಬಂದ ಸಂಪಾದನೆಯಿಂದ ನನ್ನ ಮೂರು ಮಕ್ಕಳನ್ನು ಬೆಳೆಸಿದ್ದೇನೆ. ಈ ಕೆಲಸದ ಸಂದರ್ಭದಲ್ಲಿ ನಾನು ನನ್ನ ಕಾಲು ಮತ್ತು ಕೈಗಳನ್ನು ಮುರಿದುಕೊಂಡಿದ್ದೇನೆ. ಆದರೂ ನಾನು ಕೆಲಸವನ್ನು ಮುಂದುವರಿಸುತ್ತೇನೆ. ಕೆಲವೊಮ್ಮೆ ನಾವು ಬೆಳಗಿನ ಜಾವ 2 ಗಂಟೆಗೆ ಮನೆ ತಲುಪುತ್ತೇವೆ, ಆಗ ಜನರು ನಮ್ಮನ್ನು ಅನುಮಾನದಿಂದ ನೋಡುತ್ತಾರೆ, ಆದರೆ ನಾನು ಹೆದರುವುದಿಲ್ಲ. ಈ ಕೆಲಸವು ನನಗೆ ಆಹಾರ ಕೊಟ್ಟಿದೆ, ನನ್ನ ಮಕ್ಕಳನ್ನು ನೋಡಿಕೊಂಡಿದೆ.

**~ ಧನಲಕ್ಷ್ಮಿ, 46 ವರ್ಷ, ಎಂ.ಸಿ.ಟಿ.ಸಿ**

ನಾನು 35 ವರ್ಷಗಳಿಂದ ಚೌಲ್ಟ್ರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಪತಿ 30 ವರ್ಷಗಳ ಹಿಂದೆ ನಿಧನರಾದರು. ನಾನು ನನ್ನ ಇಡೀ ಕುಟುಂಬವನ್ನು ಈ ಕೆಲಸದಿಂದ ಬೆಳೆಸಿದ್ದೇನೆ. ನನಗೆ ಇಬ್ಬರು ಮಕ್ಕಳಿದ್ದು, ಇಬ್ಬರೂ ಮದುವೆಯಾಗಿ ಈಗ ಒಬ್ಬ ಮಗ ಮತ್ತು ಅವನ ಕುಟುಂಬದೊಂದಿಗೆ ಅವನ ಮನೆಯಲ್ಲಿ ವಾಸಿಸುತ್ತಿದ್ದೇನೆ.

**~ ಮಲ್ಲಿಕಾ, 53 ವರ್ಷ, ಜನತಾ ಕಾಲೋನಿ**

ನಾನು ಚಿಕ್ಕ ಮಗುವಿನಿಂದ ಕಳೆದ 40 ವರ್ಷಗಳಿಂದ ಈ ಕೆಲಸವನ್ನು ಮಾಡುತ್ತಿದ್ದೇನೆ. ನನಗೆ ಮೂವರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಇದ್ದಾನೆ. ನನ್ನ ಪತಿ ಕೆಲಸ ಮಾಡುವುದಿಲ್ಲ. ನನ್ನ ಎಲ್ಲಾ ಹೆಣ್ಣುಮಕ್ಕಳು ಚೌಲ್ಟ್ರಿ ಕೆಲಸ ಮಾಡುತ್ತಾರೆ.

**~ ಶಾರದಮ್ಮ, 50 ವರ್ಷ, ಜನತಾ ಕಾಲೋನಿ**

ಕಳೆದ 30 ವರ್ಷಗಳಿಂದ ಈ ಕೆಲಸವನ್ನು ಮಾಡುತ್ತಿದ್ದೇನೆ. ನಮಗೆ 80 ರೂಪಾಯಿ ಸಿಗುತ್ತಿತ್ತು, ಅದರಲ್ಲಿ 10 ರೂಪಾಯಿ ಪ್ರಯಾಣಕ್ಕೆ ಖರ್ಚಾಗುತ್ತಿತ್ತು. ನನ್ನ ಪತಿ ಯಾವಾಗಲೂ ಕುಡಿಯುತ್ತಿರುತ್ತಾನೆ, ದುಡಿದು ಮನೆಗೆ ಏನನ್ನೂ ಸಹಾಯ ಮಾಡಲಿಲ್ಲ. ನನಗೆ ಇಬ್ಬರು ಮಕ್ಕಳಿದ್ದು, ಅವರನ್ನು ಸರ್ಕಾರಿ ಶಾಲೆಯಲ್ಲಿ ಓದಿಸಿದೆ. ಆರು ವರ್ಷದ ಹುಡುಗಿಯನ್ನು ಬಿಟ್ಟು, ನನ್ನ ಮಗಳು ಸತ್ತಳು, ನಾನು ಅವಳನ್ನು ಹಾಸ್ಟೆಲ್‌ಗೆ ಸೇರಿಸಿದೆ, ಹಣ ತುಂಬಲು ನನ್ನಿಂದ ಸಾಧ್ಯವಾಗದಿದ್ದಾಗ ನಾನು ಅವಳನ್ನು ವಾಪಸ್ ಕರೆತಂದೆ. ಇಂಗ್ಲಿಷ್ ಮಾಧ್ಯಮದಿಂದ ಕನ್ನಡ ಮಾಧ್ಯಮ ಶಾಲೆಗೆ ಹೊಂದಿಕೊಳ್ಳುವುದು ಅವಳಿಗೆ ಕಷವಾಗಿತ್ತು.

**~ ರೇವತಿ, 59 ವರ್ಷ, ಜನತಾ ಕಾಲೋನಿ**

ನಾನು ಚಿಕ್ಕಂದಿನಿಂದಲೂ ದುಡಿಯುತ್ತಿದ್ದೇನೆ. ನನಗೆ ತಂದೆ ಇಲ್ಲ ಮತ್ತು ನನ್ನ ತಾಯಿ ತುಂಬಾ ವಯಸ್ಸಾದವರು. ನಾನು ಅವಿವಾಹಿತೆ, ನನ್ನ ತಾಯಿ ಮತ್ತು ಮದುವೆಯಾಗಿರುವ ಕಿರಿಯ ಸಹೋದರ ಹಾಗು ಅವನ 4 ಮಕ್ಕಳೊಂದಿಗೆ ವಾಸಿಸುತ್ತಿದ್ದೇನೆ. ನಾನು ಚೌಲ್ಟ್ರಿಗೆ ಹೋಗಿ ತರಕಾರಿ ಕತ್ತರಿಸುವುದು,

ಶುಚಿಗೊಳಿಸುವುದು ಇತ್ಯಾದಿಗಳಲ್ಲಿ ಸಹಾಯ ಮಾಡುತ್ತೇನೆ. ನನ್ನ ತಾಯಿಯನ್ನು ನೋಡಿಕೊಳ್ಳಲು ನಾನು ಮನೆಗೆ ಬರಬೇಕಾಗಿರುವುದರಿಂದ ನಾನು ಹೊರಗೆ ಉಳಿಯುವುದಿಲ್ಲ.

**~ ಶಾಹಿದಾ, 40 ವರ್ಷ, ಎಂ.ಸಿ.ಟಿ.ಸಿ**

# ಅವರು ಕೆಲಸ ಮಾಡುವ ಸ್ಥಳ ಮತ್ತು ಅಲ್ಲಿನ ಪರಿಸ್ಥಿತಿ

ಅವರ "ಉದ್ಯೋಗ"ವೇ ಅನೌಪಚಾರಿಕ. ಮತ್ತು ಅದರ ಗುಣವೇ ಅವರು ಕೆಲಸ ಮಾಡುವ ಜಾಗಗಳು ಸರಿಯಾದ ವ್ಯವಸ್ಥೆಯಿಲ್ಲದೆ, ಯಾವುದೇ ನ್ಯಾಯಯುತ ಕಾರ್ಮಿಕ ಕಾನೂನು ಮತ್ತು ಔಪಚಾರಿಕ ಚೌಕಟ್ಟಿನಿಂದ ಸಂಪರ್ಕ ಕಡಿತಗೊಂಡಿದೆ ಎಂಬುದನ್ನು ಖಚಿತಪಡಿಸುತ್ತದೆ. ಕಾರ್ಮಿಕ ಕಾನೂನು ಕೆಲಸದ ಸಮಯ, ವೇತನಗಳು, ಉದ್ಯೋಗದಾತರ ಜವಾಬ್ದಾರಿ ಮತ್ತು ವೈದ್ಯಕೀಯ ಪರಿಹಾರ ಮತ್ತು ಸಾಲಗಳು ಅಥವಾ ಲೈಂಗಿಕ ಕಿರುಕುಳದಿಂದ ರಕ್ಷಣೆ ಸೇರಿದಂತೆ ಮೂಲಭೂತ ಅವಶ್ಯಕತೆಗಳನ್ನು ಒಳಗೊಂಡಿರುತ್ತದೆ.

## ಕೆಲಸದ ವೇಳೆ, ನಿರ್ವಹಿಸಬೇಕಾದ ಕೆಲಸಗಳು ಮತ್ತು ಕೆಲಸದ ದೌರ್ಬಲ್ಯ

ಚೌಲ್ಟ್ರಿ ಕೆಲಸ ಅಥವಾ ಮದುವೆ ಮಂಟಪಗಳಲ್ಲಿ ಸಾಮಾನ್ಯ ದಿನಚರಿ ಏನೆಂದರೆ, ಮಹಿಳೆಯರು ಮೊದಲ ದಿನ ಬೆಳಿಗ್ಗೆ ಸುಮಾರು 6 ಗಂಟೆಗೆ ಅಲ್ಲಿಗೆ ಹೋಗುತ್ತಾರೆ, ಆ ದಿನ ತಡರಾತ್ರಿಯವರೆಗೆ ಕೆಲಸ ಮಾಡುತ್ತಾರೆ. ಮರುದಿನ ಸಂಜೆ ಅಥವಾ ತಡರಾತ್ರಿಯ ವೇಳೆಗೆ ಅವರ ಕೆಲಸ ಪೂರ್ಣಗೊಳ್ಳುತ್ತದೆ. ಒಂದು ರಾತ್ರಿಯನ್ನು ಚೌಲ್ಟ್ರಿಯಲ್ಲಿ ಅಥವಾ ಗೃಹ ಪ್ರವೇಶವಿರುವ ಮನೆಯಲ್ಲಿ ಕಳೆಯಬೇಕು. ಪಾರ್ಟಿ ಹಾಲ್ ಅಥವಾ ದೇವಸ್ಥಾನಗಳಲ್ಲಿ ಸಾಮೂಹಿಕ ಅನ್ನಸಂತರ್ಪಣೆ ಆಗಿದ್ದರೆ ಈ ದಿನಚರಿ ಬದಲಾವಣೆಯಾಗಿ ಅದು ಹೆಚ್ಚಾಗಿ ಒಂದು ದಿನದಲ್ಲೇ ಮುಕ್ತಾಯವಾಗಬಹುದು. ಒಂದು ತಿಂಗಳಲ್ಲಿ ಅವರು ಸುಮಾರು 15 ದಿನಗಳ ಗರಿಷ್ಠ ಉದ್ಯೋಗವನ್ನು ಪಡೆಯಬಹುದು ಅಂದರೆ ವರ್ಷದಲ್ಲಿ ಸರಾಸರಿ ಆರು ತಿಂಗಳ ಕೆಲಸ. ಉಳಿದ ಸಮಯದಲ್ಲಿ ಅವರಲ್ಲಿ ಕೆಲವರು ಮನೆಕೆಲಸ ಮಾಡುತ್ತಾರೆ ಅಥವಾ ಕೆಲವರು ತಮ್ಮ ಆದಾಯಕ್ಕೆ ಪೂರಕವಾಗಿ ಮನೆಯಲ್ಲಿ ಬೀಡಿ ಕಟ್ಟುತ್ತಾರೆ.

## ಉದ್ಯೋಗದ ರಚನೆ / ಆಜ್ಞೆಯ ಸರಪಳಿ

ಮಹಿಳೆಯರನ್ನು ನೇರವಾಗಿ ಚೌಲ್ಟ್ರಿ ಅಥವಾ ಪಾರ್ಟಿ ಹಾಲ್ ಮಾಲೀಕರು ಅಥವಾ ಈ ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವ ಗ್ರಾಹಕರಿಂದ ನೇರವಾಗಿ ನೇಮಿಸಿಕೊಳ್ಳದ ಕಾರಣ ಉದ್ಯೋಗದ ರಚನೆಯು ಅನೇಕ ಪದರಗಳದ್ದಾಗಿದೆ. ವಾಸ್ತವವಾಗಿ ಈ ಉದ್ಯೋಗದ ಚೌಕಟ್ಟಿನ ಎರಡು ತುದಿಯಲ್ಲಿರುವ ಗ್ರಾಹಕ ಮತ್ತು ಚೌಲ್ಟ್ರಿ ಕೆಲಸಗಾರನನ್ನು ನೇರವಾಗಿ ಕೂಡಿಸುವಂತೆಯೇ ಇಲ್ಲ. ಕೇಂದ್ರದಲ್ಲಿರುವ ಚೌಲ್ಟ್ರಿ ಮಾಲೀಕರು, ಅವರ ಸುತ್ತ ಉಪಗುತ್ತಿಗೆದಾರ, ಆಹಾರದ/ಟೆಂಟ್‌ಹೌಸ್‌ನ ಗುತ್ತಿಗೆದಾರರಿರುತ್ತಾರೆ. ಆಹಾರದ/ ಟೆಂಟ್ ಹೌಸ್ ಗುತ್ತಿಗೆದಾರರು ಸಾಮಾನ್ಯವಾಗಿ ಮಹಿಳೆಯರನ್ನು ನೇಮಿಸಿಕೊಳ್ಳುತ್ತಾರೆ, ಸಮುದಾಯದ ಹಿರಿಯ ಮಹಿಳೆಯೊಬ್ಬಳು ಸ್ಥಳೀಯ ಉಪ ಗುತ್ತಿಗೆದಾರರಾಗಿದ್ದು ಕೆಲಸಗಾರರನ್ನು "ಸರಬರಾಜು" ಮಾಡುತ್ತಾರೆ. ಬನ್ನೇರುಘಟ್ಟದಲ್ಲಿ ನಾವು ಭೇಟಿಯಾದ ಪ್ರತಿಯೊಬ್ಬ ಮಹಿಳೆಯೂ ಪ್ರತ್ಯೇಕ ತಂಡಗಳ ಭಾಗವಾಗಿದ್ದಾರೆ, ಅವರು ಆಹಾರದ/ ಟೆಂಟ್‌ಹೌಸ್ ಗುತ್ತಿಗೆದಾರರ ಮೂಲಕ ಹೋಗದೆ ನೇರವಾಗಿ ನಿರ್ದಿಷ್ಟ ಚೌಲ್ಟ್ರಿಗಳು ಮತ್ತು ಅದರ ಮಾಲೀಕರೊಂದಿಗೆ ಸಂಪರ್ಕ ಹೊಂದಿದ್ದಾರೆ. ಎಲ್ಲಾ ಪಾವತಿಗಳನ್ನು ಉಪ ಗುತ್ತಿಗೆದಾರರ ಮೂಲಕ ಕಳುಹಿಸಲಾಗುತ್ತದೆ, ಗುತ್ತಿಗೆದಾರರು ನೀಡಿದ ಮೊತ್ತದಿಂದ ಅವರು 'ಪ್ರಯಾಣಕ್ಕಾಗಿ' ಎಂದು ಒಂದು ಭಾಗವನ್ನು ತೆಗೆದಿರಿಸಿಕೊಳ್ಳುತ್ತಾರೆ. ಉಪ ಗುತ್ತಿಗೆದಾರರು ಸ್ಥಳೀಯ ವಯಸ್ಸಾದ ಮಹಿಳೆಯಾಗಿರುವುದರಿಂದ ಸಾಮಾನ್ಯವಾಗಿ ಹೆಚ್ಚಿನ ಘರ್ಷಣೆ ಇರುವುದಿಲ್ಲ. ಏಕೆಂದರೆ ಅವರು ಸಾಮಾನ್ಯವಾಗಿ ತಾಯಿಯ ಭಾವನೆಯಿಂದ ಅತ್ಯಂತ

ರಕ್ಷಣಾತ್ಮಕವಾಗಿ ವರ್ತಿಸಿ ಕಿರಿಯ ಮಹಿಳೆಯರ ಗೌರವವನ್ನು ಪಡೆಯುತ್ತಾರೆ. ಜನತಾ ಕಾಲೋನಿಯ 53 ವರ್ಷದ ಉಪ ಗುತ್ತಿಗೆದಾರರಾದ ಮಲ್ಲಿಕಾ ಹೇಳುವಂತೆ "ಚಿಕ್ಕ ಹುಡುಗಿಯರನ್ನು ಕೆಲಸಕ್ಕೆ ಕರೆದುಕೊಂಡು ಹೋಗುವುದು ಮತ್ತು ಅವರನ್ನು ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ."

ಆದಾಗ್ಯೂ ಸಾಮಾಜಿಕ ಸಂಬಂಧಗಳ ಅಡಿಯಲ್ಲಿ ಒಪ್ಪಿತವಾಗುವ ಯಾವುದೇ ಶೋಷಣೆಯನ್ನು ಇದು ತಡೆಯುವುದಿಲ್ಲ. ಆದರೆ ಹೆಚ್ಚಿನ ಘರ್ಷಣೆಗಳು ಸಮುದಾಯದೊಳಗೆ ಪರಸ್ಪರ ಮಾತುಕತೆಗಳ ಮೂಲಕ ಪರಿಹರಿಸಲ್ಪಡುತ್ತವೆ. ಜಾಲಿ ಮೊಹಾಲ್‌ನಲ್ಲಿರುವ ಗುಂಪು ಹೇಳಿದಂತೆ:

> "ನಾವು ಕೆಲಸ ಮಾಡುವಾಗ ಅವರು ನಮಗೆ ಕೂಲಿ ಪಾವತಿಸುವ ಆಧಾರದ ಮೇಲೆ ನಮಗೆ ಪ್ರತಿದಿನ ಒಂದು ಚೀಟಿಯನ್ನು ನೀಡುತ್ತಾರೆ. ಕೆಲವೊಮ್ಮೆ ನಾವು ಕೆಲಸ ಮಾಡಿದ ದಿನಗಳ ಸಂಖ್ಯೆಯಲ್ಲಿ ಮೋಸ ಹೋಗುತ್ತೇವೆ, ನಾವು 20 ದಿನ ಕೆಲಸ ಮಾಡಿದರೆ ಕಡಿಮೆ ಮಾಡಿ 16 ದಿನ ಹಾಕುತ್ತಾರೆ. ಆದ್ದರಿಂದ ನಾವೇ ಅದನ್ನು ನಿಗಾವಹಿಸುತ್ತೇವೆ. ನಾವು ಸಹಿ ಮಾಡುವ ರಿಜಿಸ್ಟರ್ ವ್ಯವಸ್ಥೆಯು ಎಲ್ಲಾ ಕಡೆಯಿಲ್ಲ."

ಹಲವು ವರ್ಷಗಳಿಂದ ಉಪ ಗುತ್ತಿಗೆದಾರರ ಸಂಖ್ಯೆ ಹೆಚ್ಚುತ್ತಿದೆ ಎಂಬ ಅಂಶವೂ ಚರ್ಚೆಯಲ್ಲಿ ವ್ಯಕ್ತವಾಯಿತು. ಇದರ ಪರಿಣಾಮವಾಗಿ ಈಗ ಹಲವಾರು ಜನರಿದ್ದು, ಈ ಪ್ರದೇಶಗಳಲ್ಲಿನ ಪ್ರತಿಯೊಂದು ರಸ್ತೆಯೂ ಕನಿಷ್ಠ ಒಬ್ಬ ಗುತ್ತಿಗೆದಾರರನ್ನು ಹೊಂದಿದೆ ಮತ್ತು ಹೆಚ್ಚಿನವರು ಮಹಿಳೆಯರಿದ್ದಾರೆ.

## ವೇತನದ ರಚನೆ

ಚೌಲ್ಟಿ ಕಾರ್ಮಿಕರಿಗೆ ಪಾವತಿಸುವ ವೇತನಕ್ಕೆ ಯಾವುದೇ ನಿರ್ದಿಷ್ಟ ರಚನೆ ಇಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಅದು ಬದಲಾಗುತ್ತಿದ್ದರೂ ಸರಾಸರಿ ವೇತನವು ಅವರು ಕೆಲಸ ಮಾಡುವ ಎರಡು ದಿನಗಳವರೆಗೆ ರೂ.500 ರಿಂದ ರೂ.700/–ಮಾತ್ರ ಸಿಗುತ್ತದೆ. ಇದರಲ್ಲಿ ಸುಮಾರು 100–200 ರೂ.ಗಳನ್ನು ಉಪಗುತ್ತಿಗೆದಾರರು ಪ್ರಯಾಣವನ್ನು ನೋಡಿಕೊಳ್ಳಲು ಕಡಿತಗೊಳಿಸುತ್ತಾರೆ. ಒಮ್ಮೊಮ್ಮೆ ಒಂದು ದಾರಿ ತಮ್ಮದು ಎಂದು ಗುತ್ತಿಗೆದಾರರು ಒಂದು ದಾರಿಗೆ ಹಣ ಕೊಡುತ್ತಾರೆ. ಕೂಲಿ ಪಾವತಿಯಲ್ಲಿ ವಿಳಂಬ ಮತ್ತು ಗ್ರಾಹಕರು ಉಪ ಗುತ್ತಿಗೆದಾರರಿಗೆ ನೀಡಿದ ಸಲಹೆಗಳನ್ನು ಮಹಿಳೆಯರೊಂದಿಗೆ ಹಂಚಿಕೊಳ್ಳದಿರುವ ಬಗ್ಗೆ ಕೆಲವು ದೂರುಗಳಿವೆ.

> "ಚೌಲ್ಟಿಗೆ ಹೋಗುವಾಗ ಅವರು ಎಲ್ಲಾ ಪಾತ್ರೆ ಮತ್ತು ಪದಾರ್ಥಗಳ ಜೊತೆಗೆ ದನಗಳಂತೆ ಟೆಂಪೋಗಳಲ್ಲಿ ನಮ್ಮನ್ನು ತುಂಬುತ್ತಾರೆ. ಹಿಂತಿರುಗುವಾಗ ನಾವು ಸ್ವಂತವಾಗಿ ಹಿಂತಿರುಗುತ್ತೇವೆ."

ಹಕ್ಕಿಪಿಕ್ಕಿ ಕಾಲೋನಿಯಲ್ಲಿರುವಂತೆ, ಕೆಲವು ಸಂದರ್ಭಗಳಲ್ಲಿ ಛತ್ರಗಳು/ಚೌಲ್ಟಿಗಳು ತಮ್ಮ ಗ್ರಾಮ/ಕಾಲನಿ/ಮನೆಗಳಿಗೆ ಸಮೀಪದಲ್ಲಿವೆ. ಹೆಚ್ಚಿನವರನ್ನು ಕೆಲಸಕ್ಕಾಗಿ ಹೊರ ನಗರಗಳಿಗೆ ಕರೆದುಕೊಂಡು ಹೋಗುತ್ತಾರೆ ಮತ್ತು ಅನೇಕ ಸಂದರ್ಭಗಳಲ್ಲಿ ಅವರು ಬೆಂಗಳೂರಿನಿಂದ ಹೊರಗೆ – ಮೈಸೂರು, ಕೃಷ್ಣಗಿರಿ, ಗೋವಾ, ಊಟಿ, ಹೈದರಾಬಾದ್ ಮತ್ತು ಮಹಾರಾಷ್ಟ್ರ ಮತ್ತು ರಾಜಸ್ಥಾನದವರೆಗೂ ಹೋಗಿದ್ದಾರೆ. ಆದರೆ ಅವರು ಊರಿನಿಂದ ಹೊರಗೆ ಹೋದರೂ ಅವರಿಗೆ ಸಿಗುವ ಕೂಲಿ ಒಂದೇ ಆಗಿರುತ್ತದೆ. ಅವರು ಪ್ರಯಾಣಿಸುವಾಗ ಅವರ ಪ್ರಯಾಣದ ದಿನಗಳಲ್ಲಿ ಆಹಾರ ಮತ್ತು ಉಳಿದುಕೊಳ್ಳುವಿಕೆ ಸೇರಿದಂತೆ ಇತರ ಎಲ್ಲಾ ಖರ್ಚುಗಳನ್ನು ನೋಡಿಕೊಳ್ಳುವುದು ಮಾತ್ರ ಹೆಚ್ಚುವರಿ ಪಾವತಿಯಾಗಿದೆ.

ಕಡಿಮೆ ಕೆಲಸ ಮಾಡಲು ಸಿದ್ಧರಿರುವ ವಲಸಿಗರು ಬರುವುದರಿಂದ ಅವರ ವೇತನ ಕಡಿಮೆಯಾಗುತ್ತಿದೆ ಎಂದು ಜಾಲಿ ಮೊಹಲ್ಲಾದಲ್ಲಿ ಕೆಲವರು ಕಳವಳ ವ್ಯಕ್ತಪಡಿಸಿದರು. "ಈಗ ಗುಜರಾತಿಗಳು ಬಂದಿದ್ದಾರೆ ಮತ್ತು 200 ರೂ.ಗೆ ಕೆಲಸ ಮಾಡಲು ಸಿದ್ಧರಾಗಿದ್ದಾರೆ! ಅವರು ನಮ್ಮನ್ನು ಕೆಲಸದಿಂದ ವಂಚಿತಗೊಳಿಸಿದ್ದಾರೆ ! ವಲಸಿಗರು ಈಗ ನಾವು ಮಾಡುತ್ತಿದ್ದ ಕೆಲಸಗಳನ್ನು ಮಾಡುತ್ತಿದ್ದಾರೆ."

## ಔದ್ಯೋಗಿಕ ಅಪಾಯಗಳು ಮತ್ತು ವೈದ್ಯಕೀಯ ಪರಿಹಾರದ ಕೊರತೆ

ಉದ್ಯೋಗದ ಅನೌಪಚಾರಿಕ ಸ್ವರೂಪವನ್ನು ನೋಡಿದರೆ, ಸಂಪೂರ್ಣವಾಗಿ ಅಗೋಚರವಾಗಿರುವ ಈ ಕೆಲಸವು ಔದ್ಯೋಗಿಕ ಅಪಾಯಗಳನ್ನೊಳಗೊಂಡಿವೆ. ಅವುಗಳಲ್ಲಿ ಪ್ರಾಥಮಿಕವಾಗಿ ನಿರಂತರವಾಗಿ ನೀರಿನಲ್ಲಿ ಕೆಲಸ ಮಾಡುವುದರಿಂದ ಮತ್ತು ದೊಡ್ಡ ಪಾತ್ರೆಗಳನ್ನು ಸ್ವಚ್ಛಗೊಳಿಸುತ್ತಿರುವುದರಿಂದ ಕೈಯಲ್ಲಿ ಊತ, ಉರಿ ಗುಳ್ಳೆಗಳೇಳುವುದು ಸಾಮಾನ್ಯ, ಇದಕ್ಕಾಗಿ ಅವರಿಗೆ ಯಾವುದೇ ವೈದ್ಯಕೀಯ ಪರಿಹಾರ ಅಥವಾ ಖರ್ಚಿನ ಮರುಪಾವತಿ ದೊರಕುತ್ತಿಲ್ಲ. ಕೆಲವು ಸಂದರ್ಭಗಳಲ್ಲಂತೂ ತಮ್ಮ ಜೀವನೋಪಾಯಕ್ಕಾಗಿ ಕೆಲಸ ಮಾಡುವ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತಾರೆ.

ಅಪಘಾತದ ಸಂದರ್ಭಗಳಲ್ಲಿ ಅವರಿಗೆ ನೀಡಲಾದ ಬೆಂಬಲವು ಅತ್ಯಲ್ಪ ರೂ 30 ರಿಂದ "ದೊಡ್ಡ ಮನಸಿದ್ದರೆ" ರೂ 800 ವರೆಗೆ ಇರುತ್ತದೆ. ಮುಂಗಡವಾಗಿ ಹಣವನ್ನು ನೀಡಿದ್ದರೆ ಅದನ್ನು ವೇತನದಿಂದ ವಸೂಲಿ ಮಾಡಲಾಗುತ್ತದೆ. ಬಹುತೇಕ ಎಲ್ಲಾ ಸಂದರ್ಭಗಳಲ್ಲಿ ನೈತಿಕ ಅಥವಾ ಆರ್ಥಿಕ ಬೆಂಬಲದ ವಿಷಯದಲ್ಲಿ ಉಪ ಗುತ್ತಿಗೆದಾರರು ಸಹಾಯ ಮಾಡಲು ಮುಂದೆ ಬರುತ್ತಾರೆ. ಆದರೆ ಗುತ್ತಿಗೆದಾರ, ಮಾಲೀಕರು ಮತ್ತು ಗ್ರಾಹಕರು ಮುಂದೆ ಬರುವುದಿಲ್ಲ. ಒಂದು ವೇಳೆ ಅವರು ಸಹಾಯ ಮಾಡಿದರೆ, ಇನ್ನೂ ಹೆಚ್ಚು ಜಾಗರೂಕರಾಗಿರಬೇಕಿತ್ತು ಎಂದು ಆದ ಅಪಘಾತಗಳಿಗೆ ಅವರನ್ನೇ ದೂಷಿಸುತ್ತಾರೆ. ಗುತ್ತಿಗೆದಾರ ಅಥವಾ ಮಾಲೀಕರ ಕಡೆಯಿಂದ ಮಹಿಳೆಯರ ಹಕ್ಕುಗಳಲ್ಲದಿದ್ದರೂ, ಮೂಲಭೂತ ಮಾನವ ಅಗತ್ಯಗಳ ಬಗ್ಗೆ ಸಂಪೂರ್ಣ ನಿರ್ದಯತೆ ಮತ್ತು ಉದಾಸೀನತೆಯನ್ನು ತೋರಿಸುವ ಅನೇಕ ಕಥೆಗಳು ಪ್ರತಿಯೊಂದು ಪ್ರದೇಶದಿಂದ ಹೊರಹೊಮ್ಮುತ್ತವೆ.

ಎರಡು ಕಥೆಗಳು ವಿಶೇಷವಾಗಿ ಹೃದಯ ವಿದ್ರಾವಕವಾಗಿದ್ದವು.

> ನಾನು 14 ವರ್ಷಗಳಿಂದ ಕೆಲಸ ಮಾಡಿದ್ದೇನೆ. 2 ವರ್ಷಗಳ ಹಿಂದೆ ಕೆಲಸ ಮಾಡುತ್ತಿದ್ದಾಗ ಕಾಲು ಜಾರಿ ಬಿದ್ದಿದ್ದೆ. ಯಾರೂ ಬಂದು ನನ್ನನ್ನು ಕರೆದುಕೊಂಡು ಹೋಗಲಿಲ್ಲ  ಉಪಗುತ್ತಿಗೆದಾರಳಾದ ಚಂದ್ರಮ್ಮ ಮಾತ್ರ ಮಾಡಿದರು. ಅವರು ಬರಿ 30 ರೂಪಾಯಿ ಕೊಟ್ಟು ಮನೆಗೆ ಕಳುಹಿಸಿದರು. ನನ್ನ ಗಂಡನ ಕಾಲು ಕೂಡ ಮುರಿದಿದೆ ಮತ್ತು ನಾನು ಹೆಚ್ಚು ಕೆಲಸ ಮಾಡಲು ಸಾಧ್ಯವಿಲ್ಲ. ನನಗೆ ಇಬ್ಬರು ಮಕ್ಕಳಿದ್ದಾರೆ – ನನ್ನ ಮಗಳು ಮದುವೆಯಾಗಿದ್ದಾಳೆ, ನನ್ನ ಮಗ ಕೆಲಸಕ್ಕೆ ಹೋಗುತ್ತಾನೆ ಆದರೆ ಮನೆಗೆ ಹಣವನ್ನು ನೀಡುವುದಿಲ್ಲ.
>
> **~ ರಂಗಮ್ಮ, 60 ವರ್ಷ, ಎಂ.ಸಿ.ಟಿ.ಸಿ**

> ಎರಡು ವರ್ಷಗಳ ಹಿಂದೆ ನಾನು ಪಾತ್ರೆಗಳನ್ನು ತೊಳೆಯುತ್ತಿದ್ದಾಗ ಜಾರಿ ಬಿದ್ದು ಬೆನ್ನು ಮೂಳೆ ಮುರಿತವಾಯಿತು. 4 ಲಕ್ಷದವರೆಗೆ ಬಂದ ಎಲ್ಲಾ ಖರ್ಚುಗಳನ್ನು ನಾನು ನೋಡಿಕೊಳ್ಳಬೇಕಾಗಿತ್ತು. ನಾನು ಇನ್ನು ಮುಂದೆ ಕೆಲಸ ಮಾಡಲು ಸಾಧ್ಯವಿಲ್ಲ. ಇವು ನನ್ನ ಸ್ವಂತ ವೈಯಕ್ತಿಕ ಸಮಸ್ಯೆಗಳು, ನಾನು ನೋಡಿಕೊಳ್ಳಬೇಕು ಎಂದು ಗುತ್ತಿಗೆದಾರರು ನನಗೆ ಹೇಳಿದರು.
>
> **~ ಕಣಿಯಮ್ಮ, ಜಾಲಿ ಮೊಹಲ್ಲಾ**

ತಮ್ಮ ಕಥೆಯನ್ನು ಹಂಚಿಕೊಂಡ ಕಣಿಯಮ್ಮ ಅವರು, ತಮ್ಮ ಬೆನ್ನುಮೂಳೆಯ ಮೇಲೆ ಗೂನು ಕಾಣಿಸಿಕೊಂಡಿದ್ದು, ಬೆನ್ನು ಮೂಳೆ ಮುರಿದಿದ್ದರ ಫಲವಾಗಿ ತನಗೆ ದೈಹಿಕ ವಿರೂಪವಾಗಿದೆ ಎಂದರು. ಪರಿಹಾರ ಅಥವಾ ನ್ಯಾಯವನ್ನು ಪಡೆಯಲು ಅವರಿಗೆ ಯಾವುದೇ ವೇದಿಕೆ ಇಲ್ಲ.

### ಸಾಲ, ಬೋನಸ್ ಮತ್ತು ಇತರ ಹೆಚ್ಚುವರಿ ಪ್ರಯೋಜನಗಳು:

ಗುತ್ತಿಗೆದಾರರು, ಉಪಗುತ್ತಿಗೆದಾರರು, ಮಾಲೀಕರು ಅಥವಾ ಗ್ರಾಹಕರಿಂದ ಅವರು ಪಡೆಯುವ ಸಲಹೆಗಳ ಹೊರತಾಗಿ ಅವರಲ್ಲಿ ಯಾರಿಗೂ ನೇರವಾಗಿ ತಮ್ಮ ಮಕ್ಕಳ ಶಿಕ್ಷಣ, ಮನೆ ನಿರ್ಮಾಣ ಅಥವಾ ಯಾವುದೇ ಇತರ ತುರ್ತು ಪರಿಸ್ಥಿತಿಗಳಿಗಾಗಿ ಸಾಲದಂತಹ ಯಾವುದೇ ಹೆಚ್ಚುವರಿ ಪ್ರಯೋಜನಗಳನ್ನು ಕೇಳುವಂತಿಲ್ಲ. ಅವರು ಪಡೆಯುವ ಏಕೈಕ ಹೆಚ್ಚುವರಿ "ಪ್ರಯೋಜನ"ವೆಂದರೆ, ದಸರಾ ಹಬ್ಬದ ಸಮಯದಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ವಲಯಗಳಲ್ಲಿ ಭಾರತದ ಹೆಚ್ಚಿನ ಉದ್ಯೋಗದಾತರು ನೀಡುವ ವಾಡಿಕೆಯ ಬೋನಸ್ ಮಾತ್ರ. ಇದೂ ಕೂಡ ಉದ್ಯೋಗದಾತರ ವೈಯಕ್ತಿಕ ಉದಾರತೆಯ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ. ಉದ್ಯೋಗದಾತರು ಅತ್ಯಂತ ಜಿಪುಣರಾಗಿರಬಹುದು ಅಥವಾ ಉದಾರವಾಗಿರಬಹುದು. ಬನ್ನೇರುಘಟ್ಟದ ರತ್ನ ಅವರು ಹಂಚಿಕೊಂಡಂತೆ, "ದಸರಾದಲ್ಲಿ ನಮ್ಮ ಛತ್ರದ ಮಾಲೀಕರಿಂದ 250 ರೂಪಾಯಿ ಬೋನಸ್ ಆಗಿ ಸಿಗುತ್ತದೆ. ಮೊದಲು ಅವರು ನಮಗೆ ಹಳೆಯ ಬಟ್ಟೆಗಳನ್ನು ಕೊಡುತ್ತಿದ್ದರು, ಅದನ್ನು ನಾವು ತಿರಸ್ಕರಿಸಿದ್ದೇವೆ ಮತ್ತು ಬದಲಿಗೆ ನಮಗೆ ಹಣವನ್ನು ನೀಡುವಂತೆ ನಾವು ಹೇಳಿದ್ದೇವೆ.'

ಬನ್ನೇರುಘಟ್ಟದ ಗೌರಿ ಅವರು ಮೇಲ್ನೋಟಕ್ಕೆ ಹೆಚ್ಚು ಉದಾರತೆಯ ಮಾಲೀಕರೊಂದಿಗೆ ಕೆಲಸ ಮಾಡುತ್ತಾರೆ, ಅವರು "ತಮಗೆ, ತಮ್ಮ ಪತಿ ಮತ್ತು ಮಕ್ಕಳಿಗೆ ಬಟ್ಟೆ/ಸೀರೆ ಹೊರತುಪಡಿಸಿ 1000 ರೂಪಾಯಿಗಳನ್ನು ಪಡೆಯುತ್ತೇನೆ" ಎಂದು ಹೇಳಿದರು.

ಕೋವಿಡ್ ಮತ್ತು ಲಾಕ್‌ಡೌನ್ ಸಮಯದಲ್ಲಿ ಈ ಮಹಿಳೆಯರಿಗೆ ಉದ್ಯೋಗ ಮತ್ತು ಜೀವನೋಪಾಯದ ಸಂಪೂರ್ಣ ನಷ್ಟವಾಯಿತು. ಆದರೆ ಕಾರ್ಮಿಕರ ಪರಿಹಾರ ಅಥವಾ ಸರ್ಕಾರದಿಂದ ಯಾವುದೇ ಯೋಜನೆಯ ಅಡಿಯಲ್ಲಿ ಯಾವುದೇ ಪ್ರಯೋಜನಗಳ ಬಗ್ಗೆ ಕೇಳಲು ಅವರಿಗೆ ಯಾರಿಗೂ ತಿಳಿದಿರಲಿಲ್ಲ. ಈಗ ಅವರು ಕೆಲಸ ಮಾಡುತ್ತಿರುವ ಕೊಳೆಗೇರಿಗಳಲಿ ' 'ಸ್ಲಂ ಮಹಿಳಾ ಸಂಘಟನೆ ಯು ಈ–ಶ್ರಮ್ ಕಾರ್ಡಗೆ ನೋಂದಾಯಿಸಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುತ್ತಿದೆ.

## ಅಂಗ ಅಸೂಕ್ಷ್ಮತೆ, ಮೂಲಭೂತ ಸೌಕರ್ಯಗಳ ಕೊರತೆ, ವೈಯಕ್ತಿಕ ಸುರಕ್ಷಿತೆ ಮತ್ತು ಲೈಂಗಿಕ ಕಿರುಕುಳ

ಚೌಲ್ಗಿ ಕೆಲಸಗಾರರು ಪ್ರಧಾನವಾಗಿ ಮಹಿಳಾ ಉದ್ಯೋಗಿಗಳಾಗಿದ್ದರೂ ನಿರ್ದಿಷ್ಟ ಸೌಕರ್ಯಗಳು, ಸುರಕ್ಷತೆ ಮತ್ತು ಭದ್ರತೆಯ ಅಗತ್ಯಕ್ಕೆ ಯಾವುದೇ ಮನ್ನಣೆ ಮತ್ತು ಸೂಕ್ಷ್ಮತೆ ಇಲ್ಲ. ಹೆಣ್ಣಿನ ರಕ್ಷಣೆಗಾಗಿ ಕುಟುಂಬದ ಯಾವುದೇ ಪುರುಷ ಸದಸ್ಯರಿಲ್ಲದೆ ಮಹಿಳೆಯರು ರಾತ್ರಿಗಳನ್ನು ಕಳೆಯುತ್ತಾರೆ ಎಂಬ ಅಂಶವು ಅವರ ಗೌರವ ಮತ್ತು ಪರಿಶುದ್ಧತೆಯ ಪ್ರಶ್ನೆಗಳನ್ನೆಬ್ಬಿಸಿ, ಈ ಕೆಲಸದ ಕಳಂಕಕ್ಕೆ ಕಾರಣವಾಗಿದೆ. ಮತ್ತೊಂದೆಡೆ, ಕೆಲಸದ ಸ್ಥಳದಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಯಾವುದೇ ಕಾಳಜಿಯಿಲ್ಲದಿರುವುದು, ಯುವತಿಯರು ಪರಿಸ್ಥಿತಿಯು ದುರ್ಬಲವಾಗಿರುವುದಕ್ಕೆ ಕಾರಣವಾಗಿದೆ, ಪರಪುರುಷರ ವಿರುದ್ಧ ವಯಸ್ಸಾದ ಮಹಿಳೆಯರು ಅಥವಾ ಉಪ ಗುತ್ತಿಗೆದಾರರೇ ಇವರನ್ನು ಗಿಡುಗಗಳಂತೆ ಕಾಯುತ್ತಿರುತ್ತಾರೆ. ಈ ಸಂದರ್ಭದಲ್ಲಿ, ಚೌಲ್ಗಿ ಎಂದು ಕರೆಯಲ್ಪಡುವ ಈ "ಕೆಲಸದ ಸ್ಥಳ" ದಲ್ಲಿ ಮಹಿಳೆಯರು ಎದುರಿಸುವ ವಿವಿಧ ರೀತಿಯ ಆಕ್ರಮಣಗಳಿಗೆ ವಿವಿಧ ಅಂಶಗಳು ಕೊಡುಗೆ ನೀಡುತ್ತವೆ:

### ಮಕ್ಕಳ ಆರೈಕೆಗೆ ಸೌಲಭ್ಯವಿಲ್ಲ

ಕೆಲಸದ ಸ್ಥಳವು ಯುವ ತಾಯಂದಿರ ಅಗತ್ಯಕ್ಕೆ ಸಂಪೂರ್ಣವಾಗಿ ಕುರುಡಾಗಿದೆ, ಅವರು ತಮ್ಮ ಚಿಕ್ಕ ಮಕ್ಕಳನ್ನು ಕೆಲಸಕ್ಕೆ ಕರೆತರಬೇಕಾಗಬಹುದು ಏಕೆಂದರೆ ಅವರು ಯಾವುದೇ ಕಾರಣಕ್ಕೂ ಅವರನ್ನು ಮನೆಯಲ್ಲಿ ಬಿಡಲು

ಸಾಧ್ಯವಿಲ್ಲ. ಜಾಲಿ ಮೊಹಲ್ಲಾದ ಗುಂಪಿನಲ್ಲಿರುವ ಯುವ ತಾಯಿಯೊಬ್ಬರು ಹಂಚಿಕೊಂಡಂತೆ "ಹೌದು, ಕೆಲವೊಮ್ಮೆ ನಾವು ನಮ್ಮ ಮಕ್ಕಳನ್ನು ಕೆಲಸಕ್ಕೆ ಕರೆದೊಯ್ಯಬೇಕಾಗುತ್ತದೆ ಮತ್ತು ಕೆಲವೊಮ್ಮೆ ಅವರು ಅಡುಗೆಮನೆಗೆ ಹೋಗುತ್ತಾರೆ ಅಥವಾ ಅಡುಗೆಮನೆಯಲ್ಲಿ ಸೋಪಿನಿಂದ ಜಾರಿ ಬೀಳ್ತಾರೆ. ಅಂತಹ ಸಂದರ್ಭಗಳಲ್ಲಿ ನಮ್ಮ ಮಕ್ಕಳನ್ನು ಕರೆತರಬಾರದು ಮತ್ತು ಕರೆತಂದರೆ ಅದು ನಮ್ಮ ಜವಾಬ್ದಾರಿ ಎಂದು ಹೇಳಲಾಗುತ್ತದೆ."

ಇನ್ನೊಬ್ಬ ಮಹಿಳೆ ಹೇಳಿದಂತೆ: "ಗುತ್ತಿಗೆದಾರ ಒತ್ತಾಯಕ್ಕೆ ಅಥವಾ ಮನೆಯಲ್ಲಿ ಕಷ್ಟಕರ ಸಂದರ್ಭಗಳಿಂದ ಹೆರಿಗೆಯಾದ ಐದು ತಿಂಗಳಿಗೇ ಕೆಲಸಕ್ಕೆ ಬರಲು ಒತ್ತಾಯಿಸಲಾಗುತ್ತದೆ. ಕೆಲಸದ ಸ್ಥಳದಲ್ಲಿ ಮಗುವಿಗೆ ಜೋಲಿ ಕಟ್ಟುತ್ತೇವೆ. ಕೆಲವರು ಅನುಮತಿಸುತ್ತಾರೆ ಮತ್ತು ಕೆಲವರು ಅನುಮತಿಸುವುದಿಲ್ಲ."

## ಸ್ನಾನಗೃಹಗಳ ಕೊರತೆ

ಸ್ನಾನಗೃಹಗಳು ಸೇರಿದಂತೆ ಸಂಪೂರ್ಣ ಆವರಣವನ್ನು ಮಹಿಳೆಯರು ಶುದ್ಧ, ಮತ್ತು ಸ್ವಚ್ಛವಾಗಿ ಇಡಬೇಕೆಂದು ಹೇಳುತ್ತಾರೆ ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಚೌಲ್ಟ್ರಿ ಅಥವಾ ಅವರು ಹೋಗುವ ಮನೆಗಳಲ್ಲಿ ಅವರು ಸ್ವಚ್ಛಗೊಳಿಸಲು ಹೇಳಿದ ಶೌಚಾಲಯಗಳಿಗೆ ಅವರಿಗೇ ಪ್ರವೇಶವಿರುವುದಿಲ್ಲ! ಅವರು ಮುಟ್ಟಾದಾಗ ಮತ್ತು ತಮ್ಮ ಬಟ್ಟೆಗಳನ್ನು ಬದಲಾಯಿಸಲು, ತಮ್ಮನ್ನು ಸ್ವಚ್ಛಗೊಳಿಸಿಕ್ಕೊಳ್ಳಲು ಅಥವಾ ಪ್ಯಾಡ್ ಗಳನ್ನು ಬದಲಾಯಿಸಲು ಖಾಸಗಿ ಸ್ಥಳಾವಕಾಶವಿಲ್ಲದಿದ್ದಾಗ, ಗಟಾರಗಳು ಮತ್ತು ಶೌಚಾಲಯಗಳ ಪಕ್ಕದಲ್ಲಿರುವ ಚರಂಡಿಗಳಂತಹ ಸಾರ್ವಜನಿಕ ಸ್ಥಳಗಳಿಗೆ ಹೋಗಬೇಕಾಗುತ್ತದೆ. ಇದು ಅಮಾನವೀಯ ಮತ್ತು ಅಸುರಕ್ಷಿತ! ಅಂಥಹ ಸಂದರ್ಭಗಳನ್ನು ಅವರು ನಿಭಾಯಿಸುತ್ತಾರೆ ಎಂಬುದನ್ನು ಕೇಳಲು ಹೃದಯ ವಿದ್ರಾವಕವಾಗಿತ್ತು.

- ನನ್ನ ಕೆಲಸ ಹೆಚ್ಚಾಗಿ ಎಲೆಗಳನ್ನು (ಎಲೆಗಳನ್ನು) ತೆಗೆಯುವುದು ಮತ್ತು ಪಾತ್ರೆಗಳನ್ನು ಸ್ವಚ್ಛಗೊಳಿಸುವುದು. ಮನೆಗಳನ್ನು ಸಹ ಸ್ವಚ್ಛಗೊಳಿಸಲು ಕೇಳಿಕೊಳುತ್ತಾರೆ. ಆದರೆ ನಮಗೆ ಸ್ನಾನಗೃಹಕ್ಕೆ ಹೋಗಲು ಬಿಡುವುದಿಲ್ಲ. ಚೌಲ್ಟ್ರಿಗಳಲ್ಲಿ ಕೆಲಸಕ್ಕೆ ಹೋಗುವ ನಮ್ಮಂತಹವರ ಬಗ್ಗೆ ಯಾರೂ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.
- ನಾವು ಚೌಲ್ಟ್ರಿಯಲ್ಲಿದ್ದಾಗ ನಾವು ಬಾತ್ ರೂಮ್ ಅನ್ನು ಬಳಸಬಹುದು ಆದರೆ ನಾವು ಬೆಂಗಳೂರಿನಿಂದ ಹೊರಗೆ ಹೋದಾಗ ನಾವು ಬಯಲಲ್ಲಿ ಅಥವಾ ಹತ್ತಿರದ ಮೋರಿಗಳಲ್ಲಿ ಹೋಗಬೇಕು. ನಮಗೆ ಮಲಗಲು ಹಾಸಿಗೆ ಸಿಗುವುದಿಲ್ಲ – ಸಿಕ್ಕರೆ ಅದು ರಸ್ತೆ ಮಾತ್ರ.
- ಕಾರ್ಯಕ್ರಮ/ ಸಮಾರಂಭಗಳು ಪ್ರಾರಂಭವಾಗುವವರೆಗೂ ಶೌಚಾಲಯಗಳನ್ನು ತೆರೆಯುವುದಿಲ್ಲ. ಶೌಚಕ್ಕೆ ಎಲ್ಲಿ ಬೇಕಾದರೂ ಹೋಗಬಹುದು ಎಂದು ಅವರು ಹೇಳುತ್ತಾರೆ. ನಮಗೆ ಪಿರಿಯಡ್ಸ್ ಆದಾಗ ನಾವು ನಿಜವಾಗಿಯೂ ಶೌಚಾಲಯವಿಲ್ಲದೆಯೇ ಒದ್ದಾಡುತ್ತೇವೆ. ಎಷ್ಟೋ ಬಾರಿ ಟೇಬಲ್ ಮತ್ತು ಕುರ್ಚಿಯ ನಡುವೆ ನಮ್ಮ ಪ್ಯಾಡ್‌ಗಳನ್ನು ಬದಲಾಯಿಸಬೇಕು.
- ಛತ್ರದಲ್ಲಿ ಶೌಚಾಲಯಕ್ಕೆ ಹೋಗಲು ನಮಗೆ ಅವಕಾಶವಿಲ್ಲ ಮತ್ತು ನಾವು ಸಾರ್ವಜನಿಕ ಚರಂಡಿಗಳ ಸುತ್ತ ಅಥವಾ ಹೊಲಗಳಲ್ಲಿ ಹೊರಗೆ ಹೋಗಬೇಕು.

## ಸುರಕ್ಷಿತ ಮಲಗುವ ಸೌಲಭ್ಯಗಳ ಕೊರತೆ

ಬನ್ನೇರುಘಟ್ಟದಂತಹ ಅಪರೂಪದ ಚೌಲ್ಟ್ರಿ ಮಾಲೀಕರು ಮಹಿಳೆಯರಿಗೆ ಮಲಗಲು ಮತ್ತು ಉಳಿದುಕೊಳ್ಳಲು ಪ್ರತ್ಯೇಕ ರೂಮುಗಳನ್ನು ಕಟ್ಟಿಸಿಟ್ಟಿದ್ದಾರೆ. ಇತರ ಎಲ್ಲ ಕಡೆಗಳಲ್ಲಿ ರಾತ್ರಿ ವೇಳೆ ಉಳಿದುಕೊಳ್ಳಲು ಕೊಠಡಿಗಳನ್ನು ಇಟ್ಟುಕೊಂಡಿದ್ದರೂ, ಮಹಿಳೆಯರಿಗೆ ಮಲಗಲು ಪ್ರತ್ಯೇಕ ಜಾಗವನ್ನು ನೀಡಿಲ್ಲ ಎಂದು ಮಹಿಳೆಯರು ಹೇಳಿದ್ದಾರೆ. ಟೆಂಟ್‌ಗಳ ಒಳಗೆ ಅಥವಾ ಸುರಕ್ಷತೆ ಮತ್ತು ಭದ್ರತೆ ಇಲ್ಲದ ದೊಡ್ಡ ಹಾಲ್‌ಗಳಲ್ಲಿ ಅವರು ಮಲಗಬೇಕು. ಲೈಂಗಿಕ

ಕಿರುಕುಳದ ಕಥೆಗಳು ಹೆಚ್ಚು ಸಾಮಾನ್ಯವಾಗಿದೆ. ಆದರೆ ಅದರ ಬಗ್ಗೆ ಕಡಿಮೆ ಮಾತನಾಡಲಾಗುತ್ತದೆ. ಅಂಥ ವೇಳೆಯಲ್ಲಿ ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಉಪ ಗುತ್ತಿಗೆದಾರರು ತಮ್ಮ ಹಿಂಡುಗಳನ್ನು ಯಾವುದೇ ಪರಪುರುಷರಿಂದ, ಸಾಮಾನ್ಯವಾಗಿ ಅವರೊಂದಿಗೆ ಅದೇ ಜಾಗವನ್ನು ಹಂಚಿಕೊಳ್ಳುವ ಅಡುಗೆಯವರಿಂದ ರಕ್ಷಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ, ವಿಭಿನ್ನ ಗುಂಪುಗಳಿಂದ ಅನುಭವಗಳು ಒಂದೇ ರೀತಿದ್ದಾಗಿದ್ದು ಆಶ್ಚರ್ಯಕರವಲ್ಲದಿದ್ದರೂ ಖೇದಕರ ಸಂಗತಿಯಾಗಿದೆ.

- ನಮಗೆ ಮಲಗಲು ಸ್ವಲ್ಪವೂ ಜಾಗವಿರುವುದಿಲ್ಲ – ಇದ್ದರೂ ಅದು ಅಡುಗೆ ಮನೆಯಲ್ಲಿ ತರಕಾರಿಗಳ ರಾಶಿಗಳ ನಡುವೆ ಇರುತ್ತದೆ.
- ನಾವು ಕೆಲಸದ ಮೇಲೆ ಬೇರೆ ಊರುಗಳಿಗೆ ಪ್ರಯಾಣಿಸುತ್ತೇವೆ. ನಾವು ಸಾಮಾನ್ಯವಾಗಿ ದೇವಸ್ಥಾನದ ಕೆಲಸಕ್ಕೆ ಹೊರಗೆ ಹೋಗುತ್ತೇವೆ. ಅನಂತಪುರ, ಕೃಷ್ಣಗಿರಿ, ಮೈಸೂರಿಗೆ ಹೋಗಿದ್ದೇನೆ. ನಾವು ಹೋದಾಗ ಅವರು ನಮಗೆ ಮಲಗಲು ಒಂದು ಜಮಖಾನೆಯನ್ನು ನೀಡುತ್ತಾರೆ. ಸಭಾಂಗಣದ ಒಂದು ಮೂಲೆಯಲ್ಲಿ ಮಲಗುತ್ತೇವೆ. ಅಲ್ಲಿ ಸಾಮಾನ್ಯವಾಗಿ ನಮಗೆ ಸ್ನಾನ ಇತ್ಯಾದಿಗಳಿಗೆ ಸ್ಥಳವಿಲ್ಲ. ಒಮ್ಮೆ ಮುತ್ತತ್ತಿಗೆ ಹೋದಾಗ ನಾವು ನದಿಯಲ್ಲಿ ಸ್ನಾನ ಮಾಡಿದೆವು ಮತ್ತು ಅದು ಚೆನ್ನಾಗಿತ್ತು.
- ಅವರು ನಮಗೆ ಮಲಗಲು ಕಂಬಳಿ ಅಥವಾ ಕಾರ್ಪೆಟ್ಗಳನ್ನು ಸಹ ನೀಡುವುದಿಲ್ಲ. ನಮ್ಮ ಬಟ್ಟೆ ಒದ್ದೆಯಾಗಿದ್ದರೆ ಅಡುಗೆಮನೆಯಲ್ಲಿನ ಒಲೆಯ ಬೆಂಕಿಯಲ್ಲಿ ಬೆಚ್ಚಗೆ ನಾವೇ ಒಣಗಿಸಿಕೊಳ್ಳುತ್ತೇವೆ. ಬೆಚ್ಚಗಿರಲು ಮತ್ತು ಸುರಕ್ಷತೆಗಾಗಿ ನಾವು ಅಲ್ಲೇ ಗೋಡೆಯ ಪಕ್ಕದಲ್ಲಿ ಮಲಗುತ್ತೇವೆ.
- ಕೆಲವು ಸಂದರ್ಭಗಳಲ್ಲಿ ನಮಗೆ ಯಾವುದೇ ಸುರಕ್ಷತೆ ಮತ್ತು ಭದ್ರತೆ ಇಲ್ಲ. ನನ್ನ ಹುಡುಗಿಯರನ್ನು ನನ್ನ ಒಂದು ಬದಿಯಲ್ಲಿ ಮಲಗಿಸಿಕೊಂಡು, ರಾತ್ರಿಯಲ್ಲಿ ಯಾರಾದರೂ ಬಂದು ಆಕ್ರಮಣ ಮಾಡಲು ಪ್ರಯತ್ನಿಸಿದರೆ ನನ್ನ ಸ್ವಂತ ಕೈ ಮತ್ತು ಕಾಲುಗಳಿಂದ ಅವರನ್ನು ಮುಚ್ಚಿಕೊಂಡು ನಾನು ಅವರನ್ನು ರಕ್ಷಿಸುತ್ತೇನೆ.
- ರಾತ್ರಿಗಳಲ್ಲಿ ನಾವು ಮಲಗುವ ಸಮಯದಲ್ಲಿ ನಾನು ಎಲ್ಲಾ ಯುವತಿಯರನ್ನು ಒಂದು ಬದಿಯಿಂದ ಒಳಗೆ ಮಲಗಿಸಿ ಅವರನ್ನು ರಕ್ಷಿಸಲು ಹೊರ ಅಂಚಿನಲ್ಲಿ ಮಲಗುತ್ತೇನೆ.
- ಭಟ್ಟರುಗಳು ಆಗಾಗ ಹುಡುಗಿಯರ ಬಳಿ ಸುಳಿಯುತ್ತಾರೆಂದು ನಮಗೆ ತಿಳಿದರೆ, ಅಂಥಾದ್ದು ಸಂಭವಿಸಿದಾಗ, ಹುಡುಗಿಯರು ಮಲಗಿದ ಸಂದರ್ಭದಲ್ಲಿ ನಾವು ಕಾವಲು ಕಾಯುತ್ತೇವೆ.

## ಸುರಕ್ಷಿತ ಚಲನಶೀಲತೆಯ ಕೊರತೆ

ಮಹಿಳೆಯರ ಕೆಲಸವೂ ಸಂಜೆಗೆ ತಡವಾಗಿ ಮುಗಿಯುತ್ತದೆ ಎಂಬುದು ಗೊತ್ತಿದ್ದರೂ ಕೂಡ, ಉದ್ಯೋಗದಾತರಲ್ಲಿ ಯಾರೂ ಅವರನ್ನು ಸುರಕ್ಷಿತವಾಗಿ ಮನೆಗಳನ್ನು ತಲುಪಿಸುವ ವ್ಯವಸ್ಥೆ ಮಾಡುವ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಅದೇ ಸಮುದಾಯದ ಹಿರಿಯ, ಉಪ ಗುತ್ತಿಗೆದಾರರು ಮಹಿಳೆಯರನ್ನು ಸುರಕ್ಷಿತವಾಗಿ ತಮ್ಮ ಮನೆಗೆ ಹಿಂದಿರುಗಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ. ಎಷ್ಟೇ ತಡವಾದರೂ ತಮ್ಮ ಮನೆ ತಲುಪುವ ಜವಾಬ್ದಾರಿ ಆ ಮಹಿಳೆಯರದ್ದೇ. ಇದು ಅವರನ್ನು ಬೀದಿ ಕಾಮಣ್ಣರ ಎದುರು ತಂದು ನಿಲ್ಲಿಸಿದಷ್ಟೇ ಅಸುರಕ್ಷಿತ. ಅಷ್ಟಲ್ಲದೆ ಅವರು ಕಾನೂನುಬಾಹಿರವಾಗಿ, ಅನೈತಿಕವಾಗಿ ಲೈಂಗಿಕ ವೃತ್ತಿಯನ್ನು ಮಾಡುತ್ತಿದ್ದಾರೆ ಎಂದು ಭಾವಿಸಿ ಕಿರುಕುಳ ನೀಡುವ ಪೊಲೀಸರಿಗೆ ಸುಲಭ ಅವಕಾಶ ಮಾಡಿಕೊಟ್ಟಂತೆ.

- ಒಮ್ಮೆ ನಮ್ಮನ್ನು ಕುಂಬಳಗೋಡು ರಸ್ತೆಯಲ್ಲಿ ಬಿಟ್ಟಾಗ ತಡರಾತ್ರಿಯಲ್ಲಿ ಕೆಲವು ಕುಡುಕರು ನಮ್ಮನ್ನು ಹಿಂಬಾಲಿಸಿದರು. ನಾವು ಹೋಗಿ ಬರುವವರಲ್ಲಿ ಸಹಾಯ ಕೇಳಬೇಕಾಯಿತು.

- ನಾನು ಹೋಗುವ ಮುನೀಶ್ವರ ಚೌಲ್ಟ್ರಿ ನನ್ನ ಮನೆಯ ಹತ್ತಿರದಲ್ಲಿದೆ ಮತ್ತು ನಾನು ನೇರವಾಗಿ ಮಾಲೀಕರಿಗೆ ವರದಿ ಮಾಡುತ್ತೇನೆ. ನನ್ನ ಕೆಲಸ ಹೆಚ್ಚಾಗಿ ಅಡಿಗೆ ಭಟ್ಟರ ಜೊತೆಯಲ್ಲಿದೆ. ನಾವು ತಡವಾಗಿ ಹಿಂತಿರುಗುತ್ತಿದ್ದಾಗ ಪೊಲೀಸರು ನಮ್ಮನ್ನು ನಿಲ್ಲಿಸಿ ಹುಡುಕುತ್ತಾರೆ. ನಾವು ಕೆಲಸದಿಂದ ಹಿಂದಿರುಗುತ್ತಿದ್ದೇವೆ ಎಂದು ತೋರಿಸಲು ಚೌಲ್ಟ್ರಿಯಿಂದ ಮರಳಿ ತರುತ್ತಿರುವ ಆಹಾರವನ್ನು ಅವರಿಗೆ ತೋರಿಸುತ್ತೇವೆ.
- ನಮ್ಮ ಭದ್ರತೆ ಅಥವಾ ಸಾರಿಗೆಯ ಜವಾಬ್ದಾರಿಯನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ನಾವು ಮಾಲೀಕರ ಒಳ್ಳೆಯತನವನ್ನು ಅವಲಂಬಿಸಬೇಕಾಗಿದೆ.
- ಗುತ್ತಿಗೆದಾರರು ನಮ್ಮ ಸುರಕ್ಷತೆಗೆ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಅವರು ನಮಗೆ ಪ್ರಯಾಣಕ್ಕಾಗಿ ಹಣವನ್ನು ನೀಡುತ್ತಾರೆ ಅಷ್ಟೇ! ಕೆಲವೊಮ್ಮೆ ತಡವಾದರೆ, ಅವನು ನಮ್ಮನ್ನು ಟೆಂಪೋ ಮೂಲಕ ಕಳುಹಿಸಬಹುದು. ಇಲ್ಲವಾದರೆ ನಮಗೆ ಕೇಟರಿಂಗ್ ಮಾಡುವವರು ಬಳಸುವ ಅಡುಗೆಮನೆ–ಗೋಡೌನ್‌ನಲ್ಲಿ ನಮ್ಮನ್ನು ಇರಲು ಬಿಡುತ್ತಾರೆ. ಆದರೆ ಗೋಡೌನ್‌ನಲ್ಲಿ ಖಾಯಂ ಆಗಿ ವಾಸಿಸುವ ಪುರುಷರಿಗೆ ಮಾತ್ರ ಕೊಠಡಿ ಇದೆ.

## ಹೊರಗೆ ಬಾರದ ಲೈಂಗಿಕ ಕಿರುಕುಳದ ಕತೆಗಳು

ಒಂದು ಕಡೆ ಮಹಿಳೆಯರು ರಾತ್ರಿಯಲ್ಲಿ ಒಂಟಿಯಾಗಿ ಹೊರಗಿರುವುದು ಮಹಿಳೆಯರ ಬಗ್ಗೆ ಅಗ್ಗವಾಗಿ ಮಾತಾಡಿಕೊಳ್ಳಲು ಅವಕಾಶ ಒಂದು ಕಡೆಯಾದರೆ, ರಾತ್ರಿ ವೇಳೆ ಕೆಲಸದ ಮೇಲೆ ಹೊರಗಿರುವಾಗ ಯುವತಿಯರು ಪುರುಷರೊಂದಿಗೆ ಸಂಬಂಧವನ್ನು ಬೆಳೆಸಿರುವ ಅನೇಕ ನಿದರ್ಶನಗಳೂ ಇವೆ. ಅವರು ತಮ್ಮ ಕೆಲಸದ ಸಂದರ್ಭದಲ್ಲಿ ಭೇಟಿಯಾಗುತ್ತಾರೆ, ಇದು ಹೆಚ್ಚಾಗಿ ಅಡಿಗೆಯವರು ಪುರುಷರಿದ್ದು, ಅಡುಗೆಯವರ ತಂಡದಲ್ಲಿ ಮಹಿಳಾ ಸಹಾಯಕರನ್ನು ತೆಗೆದುಕೊಂಡಾಗ ಆಗುತ್ತದೆ. ಇಂತಹ ಸಂದರ್ಭಗಳಲ್ಲಿ ಬಹುಶಃ ಯುವತಿಯರು ತಮ್ಮ ಸ್ವಂತ ಸಮುದಾಯಗಳಲ್ಲಿ ತಾವು ಅನುಭವಿಸುವ ಪೊಲೀಸ್‌ಗಿರಿ ವಾತಾವರಣದಿಂದ ಸ್ವಲ್ಪ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ಜಾಲಿ ಮೊಹಲ್ಲಾದಲ್ಲಿ ಹುಡುಗಿಯೊಬ್ಬಳು 18 ವರ್ಷದವಳಿದ್ದಾಗ ಉತ್ತರ ಪ್ರದೇಶದ ಅಡುಗೆಯವರೊಂದಿಗಿನ ಸಂಬಂಧದ ನಂತರ ಗರ್ಭಿಣಿಯಾದ ತನ್ನ ಸಹೋದರಿಯ ಬಗ್ಗೆ ಹೇಳಿದ್ದು; ಆಕೆಯನ್ನು ಮದುವೆಯಾಗುವುದಾಗಿ ಭರವಸೆ ನೀಡಿ ಅಂತಿಮವಾಗಿ ಆತ ಮದುವೆ ಆಗಲಿಲ್ಲ. ಅವರು ಈಗ ತನ್ನ ಮಗುವಿನೊಂದಿಗೆ ಒಂಟಿ ತಾಯಿಯಾಗಿ ವಾಸಿಸುತ್ತಿದ್ದಾಳೆ. ಹೆಣ್ಣುಮಕ್ಕಳು ಏಕೆ ಚೌಲ್ಟ್ರಿ ಕೆಲಸಕ್ಕೆ ಹೋಗಬಾರದು ಎಂಬುದನ್ನು ಸಮುದಾಯದಲ್ಲಿ ವಿವರಿಸಲು ಉದಾಹರಣೆಯಾಗಿದ್ದಾಳೆ. ಹುಡುಗರು ಸಾಮಾನ್ಯವಾಗಿ ಪರಾರಿಯಾಗಿರುವ ಹಾಗು ಬಿಹಾರ/ಯುಪಿಯಿಂದ ವಲಸೆ ಬಂದ ಹುಡುಗರೊಂದಿಗೆ ರಾಜ್ಯಗಳಾದ್ಯಂತ ಸಂಭವಿಸಿದ ಬಹಳಷ್ಟು ಪ್ರೇಮ ಪ್ರಕರಣಗಳ ಬಗ್ಗೆಯೂ ಅವರು ಮಾತನಾಡಿದರು. ಒಂದು ಘಟನೆಯಲ್ಲಿ ಅವರು ಹುಡುಗಿಯ ಜೊತೆ ಮಲಗಿದ ನಂತರ ಓಡಿಹೋದ ಹುಡುಗನನ್ನು ಹಿಡಿದು ಅವಳನ್ನು ಮದುವೆಯಾಗಲು ಕರೆತಂದಿದ್ದರು.

ಈ ಕಾರಣಕ್ಕಾಗಿಯೇ ಉಪ ಗುತ್ತಿಗೆದಾರರು ಈ ಕೆಲಸಗಳಿಗೆ ಯುವತಿಯರನ್ನು ತೆಗೆದುಕೊಳ್ಳುವುದನ್ನು ನಿಲ್ಲಿಸಿದ್ದಾರೆ ಎಂದು ಅವರು ಹೇಳಿದರು.

> "ನಾನು ಯುವತಿಯರನ್ನು ಕರೆದುಕೊಂಡು ಹೋಗುವುದನ್ನು ನಿಲ್ಲಿಸಿದ್ದೇನೆ. ಏಕೆಂದರೆ ಅವರು ಪ್ರೀತಿಸಿ ಓಡಿಹೋಗುತ್ತಾರೆ. ನಾನು ಈಗ ಒಂದೆರಡು ಅನುಭವಗಳ ನಂತರ ವಿವಾಹಿತ ಮಹಿಳೆಯರನ್ನು ಮಾತ್ರ ತೆಗೆದುಕೊಳ್ಳುತ್ತೇನೆ."
>
> **~ ಕೋಕಿಲ, ಬನ್ನೇರುಘಟ್ಟ**

ಆದರೆ ದುರದೃಷ್ಟವಶಾತ್ ಸಾರ್ವಜನಿಕ ಗ್ರಹಿಕೆಯಲ್ಲಿ ಬೆರೆತಿರುವ ಓಡಿಹೋದ ವಿವಾಹಗಳ ಮತ್ತು ಲೈಂಗಿಕ ಕಿರುಕುಳದ ವ್ಯವಹಾರಗಳು ಸಮಸ್ಯೆಯನ್ನು ಪ್ರತ್ಯೇಕಿಸಬೇಕಾಗಿದೆ. ಮೊದಲನೆಯದು ವೈಯಕ್ತಿಕ ಆಯ್ಕೆಯ ವಿಷಯವಾಗಿದ್ದರೆ ಇನ್ನೊಂದು ವೈಯಕ್ತಿಕ ಇಚ್ಛೆಗೆ ವಿರುದ್ಧವಾದ ಹಿಂಸೆಯಾಗಿದೆ. ಆದಾಗ್ಯೂ ಕೆಲವೇ ಕೆಲವು ಮಹಿಳೆಯರು ನಿಜವಾಗಿಯೂ ಲೈಂಗಿಕ ಕಿರುಕುಳದ ವಿರುದ್ಧ ಮಾತನಾಡಿದ್ದಾರೆ. ತಮಗೇ ಕಳಂಕ ತಗಲುವ ಭಯ ಮತ್ತು ಈ ತೊಂದರೆಗೆ ಎಲ್ಲಿಯೂ ಪರಿಹಾರ ಸಿಗುವ ಭರವಸೆ ಇಲ್ಲದಿರುವುದೂ ಮಾತನಾಡದಿರಲು ಕಾರಣವಾಗಿದೆ. ಮಹಿಳೆಯರು ನೇರವಾಗಿ ಮಾತನಾಡಬೇಕು ಮತ್ತು ಕೂಗುವ ಮೂಲಕ ಅಥವಾ ಅಥವಾ ಕಪಾಳಮೋಕ್ಷ ಮಾಡುವ ಮೂಲಕ ಕಿರುಕುಳ ನೀಡಲು ಪ್ರಯತ್ನಿಸುವವರನ್ನು ವಿರೋಧಿಸಬೇಕು. ಜಾಲಿ ಮೊಹಲ್ಲಾದ ಯುವತಿಯೊಬ್ಬಳು ಹೇಳುವಂತೆ: "ಹೌದು ನಾವು ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತೇವೆ. ಕೆಲವೊಮ್ಮೆ ನಾವು ಕೂಗುತ್ತೇವೆ, ಅವರಿಗೆ ಕಪಾಳಮೋಕ್ಷ ಮಾಡಿದ್ದೂ ಇದೆ ".

ಅಪರೂಪದ ಪ್ರಕರಣಗಳಲ್ಲಿ, ಉದಾಹರಣೆಗೆ ಬನ್ನೇರುಘಟ್ಟದಲ್ಲಿ ಭಟ್ಟರು ತನ್ನ ಮೇಲೆ ಹಲ್ಲೆಗೆ ಯತ್ನಿಸಿದ ಬಗ್ಗೆ ಲಕ್ಷ್ಮಿ ನೀಡಿದ ದೂರಿನ ಮೇರೆಗೆ ಚೌಲ್ಟಿಯ ವ್ಯವಸ್ಥಾಪಕರು ಕ್ರಮ ಕೈಗೊಂಡು ಮರುದಿನವೇ ಭಟ್ಟರನ್ನು ಕೆಲಸದಿಂದ ಹೊರಹಾಕಿದ್ದಾರೆ.

ಪ್ರತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸ್ಥಾಪಿಸಲಾದ ಎಲ್‌ಸಿಸಿ ಅಥವಾ ಸ್ಥಳೀಯ ದೂರು ಸಮಿತಿಗಳ ಬಗ್ಗೆ ಮಹಿಳೆಯರಿಗೆ ಯಾವುದೇ ಅರಿವು ಇರಲಿಲ್ಲ. ಮತ್ತು ಇದು ಸಂಪೂರ್ಣವಾಗಿ ನಿಷ್ಪರಿಣಾಮಕಾರಿ ವ್ಯವಸ್ಥೆಯಾಗಿದ್ದು, ಇದು ಅನೌಪಚಾರಿಕವಲಯದ ಕೆಲಸಗಾರರಾದ ಗೃಹಕಾರ್ಮಿಕರು ಅಥವಾ ನಿರ್ಮಾಣ ಕಾರ್ಮಿಕರಿಗಾಗಿ ತತ್ಕಾಲಿಕವಾಗಿ ರಚನೆಗೊಳ್ಳಬಹುದಾದ ವ್ಯವಸ್ಥೆಯಾಗಿದ್ದು, ವಾಸ್ತವವಾಗಿ ಇದುವರೆಗೆ ಎಲ್ಲಿಯೂ ರಚನೆಯಾದ ಉದಾಹರಣೆ ಇಲ್ಲ. ಅದರ ಬಗ್ಗೆ ಕೇಳಿದವರೇ ಇಲ್ಲ!

ಆದರೆ ಪ್ರತಿಯೊಬ್ಬರ ಬಳಿಯೂ ಹಂಚಿಕೊಳ್ಳಲು ಒಂದು ಕಥೆ ಇದೆ, ಅವುಗಳಲ್ಲಿ ಕೆಲವು ತೀರಾ ಗಂಭೀರವಾಗಿದ್ದು ಮನಕಲಕುವಂಥವುಗಳಾಗಿವೆ.

ಒಂದು ಸ್ಥಳದಲ್ಲಿ ಮುಖ್ಯ ಅಡುಗೆಯ ಭಟ್ರು ಒಬ್ಬ ಹುಡುಗಿಯ ಮೇಲೆ ಅತ್ಯಾಚಾರ ಮಾಡಿ, ಪರಿಣಾಮವಾಗಿ ಅವರು ಗರ್ಭಿಣಿಯಾದಳು. ಗರ್ಭಪಾತ ಮಾಡಿಸಿಕೊಳ್ಳುವಂತೆ ಅವಳ ಮನೆಯವರಿಂದ ಒತ್ತಡ ಬಿತ್ತು ಎಂದು ನನಗೆ ತಿಳಿದಿದೆ. ಭಟ್ರು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳಲಿಲ್ಲ! ಅದಕ್ಕೇ ಭಟ್ರು ಸಾಮಾನ್ಯವಾಗಿ ಚಿಕ್ಕ ಹುಡುಗಿಯರಿಗೆ ಮಾತ್ರ ಕೇಳ್ತಾರೆ. ಅದಕ್ಕಾಗಿಯೇ ನಾನು ಯುವತಿಯರನ್ನು ಕರೆತರುವುದಿಲ್ಲ.

> ಸೇತುಗಳ ಜಾಗದಲ್ಲೂ ಇಂತಹ ಘಟನೆಗಳು ನಡೆಯುತ್ತವೆ. ನನಗೆ ತಿಳಿದಿರುವಂತೆ ಹುಡುಗಿಯೊಬ್ಬಳು ಇದ್ದಕ್ಕಿದ್ದಂತೆ ಚಿಕ್ಕ ಮಗುವಿನೊಂದಿಗೆ ಬರಲು ಪ್ರಾರಂಭಿಸಿದಳು ಆದರೆ ಅವಳಿಗೆ ಗಂಡನಿಲ್ಲ.
>
> **~ ರೇಣುಕಮ್ಮ, ಜನತಾ ಕಾಲೋನಿ**

> ಮೊದಲು ಚಿಕ್ಕ ಹುಡುಗಿಯರನ್ನು ನಾನೇ ಖುದ್ದಾಗಿ ಕರೆದುಕೊಂಡು ಹೋಗುತ್ತಿದ್ದೆ. ಕ್ರಮೇಣ ಮಾಲೀಕರು ಅವರನ್ನು ಕಳುಹಿಸಲು ಬರಬೇಡಿ, ತಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದರು. ನಾನು ಅವನನ್ನು ನಂಬಿ ತಪ್ಪು ಮಾಡಿದೆ. ಒಬ್ಬ ಹುಡುಗಿ ಗರ್ಭಿಣಿಯಾಗಿಬಿಟ್ಟಳು. ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಅವರು ಬೆದರಿಕೆ ಹಾಕಿದಳು.
>
> **~ ಜಗದಕ್ಕ, ಜಾಲಿ ಮೊಹಲಾ**

> ಬಳುಕುವ ಮತ್ತು ಬೆಳ್ಳಗಿರುವ ಯುವತಿಯರಿಗೆ ತಾಂಬೂಲ ನೀಡುವ "ಸ್ವಾಗತ" ಸಮಿತಿಯಂತಹ ಇತರ ಕೆಲಸಗಳನ್ನು ನೀಡಲಾಗುತ್ತದೆ. ಅವರು ದುಪ್ಪಟ್ಟು ಮೊತ್ತವನ್ನು ಪಡೆಯುತ್ತಾರೆ. ಈ ರೀತಿಯ

ಕೆಲಸದಲ್ಲಿ ಸಾಮಾನ್ಯ ಚೌಲ್ಟ್ರಿ ಕೆಲಸಕ್ಕಿಂತ ಹೆಚ್ಚಿನ ಸುರಕ್ಷತೆ ಮತ್ತು ಭದ್ರತೆ ಇರುತ್ತದೆ. ತುಂಬಾ ತಡವಾದಾಗ ವಾಹನಗಳಲ್ಲಿ ವಾಪಸ್ ಕಳುಹಿಸುತ್ತಾರೆ. ನಾನು ಲೈಂಗಿಕ ಕಿರುಕುಳವನ್ನು ಎದುರಿಸಿದಾಗ ಅದರ ವಿರುದ್ಧ ಪ್ರತಿಭಟಿಸಿದ್ದೇನೆ. ನಾನು ಬೆಳ್ಳಗೆ ಸಣ್ಣಗೆ ಇರಬಹುದು. ಆದರೆ ನನ್ನ ಧ್ವನಿ ಜೋರಾಗಿದೆ. ಒಬ್ಬ ಭಟ್ರು ನೀನು ಚೆನ್ನಾಗಿದ್ದೀಯಾ ನಾನು ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ನನಗೆ ಆಮಿಷ ತೋರಿಸಿದರು. ನಾನು ಪ್ರತಿಭಟಿಸಿದಾಗ ಅವರು ನನ್ನನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ರಾತ್ರಿ ಕುಡಿದು ಬಂದು ನನ್ನ ಪಕ್ಕದಲ್ಲಿ ಮಲಗಿದ್ದ. ನನಗೆ ತುಂಬಾ ಕೋಪ ಬಂದು ಅವನ ಅಂಗಿಯನ್ನು ಹರಿದು ಹಾಕಿದೆ. ಹುಡುಗರು ನನ್ನ ಬಳಿಗೆ ಬಂದು ಅವನು ಬಾಸ್, ನೀವು ಅವನನ್ನು ಹೇಗೆ ಹೀಗೆ ನಡೆಸಿಕೊಳ್ಳುತ್ತೀರಿ?' ಎಂದು ಹೇಳಿದರು. 'ನನ್ನ ಮಟ್ಟಿಗೆ ಅವನು ಒಂದು ತಿಪ್ಪೆ. ಅವನು ಬಾಸ್ ಆಗಿದ್ದರೂ ನಾನು ಹೆದರುವುದಿಲ್ಲ'ಎಂದು ನಾನು ಹೇಳಿದೆ. ಈಗ ಅವನು ನನ್ನನ್ನು ಎಲ್ಲಿಯೂ ಕರೆಯುವುದಿಲ್ಲ. ನನಗೇನೂ ಚಿಂತೆಯಿಲ್ಲ, ನನಗೆ ಇನ್ನೂ ಕೆಲಸ ಸಿಗುತ್ತದೆ.

ಸರ್ಕಾರ ನಮ್ಮ ಬಗ್ಗೆ ಕಾಳಜಿ ವಹಿಸಿಲ್ಲ. ಯಾರಾದರೂ ನಮ್ಮ ಮಾತು ಕೇಳುತ್ತಾರೆ ಎಂದು ನಾವು ಬಹಳ ಸಮಯದಿಂದ ಕಾಯುತ್ತಿದ್ದೇವೆ. ಈ ಉದ್ಯೋಗವನ್ನೇಕೆ ಅನುಮಾನಾಸ್ಪದವಾಗಿ ನೋಡಲಾಗುತ್ತಿದೆ? ನಾವು ರಾತ್ರಿಗಳನ್ನು ಹೊರಗೆ ಕಳೆಯುವುದರಿಂದಲೇ?

**~ ಧನಲಕ್ಷ್ಮಿ, 46 ವರ್ಷ, ಎಂ.ಸಿ.ಟಿ.ಸಿ**

ಧನಲಕ್ಷ್ಮಿಯಂತಹ ಅಪರೂಪದ ಮಹಿಳೆ ಈ ಕೆಲಸದಲ್ಲಿರುವ ಲಿಂಗತ್ವದ ಕಳಂಕ ಮತ್ತು ತಮ್ಮ ಕೆಲಸದ ಸ್ಥಳದಲ್ಲಿ ದೈನಂದಿನ ಲೈಂಗಿಕ ಕಿರುಕುಳದ ವಾಸ್ತವ ಎರಡನ್ನೂ ಪ್ರಶ್ನಿಸುವಲ್ಲಿ ದನಿಯಾಗಿದ್ದಾಳೆ. ಒಟ್ಟಾರೆಯಾಗಿ ಹೇಳುವುದಾದರೆ, ಕೆಲವರು ತಮ್ಮ ಈ ಕೆಲಸದ ಈ ಆಯಾಮದ ಬಗ್ಗೆ ಜಾಗೃತರಾಗಿದ್ದಾರೆ, ಅದನ್ನು ಪರಿಹರಿಸಬೇಕಾದ ಸಾಮೂಹಿಕ ಸಮಸ್ಯೆಯಾಗಿ ಅವರು ನೋಡದಿದ್ದರೂ ಅಥವಾ ವ್ಯಕ್ತಪಡಿಸದಿದ್ದರೂ ಸಹ ತಮ್ಮಷ್ಟಕ್ಕೆ ತಾವು ಪ್ರತಿರೋಧ ತೋರಿಸುತ್ತಿದ್ದಾರೆ. ಆದರೆ ಜಾತಿ ತಾರತಮ್ಯದ ವಿಚಾರದಲ್ಲಿ ಈ ಪ್ರತಿಕ್ರಿಯೆಯನ್ನು ಕಾಣುವುದಿಲ್ಲ.

## ಕೋಣೆಯಲ್ಲಿ ಆನೆ: ಕೆಲಸದ ಸ್ಥಳದಲ್ಲಿ ಜಾತಿ ತಾರತಮ್ಯ

ಲಿಂಗ ತಾರತಮ್ಯದ ಹೊರತಾಗಿ, ಜಾತಿಯು ಚೌಲ್ಟ್ರಿ ಕೆಲಸದಲ್ಲಿ ತೊಡಕಾಗಿರುವ ಇನ್ನೊಂದು ಅಗೋಚರ ಅಂಶವಾಗಿದೆ. ಇಲ್ಲಿನ ದುಡಿಮೆಯು ಮೂಲತಃ ಕೈಕೆಲಸವಾದುದರಿಂದ ಕೈಕೆಲಸವನ್ನು ದಲಿತರು, ಕೆಳಜಾತಿಗಳು ಮತ್ತು ಬಡವರೊಂದಿಗೇ ಸಮೀಕರಿಸಲಾಗುತ್ತಿದೆಯಲ್ಲದೆ, ಒಂದೊಂದು ಕೆಲಸವನ್ನೂ ಯಾವ ಜಾತಿಯವರು ಮಾಡಬಹುದೆಂಬ ಅಲಿಖಿತ ನಿಯಮವಿದೆ. ಆಹಾರ ಮತ್ತು ಆಚರಣೆಗಳೊಂದಿಗೆ "ಶುದ್ಧತೆ (ಮಡಿ)" ಮತ್ತು "ಶುಚಿತ್ವ"ಗಳು ಜೋಡಣೆಯಾಗುತ್ತವೆ. ಸಮಾರಂಭಗಳನ್ನು ಮೇಲ್ಜಾತಿಗಳವರು ನಡೆಸಿದಾಗ, ಅದರ ತಾರತಮ್ಯದ ಪರಿಣಾಮಗಳು ಅಗೋಚರವಾಗಿ ಅಂತರ್ಗತವಾಗಿರುತ್ತದೆ. ಲಿಂಗತಾರತಮ್ಯದಂತೆ ಈ ವಿಷಯವೂ ಕೂಡ ನಾವು ಅದರ ಮೇಲೆ ಕೇಂದ್ರೀಕೃತ ಪ್ರಶ್ನೆಗಳನ್ನು ಕೇಳಲು ಪ್ರಾರಂಭಿಸುವವರೆಗೆ ಮುನ್ನೆಲೆಗೆ ಬರಲಿಲ್ಲ. ಒಮ್ಮೆ ಮಾತನಾಡಲು ಪ್ರಾರಂಭಿಸಿದವರು, ಮತ್ತೆ ಅವರು ನಿಲ್ಲಿಸಲಿಲ್ಲ. ಆದರೆ ಜಾತಿ ಎನ್ನುವುದು ಲಿಂಗತಾರತಮ್ಯಕ್ಕಿಂತ ಹೆಚ್ಚು ಆಂತರ್ಗತವಾದುದಾದರೂ ಅದಕ್ಕೆ ಬಹಿರಂಗವಾಗಿ ವಿರೋಧಿಸುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಲೈಂಗಿಕ ಕಿರುಕುಳದ ವಿರುದ್ಧ ಮಾತನಾಡದವರು ಸಾಕಷ್ಟು ಸಿಗುತ್ತಾರಾದರೂ ಅವರಲ್ಲಿ ಯಾರೂ ತಾವು ಕೆಲಸ ಮಾಡುವ ಮತ್ತು ಮೇಲ್ಜಾತಿಯವರು ಕೆಲಸ ಮಾಡುವ "ಸ್ಥಳ" ವನ್ನು ಪ್ರಶ್ನಿಸಿದವರಿಲ್ಲ.

ಜಾಲಿ ಮೊಹಲ್ಲಾದ ಮಹಿಳೆಯರು ಜಾತಿ ಮತ್ತು ಸಮುದಾಯದ ವಿಚಾರಗಳು ಹೇಗೆ ಕೆಲಸ ಮಾಡುತ್ತವೆ ವಿವರಿಸಿದರು:

> "ನಾವು ಮಾಡುವ ಕೆಲಸವು ಗ್ರಾಹಕರ ಜಾತಿಗಳ ಮೇಲೆ ಅವಲಂಬಿತವಾಗಿದೆ. ಗುಜರಾತಿ ಮತ್ತು ಕನ್ನಡಿಗರಿಗೆ ಇದು ಸೇಠುಗಳಿಗಿಚಿತ ಭಿನ್ನವಾಗಿದೆ. ಸೇಠುಗಳ ಮದುವೆಚುಲ್ಲಿ ತರಕಾರಿ ಕತ್ತರಿಸುವುದು, ಪೂರಿ, ಚಪಾತಿ, ಸಬ್ಜಿ ಸ್ಥರಿದಂತೆ ಅಡುಗೆಗೆ ಸಹಾಚು ಮಾಡಲು ಬನ್ನಿ ಎಚಿದು ಕೇಳಲಾಗುತ್ತದೆ. ಕನ್ನಡದ ಮದುವೆಗಳಿಗೆ ಪಾತ್ರೆಗಳನ್ನು ತೊಳೆಚುಲು ಮಾತ್ರ ಕೇಳಲಾಗುತ್ತದೆ. ಅವರು ತಮ್ಮ ಅಡುಗೆಯವರನ್ನು ಕರೆ ತರುತ್ತಾರೆ."
>
> "ಮದುವೆಗಳನ್ನು ನಡೆಸುವವರು ನಿಮ್ಮನ್ನು ಹೇಗೆ ನೋಡುತ್ತಾರೆ ಮತ್ತು ಹೇಗೆ ನಡೆಸಿಕೊಳ್ಳುತ್ತಾರೆ?" ಎಂಬ ಪ್ರಶ್ನೆಗೆ ಪ್ರತಿಕ್ರಿಯೆಯಾಗಿ ಉತ್ತರ ಸ್ಪಷ್ಟವಾಗಿತ್ತು."
>
> "ಮದುವೆ ನಡೆಸುವವರು ನಮ್ಮನ್ನು ನೋಡುವುದೇ ಇಲ್ಲ, ಅಕಸ್ಮಾತ್ ಅವರು ನೋಡಿದರೆ ನಾವು ತುಂಬಾ ಕೊಳಕು ಎಂದು ಭಾವಿಸಿ ಅವರು ನಮ್ಮನ್ನು ಓಡಿಸುತ್ತಾರೆ. "ಮಾದರ್ ಚೋದ್" ನಂತಹ ಶಾಪ ಪದಗಳನ್ನು ಬಳಸಿ ನಮ್ಮನ್ನು ನಿಂದಿಸುತ್ತಾರೆ, ನೀವು ನಮ್ಮನ್ನು ಏಕೆ ಹೀಗೆ ಸಂಬೋಧಿಸುತ್ತಿದ್ದೀರಿ ಎಂದು ನಾವು ಕೇಳಿದರೆ, ಅವರು ಇದು ನಮ್ಮ ಭಾಷೆ ಎಂದು ಹೇಳುತ್ತಾರೆ

ಬನ್ನೇರುಘಟ್ಟದ ಕಾಂಚನ ಇನ್ನಷ್ಟು ಸ್ಪಷ್ಟನೆ ನೀಡಿದರು.

> "ಬ್ರಾಹ್ಮಣರು ಅಥವಾ ಲಿಂಗಾಯತರು ಕಾರ್ಯಕ್ರಮಗಳನ್ನು ಆಯೋಜಿಸಿದರೆ ನಮಗೆ ಅಡುಗೆಮನೆಯೊಳಗೆ ಪ್ರವೇಶವಿಲ್ಲ. ಅವರು ತಮ್ಮ ಅಡುಗೆಯವರನ್ನು ಕರೆತರುತ್ತಾರೆ. ಇತರ ಸಮುದಾಯದವರಾದರೆ ಅಡುಗೆಮನೆಚೊಳಗೆ ನಮಗೆ ಅವಕಾಶ ಇದೆ, ಅಲ್ಲಿ ನಾವು ತರಕಾರಿಗಳನ್ನು ಕತ್ತರಿಸಲು ಸಹ ಸಹಾಚು ಮಾಡುತ್ತೇವೆ."

ಆದ್ದರಿಂದ ಜಾತಿಯ ಭಾವನೆಯು ಚೌಲ್ಟ್ರಿ ಕೆಲಸದಲ್ಲಿ ಸಾಕಷ್ಟು ಒಪ್ಪಿತ ರೂಢಿಯಾಗಿದೆ.

> ನಮ್ಮನ್ನು ನಡೆಸಿಕೊಳ್ಳುವ ರೀತಿಯ ಮೇಲೆ ಜಾತಿ ಪರಿಣಾಮ ಬೀರುತ್ತದೆ. ಬ್ರಾಹ್ಮಣರಿದ್ದರೆ ನಮಗೆ ಬಡಿಸಲು ಬಿಡುವುದಿಲ್ಲ, ಸ್ವಚ್ಛಗೊಳಿಸಲು ಮಾತ್ರ ತೆಗೆದುಕೊಳ್ಳುತ್ತಾರೆ. ನಾವು ಒಳಗೆ ಅಥವಾ ಬಚ್ಚಲಮನೆ / ತೊಳೆಯುವ ಪ್ರದೇಶಕ್ಕೆ ಹೋಗಲು ಆಸ್ಪದವಿಲ್ಲ. ನಮಗೆ ನೀರು ಬೇಕಾದರೆ ಅದನ್ನು ಮೇಲಿನಿಂದ ಸುರಿಯುತ್ತಾರೆ. ಒಳಗೆ ಹೋಗಲು ನಾವು ಅಸ್ಪೃಶ್ಯರಾಗುತ್ತೇವೆ, ಆದರೆ ನಾವು ಸೇವೆ ಮಾಡುವಾಗ ಅಲ್ಲ! ಬ್ರಾಹ್ಮಣರು ಮತ್ತು ಲಿಂಗಾಯತರು ಬೆಳ್ಳಗೆ, ನೀಟಾಗಿ ಕಾಣುವ ಮಹಿಳೆಯರನ್ನು ಮಾತ್ರ ಕೆಲಸಕ್ಕೆ ಬಯಸುತ್ತಾರೆ.
>
> ಸೇಠುಗಳು ನಮ್ಮನ್ನು ಅಡುಗೆ ಕೋಣೆಗೆ ಮಾತ್ರ ಬಿಡುವುದಿಲ್ಲವಾದರೂ, ರೊಟ್ಟಿ ಮತ್ತು ಪೂರಿಗಳನ್ನು ಮಾಡಲು ಕೇಳುತ್ತಾರೆ.
>
> **~ ಶಾರದಮ್ಮ, 50 ವರ್ಷ, ಜಾಲಿ ಮೊಹಲ್ಲಾ**

'ಇಲ್ಲ, ಅವರು ನಮಗೆ ಆಹಾರವನ್ನು ಬಡಿಸಲು ಕೊಡುವುದಿಲ್ಲ. ಎಂಜಲು (ಖಾಲಿ ತಿಂದ ತಟ್ಟೆಗಳು ಮತ್ತು ಎಲೆಗಳನ್ನು) ಸ್ವಚ್ಛಗೊಳಿಸುವವರಿಗೆ ಬಡಿಸುವ ಕೆಲಸವನ್ನು ಮಾಡಲು ಅವರು ಅನುಮತಿಸುತ್ತಾರೆಯೇ? ನಾವು ಕೆಲವೊಮ್ಮೆ ವಾಂತಿಯನ್ನು ಸ್ವಚ್ಛಗೊಳಿಸಿದ್ದೇವೆ. ನಾವು ಕೀಳು ಕೆಲಸವನ್ನು ಮಾಡುವುದರಿಂದ ನಮ್ಮನ್ನು ಕೀಳಾಗಿ ನೋಡಲಾಗುತ್ತದೆ – ಇದು ನಮ್ಮ ಕೆಲಸ, ನಾವೇ ಮಾಡಬೇಕೆಂದು ಅವರು ನಿರೀಕ್ಷಿಸುತ್ತಾರೆ.

ಜಾತಿ ಇದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ನಮ್ಮನ್ನು ಕರೆದುಕೊಂಡು ಹೋದ ನಂತರವೇ ಯಾರ ಮನೆಯ ಕಾರ್ಯ ಎಂದು ಹೇಳಲಾಗುತ್ತದೆ. ಬ್ರಾಹ್ಮಣರ ಮನೆಗೆ ಹೋಗುತ್ತಿದ್ದರೆ ನಾವು ಎಲ್ಲಿರಬೇಕು ಮತ್ತು ನಾವು ಯಾವುದೇ ಗೆರೆಗಳನ್ನು ದಾಟಬಾರದು ಎಂದು ನಿಖರವಾಗಿ ಹೇಳಲಾಗುತ್ತದೆ.

ಪ್ರತಿಯೊಂದು ಮನೆ ಮತ್ತು ಮನಸ್ಸಿನಲ್ಲಿ ತುಂಬಿರುವ ಜಾತಿ ಮತ್ತು ಲಿಂಗ ತಾರತಮ್ಯಗಳು ಚೌಲ್ಟ್ರಿಯ ಅಡಿಗೆ ಮನೆಗಳಲ್ಲೂ ಹಾಸು ಹೊಕ್ಕಾಗಿ ಬಂದಿದೆ. ಆದ್ದರಿಂದ ಲಿಂಗ ತಾರತಮ್ಯದಂತೆಯೇ ಇದನ್ನು ಸೂಕ್ತ ಕಾನೂನು ನಿಬಂಧನೆಗಳು ಮತ್ತು ದಂಡನಾತ್ಮಕ ಕ್ರಮಗಳ ಮೂಲಕ ಮಾತ್ರ ಪರಿಹರಿಸಲಾಗುವುದಿಲ್ಲ ಮತ್ತು ತೆಗೆದುಹಾಕಲಾಗುವುದಿಲ್ಲ ಮನಸ್ಥಿತಿಯ ಪರಿವರ್ತನೆ ಸಾಮೂಹಿಕ ಮತ್ತು ಸಂಘಟಿತ ಕ್ರಮಗಳ ಮೂಲಕವೂ ಸಹ ಆಗಬೇಕು.

ಆನರು ಸ್ನಾನಗೃಹದ ಹೊರಗೆ ಬಂದು ಕುಡಿಯುತ್ತಾರೆ ಮತ್ತು ವಾಚಿತಿ ಮತ್ತು ಶೌಚವನ್ನೂ ಮಾಡುತ್ತಾರೆ. ಅದನ್ನು ನೋಡಿ ನಾವೇ ವಾಚಿತಿ ಮಾಡಿಕೊಂಡಿದ್ದುಂಟು. ಆದರೂ ಈ ಎಲ್ಲಾ ಕೊಳೆಚುನ್ನು ಸ್ವಚ್ಛಗೊಳಿಸಿದ್ದೇವೆ. ಸ್ವಚ್ಛಗೊಳಿಸುವುದು ನಿಮ್ಮ ಕರ್ತವ್ಯ ಆದ್ದರಿಂದ ಯಾವುದೇ ದೂರುಗಳಿಲ್ಲದೆ ಅದನ್ನು ಮಾಡಿ ಎಂಬ ಧೋರಣೆ. ಸ್ವಲ್ಪ ಶಿಸ್ತನ್ನು ಇಟ್ಟುಕೊಳ್ಳಬೇಕು ಮತ್ತು ಜಾಗವನ್ನು ಸ್ವಚ್ಛವಾಗಿರಿಸಿಕೊಳ್ಳಬೇಕು ಎಚಿದು ಮಾಲೀಕರು ಗ್ರಾಹಕರಿಗೆ ತಿಳಿಸುವಂತಾಗಬೇಕು.

## ಕೋವಿಡ್‌ನ ಪರಿಣಾಮ

ಕೋವಿಡ್‌ನಿಂದ ಅನೌಪಚಾರಿಕವಲಯದ ಎಲ್ಲಾ ದಿನಗೂಲಿಯವರ ಜೀವನೋಪಾಯದ ಮೇಲೆ ಅತ್ಯಂತ ತೀವ್ರವಾದ ರೀತಿಯಲ್ಲಿ ಪರಿಣಾಮ ಆಯಿತು. ಚೌಲ್ಟ್ರಿ ಕಾರ್ಮಿಕರು ಇದಕ್ಕೆ ಹೊರತಾಗಿರಲಿಲ್ಲ. ವಾಸ್ತವವಾಗಿ ಎಫ್.ಜಿ.ಡಿ. ನಡೆಸುವ ಸಮಯದಲ್ಲಿ, ಲಾಕ್‌ಡೌನ್ ಅನ್ನು ತೆಗೆದುಹಾಕಿದ ತಿಂಗಳುಗಳ ನಂತರ, ಸಾಂಕ್ರಾಮಿಕ ರೋಗವು ಕಡಿಮೆಯಾದ ನಂತರವೂ ಮತ್ತು ಕೆಲವು ವೃತ್ತಿಗಳು ಸಹಜತೆಗೆ ಮರಳಿದರೂ, ಅವರು ಇನ್ನೂ ಕೋವಿಡ್‌ನ್ ದುಷ್ಪರಿಣಾಮವನ್ನು ಅನುಭವಿಸುತ್ತಿದ್ದಾರೆ. ಒಂದು ಕಡೆ ಉದ್ಯೋಗಗಳಲ್ಲಿನ ಕಡಿತ, ಇನ್ನೊಂದು ಕಡೆ ಲಾಕ್‌ಡೌನ್ ಸಮಯದಲ್ಲಿ ಅವರಿಗೆ ತೆಗೆದುಕೊಂಡ ಸಾಲದ ಋಣಭಾರ. ಹೆಚ್ಚಿನ ಮಹಿಳೆಯರು ವಾಡಿಕೆಯಂತೆ ಮೈಕ್ರೋಫೈನಾನ್ಸ್ ನಿಂದ ಸಾಲ ತೆಗೆದುಕೊಂಡಿದ್ದಾರೆ. ಆದರೆ ಲಾಕ್‌ಡೌನ್ ಸಮಯದಲ್ಲಿ ಬಡ್ಡಿಯನ್ನು ಪಾವತಿಸಲು ಸಾಧ್ಯವಾಗದಿದ್ದುದು ಸಾಲದ ಹೊರೆಯನ್ನು ಮೂರು ಪಟ್ಟು ಹೆಚ್ಚಿಸಿದೆ. ಜಾಲಿ ಮೊಹಲ್ಲಾದ ಮಹಿಳೆಯರು ಹೇಳಿದಂತೆ:

> "ನಾವು ಮೈಕ್ರೋ ಫೈನಾನ್ಸ್ ನಿಂದ ಸಾಲವನ್ನು ತೆಗೆದುಕೊಳ್ಳುತ್ತೇವೆ – ಬಂಧನ್, ಎಸ್.ಕೆ.ಎಸ್., ಗ್ರಾಮೀಣ, ಹೀಗೆ. ಎಷ್ಟು ಬಡ್ಡಿ ಕೊಡುತ್ತೇವೆ ಎಂಬುದು ನಮಗೆ ಗೊತ್ತಿಲ್ಲ. ಕೋವಿಡ್‌ನಿಂದಾಗಿ ನಾವು 3–4 ತಿಂಗಳವರೆಗೆ ಬಡ್ಡಿಯನ್ನು ಪಾವತಿಸಿಲ್ಲ. ಈಗ ನಮ್ಮ ಸಾಲ 40,000 ರಿಂದ 1 ಲಕ್ಷಕ್ಕೆ ಏರಿದೆ. ನಮ್ಮ ಕಾರ್ಡ ಗಳನ್ನು ಮೈಕ್ರೋಫೈನಾನ್ಸ್ ಕಂಪನಿ ತೆಗೆದುಕೊಂಡು ಹೋಗಿದೆ."\

ಜನತಾ ಕಾಲೋನಿಯ ಮಹಿಳೆಯರು ಮಾತನಾಡಿ, 'ಈ ಹಿಂದೆ 7–8 ಕೆಲಸಗಳನ್ನು ಮಾಡುತ್ತಿದ್ದ ನಾವು ಈಗ ತಿಂಗಳಿಗೆ 2–4 ಕೆಲಸಕ್ಕೆ ಇಳಿದಿದ್ದೇವೆ. ಈಗ ಈ ಕ್ಷೇತ್ರವನ್ನು ಕ್ಯಾಟರರ್‌ಗಳು ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಸಿರುವುದರಿಂದ ನಮಗೆ ಕಡಿಮೆ ಕೆಲಸ ಸಿಗುತ್ತಿದೆ'

ಉದ್ಯೋಗವಿಲ್ಲದೇ ಹೇಗೆ ಬದುಕುತ್ತಿದ್ದೀರಿ ಎಂದು ಕೇಳಿದಾಗ, ಜನತಾ ಕಾಲೋನಿಯ 59 ವರ್ಷದ ರೇವತಿ ಹೇಳುತ್ತಾರೆ;

> "ನಾವು ಸಾಲ ತೆಗೆದುಕೊಳ್ಳುತ್ತೇವೆ ಅಥವಾ ಅಗರಬತ್ತಿ ಮಾಡುತ್ತೇವೆ ಅಥವಾ ಮನೆ ಕೆಲಸ ಮಾಡುತ್ತೇವೆ. ಅಗರಬತ್ತಿಯನ್ನು ಮಾಡಿದರೆ ಇಡೀ ದಿನದ ಕೆಲಸಕ್ಕೆ ದಿನಕ್ಕೆ 120 ರೂ ಸಿಗುತ್ತದೆ. 1000 ಅಗರಬತ್ತಿ ಹೊಸೆದರೆ ನಮಗೆ 30ರೂ ಸಿಗುತ್ತದೆ. ಒಂದು ದಿನಕ್ಕೆ 2000–3000 ಹೊಸೆಯುವುದು ಸಾಧ್ಯವಾಗುತ್ತದೆ"

ಇದಕ್ಕೆ ಜನತಾ ಕಾಲೋನಿಯವಳೇ ಆದ ನಸೀಮಾ 45 ವರ್ಷ,

> "ಹಿಂದೆ ರೋಲಿಂಗ್ ಅಗರಬತ್ತಿಗಾಗಿ ನಾವು ದಿನಕ್ಕೆ 70 ರೂಪಾಯಿಗಳನ್ನು ಪಡೆಯುತ್ತಿದ್ದೆವು ಮತ್ತು ಈಗಲೂ ನಾವು ತಿಂಗಳಿಗೆ 1000/2000 ರೂಪಾಯಿಗಳವರೆಗೆ ಮಾತ್ರ ಗಳಿಸಬಹುದು."

ಕೋವಿಡ್ ನಂತರ ವ್ಯವಸ್ಥೆಯಲ್ಲಿನ ಬದಲಾವಣೆಗಳು ಮತ್ತು ತೆಳ್ಳಗೆ ಬೆಳ್ಳಗೆ ಇರುವಂಥವರಿಗೆ ಪ್ರಾಶಸ್ತ್ಯ ಕೊಡುವ ಹೊಸ ಕೇಟರಿಂಗ್ ವ್ಯವಸ್ಥೆ ಮಹಿಳೆಯರನ್ನು, ವಿಶೇಷವಾಗಿ ಹೊಸ ಅಡುಗೆ ಸಂಸ್ಕೃತಿಗೆ ಹೊಂದಿಕೊಳ್ಳಲು ಸಾಧ್ಯವಾಗದವರನ್ನು ಹೆಚ್ಚು ಮೂಲೆಗುಂಪಾಗಿಸುತ್ತಿದೆ.

## ನಾವು ನೋಡಲು ಬಯಸುವ ಬದಲಾವಣೆಗಳು

ವರ್ಗ, ಜಾತಿ ಮತ್ತು ಲಿಂಗಗಳ ತಾರತಮ್ಯ ಮತ್ತು ಶೋಷಣೆಯ ಗುಣವೇ ಮೂಲವಾಗಿರುವುದರ ಅರಿವಿನಲ್ಲಿ ಮಹಿಳೆಯರು ಹೆಚ್ಚು ಗೌರವಾನ್ವಿತ, ಸಮಾನ ಮತ್ತು ಸುರಕ್ಷಿತ ಕೆಲಸದ ಜಾಗಗಳಿಗಾಗಿ ಈ ಕೆಳಗಿನ ಪ್ರಸ್ತಾಪಗಳನ್ನು ಮಾಡಿದರು. ಸಲಹೆಗಳನ್ನು ಅವರ ಸ್ವಂತ ಮಾತುಗಳಲ್ಲಿ ಪುನರುಚ್ಚರಿಸಲಾಗಿದೆ:

### ಬನ್ನೇರುಘಟ್ಟ

- ಕನಿಷ್ಠ ವೇತನ ನೀಡಬೇಕು ಮತ್ತು ದಿನಕ್ಕೆ ಗರಿಷ್ಠ 8 ಗಂಟೆಗಳ ಕೆಲಸವಿರಬೇಕು. ಹೆಚ್ಚುವರಿ ಸಮಯ ಸೇರಿದಂತೆ ಎರಡು ದಿನಗಳಿಗೆ ಕನಿಷ್ಠ 1000/– ರೂ. ಕೊಡಬೇಕು.
- ಅಡುಗೆಯವರು ತಡವಾಗಿ ಬಂದು ಮತ್ತು ನಮಗೆ ಅಡುಗೆ ಮಾಡಿ ಬಡಿಸಲು ಸಾಧ್ಯವಾಗದಿದ್ದಾಗ ನಮಗೆ ಆಹಾರ / ಚಹಾದ ವ್ಯವಸ್ಥೆಯಾಗಬೇಕು.
- ವೈದ್ಯಕೀಯ ವೆಚ್ಚವನ್ನು ನೋಡಿಕೊಳ್ಳಬೇಕು
- ನಮ್ಮ ಸುರಕ್ಷತೆ ಮತ್ತು ಖಾಸಗಿತನಕ್ಕೆ ಪ್ರತ್ಯೇಕ ಕೊಠಡಿ ಮತ್ತು ಸ್ನಾನಗೃಹಗಳನ್ನು ಒದಗಿಸಬೇಕು
- ಜಾತಿಯ ಆಧಾರದ ಮೇಲೆ ಯಾವುದೇ ತಾರತಮ್ಯ ಇರಬಾರದು
- ಈ ಎಲ್ಲ ವಿಚಾರಗಳಲ್ಲಿ ನಮ್ಮ ಕಾರ್ಮಿಕರ ಮೇಲೆ ಯಾವುದೇ ತಾರತಮ್ಯವನ್ನು ನಾವು ಮಾಡುವುದಿಲ್ಲ ಮತ್ತು ಮಾಡಗೊಡುವುದಿಲ್ಲ ಎಂದು ಸಾರ್ವಜನಿಕ ಹೇಳಿಕೆಯನ್ನು ನೀಡುವುದು ಚೌಲ್ಟಿ ಮಾಲೀಕರ ಜವಾಬ್ದಾರಿಯಾಗಿದೆ.

### ಜಾಲಿ ಮೊಹಲ್ಲಾ

- ದಿನಕ್ಕೆ ಕನಿಷ್ಠ 600/700 ರೂಪಾಯಿ ಕೊಡಬೇಕು.
- ನಾವು ಕಾರ್ಮಿಕರು ಎಂದು ಸ್ಥಾಪಿಸಲು ನಮಗೆ ಮತ್ತು ಗುತ್ತಿಗೆದಾರರ ನಡುವೆ ಒಪ್ಪಂದದ ಕರಾರಿನ ಅಗತ್ಯವಿದೆ
- ನಮಗೆ ನಗದು ನೀಡುವ ಬದಲು ನಮ್ಮ ಸಂಬಳವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಹಾಕಬೇಕು

- ಅಪಘಾತ ಪರಿಹಾರವನ್ನು ನಮ್ಮ ಮಾಲೀಕರು ನೀಡಬೇಕು
- ರಾತ್ರಿ ತಡವಾದಾಗ ನಮಗೆ ಸುರಕ್ಷಿತ ಸಾರಿಗೆಯ ಅಗತ್ಯವಿದೆ

### ಎಂ.ಸಿ.ಟಿ.ಸಿ

- ಮಹಿಳಾ ಕಾರ್ಮಿಕರಾಗಿ ನಮಗೆ ಮನ್ನಣೆ ಬೇಕು. ಅಡುಗೆಯವರು ಮಹಿಳೆಯರೊಂದಿಗೆ ಹೆಚ್ಚು ಜವಾಬ್ದಾರಿಯುತವಾಗಿ ವರ್ತಿಸಬೇಕು ಮತ್ತು ಲಿಂಗ ಸಂವೇದನಾಶೀಲರಾಗಿರಬೇಕು. ಬಟ್ಟೆ ಹರಿದವರನ್ನು ಕೀಳಾಗಿ ಕಾಣಬೇಡಿ.
- ಹಾಸ್ಟೆಲ್ ಕೆಲಸಗಾರರು ನಮಗಿಂತ ಹೆಚ್ಚಿನ ಸೌಲಭ್ಯಗಳನ್ನು ಪಡೆಯುತ್ತಾರೆ. ಮುಜರಾಯಿ ಇಲಾಖೆಯು ನಮಗೆ ಸಹಾಯ ಮಾಡಬೇಕು ಮತ್ತು ಚೌಲ್ಟ್ರಿಗಳಲ್ಲಿ ಕೆಲಸ ಮಾಡುವ ಜಾಗ ಉತ್ತಮವಾಗಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು.

# 3 ಅಧ್ಯಾಯ ಮೂರು: ಬೆಂಗಳೂರಿನಲ್ಲಿರುವ ಚೌಲ್ಟ್ರಿ ಕಾರ್ಮಿಕರ ಅನುಭವ ಕಥನಗಳು

## ಮಮತಾ

ಮಮತಾ, 28 ವರ್ಷದ ಒಂಟಿ ತಾಯಿ, ಇವರು ಬೆಂಗಳೂರಿನ ಎಕೆ ಕಾಲೋನಿ ಸ್ಲಂ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಸ್ಥಳೀಯ ಸರ್ಕಾರಿ ಶಾಲೆಗೆ ಹೋಗುವ 10 ವರ್ಷದ ಮಗಳಿದ್ದಾಳೆ. ಅವರು ಚೌಲ್ಟ್ರಿ ಕೆಲಸಗಾರ್ತಿ ಮತ್ತು ಕುಟುಂಬದ ಏಕೈಕ ನಿರ್ವಾಹಕಿ. ಮದುವೆಯ ಸೀಸನ್ ಮತ್ತು ತಿಂಗಳಲ್ಲಿ ಎಷ್ಟು ಶುಭದಿನಗಳು ಇರುತ್ತವೆ ಎಂಬುದರ ಆಧಾರದ ಮೇಲೆ ಸರಾಸರಿ ವಾರದಲ್ಲಿ 2–3 ಬಾರಿ ಚೌಲ್ಟ್ರಿ ಕೆಲಸಗಾರ್ತಿಯಾಗಿ ಅವರನ್ನು ಕರೆಯುತ್ತಾರೆ. ಆಕೆಯ ಕೆಲಸದ ಅವಧಿಯು ಕನಿಷ್ಟ 12–15 ಗಂಟೆಗಳವರೆಗೆ ಇರುತ್ತದೆ ಮತ್ತು ಪ್ರತಿ ಬಾರಿ ಅವರು ಕೆಲಸಕ್ಕೆ ಹೋದಾಗ ಅವರ ಉದ್ಯೋಗದಾತರಿಂದ ಸುಮಾರು 500–600 ರೂ ಹಣ ಪಡೆಯುತ್ತಾರೆ. ಅವರು ಹಣವನ್ನು ಪಡೆಯುವ ಮೊದಲು ಆ ಹಣವನ್ನು ಬೇರೆ ಬೇರೆ ಜನರ ಮೂಲಕ ರವಾನಿಸಲಾಗುತ್ತದೆ ಮತ್ತು ನಂತರ ಬರುವ ಹಣವು ವಾಸ್ತವವಾಗಿ ಅವರು ಪಡೆಯಬೇಕಿದ್ದಕ್ಕಿಂತ ಸುಮಾರು 50–100 ರೂ ಕಡಿಮೆ ಇರುತ್ತದೆ. ತನ್ನ ಕೆಲಸದ ಸಲುವಾಗಿ ಮಮತಾ ಫಂಕ್ಷನ್/ಮದುವೆ ಭವನದ ಸ್ಥಳಕ್ಕೆ ಹೋಗಬೇಕಾಗುತ್ತದೆ ಮತ್ತು ಕೆಲವೊಮ್ಮೆ ಅವರು ಬೇಗನೆ ಎದ್ದೇಳಬೇಕಾದರೆ ಮತ್ತು ಅವರ ಮನೆಗೆ ಹಿಂತಿರುಗಲು ಕಷ್ಟವಾಗಿದ್ದರೆ ಸ್ಥಳದಲ್ಲಿ ಉಳಿಯಲು ಒತ್ತಾಯಿಸಲಾಗುತ್ತದೆ. ಆ ಸಮಯದಲ್ಲಿ, ಉದ್ಯೋಗದಾತರು ಮತ್ತು ಅವರ ತಂಡವು ಯಾವುದೇ ಸರಿಯಾದ ಮಲಗುವ ವ್ಯವಸ್ಥೆಯನ್ನು ಒದಗಿಸುವುದಿಲ್ಲ. ಅವರು ಮತ್ತು ಅವರ ಸಹೋದ್ಯೋಗಿಗಳು ಸ್ಥಳದಲ್ಲಿ ಮಲಗಿರುವಾಗ ಯಾವುದೇ ಸುರಕ್ಷತೆಯನ್ನು ಹೊಂದಿರುವುದಿಲ್ಲ. ಅವರ ಮತ್ತು ಅವರ ಸಹೋದ್ಯೋಗಿಗಳು ತಮ್ಮ ಸ್ವಂತ ಹೊದಿಕೆಗಳನ್ನು ಅಥವಾ ಅವರಿಗೆ ಮಲಗಲು ಬೇಕಾಗಬಹುದಾದ ಯಾವುದೇ ಇತರ ವಸ್ತುಗಳನ್ನು ಅವರೇ ತೆಗೆದುಕೊಂಡು ಹೋಗಬೇಕಾಗುತ್ತದೆ. ಅವರು ನಿದ್ರಿಸಲು ಪರಸ್ಪರ ಪಾಳಿಗಳನ್ನು ತೆಗೆದುಕೊಳ್ಳುತ್ತಾರೆ, ಇದರಿಂದ ಅವರು ಸುರಕ್ಷಿತವಾಗಿರುವುದನ್ನು ಖಚಿತಪಡಿಸಿಕೊಳ್ಳಬಹುದು. ಅವರ ಕರ್ತವ್ಯಗಳಲ್ಲಿ ತರಕಾರಿಗಳನ್ನು ಕತ್ತರಿಸುವುದು, ಚೌಲ್ಟ್ರಿಯನ್ನು ಸ್ವಚ್ಛಗೊಳಿಸುವುದು, ಪಾತ್ರೆಗಳನ್ನು ತೊಳೆಯುವುದು, ಔತಣಕೂಟದಲ್ಲಿ ಅತಿಥಿಗಳಿಗೆ ಆಹಾರವನ್ನು ಬಡಿಸುವುದು ಮತ್ತು ಅವರ ತಟ್ಟೆಗಳು / ಬಾಳೆ ಎಲೆಗಳನ್ನು ತೆರವುಗೊಳಿಸುವುದು ಆಗಿದೆ. ಅವರು ಅನುಭವಿ ಉದ್ಯೋಗಿ ಅಲ್ಲದಿರುವುದರಿಂದ ಉದ್ಯೋಗದಾತರಿಂದ ಹೆಚ್ಚಿಗೆ ಏನನ್ನು ಕೇಳಲು ಸಾಧ್ಯವಾಗುವುದಿಲ್ಲ.

ಲಾಕ್‌ಡೌನ್ ಸಮಯದಲ್ಲಿ, ಮದುವೆ ಹಾಲ್‌ಗಳನ್ನು ತೆರೆಯಲು ಮತ್ತು ಹೆಚ್ಚಿನ ಜನಸಂದಣಿಯೊಂದಿಗೆ ಸಭೆ ನಡೆಸಲು ನಿರ್ಬಂಧಗಳಿದ್ದವು. ಇದು ಮಮತಾ ಮೇಲೆ ದೊಡ್ಡ ಪರಿಣಾಮ ಬೀರಿತು. ಸುಮಾರು 2 ವರ್ಷಗಳಿಂದ ಅವರಿಗೆ ಯಾವುದೇ ಕೆಲಸ ಇರಲಿಲ್ಲ. ಅವರು ಕಷ್ಟಪಟ್ಟು ಜೀವನ ಸಾಗಿಸಲು ಪ್ರಯತ್ನಿಸುತ್ತಿದ್ದರು. ಮನೆಕೆಲಸಗಳನ್ನು ದಿನಕ್ಕೆ 100–200 ರೂ ಗೆ ಮಾಡುತಿದ್ದಳು. ಯಾವುದೇ ಸಾಮಾಜಿಕ ಭದ್ರತೆ ಇಲ್ಲ ಏಕೆಂದರೆ ಅವರು ಅಸಂಘಟಿತವಲಯದ ಕಾರ್ಮಿಕರು ಎಂದು ಗುರುತಿಸುವ ಗುರುತಿನ ಚೀಟಿಯನ್ನು ಹೊಂದಿಲ್ಲ. ಸರಕಾರ ಆರಂಭಿಸಿದ ಯಾವುದೇ ಸಾಮಾಜಿಕ ಭದ್ರತಾ ಯೋಜನೆಗಳನ್ನು ಪಡೆಯಲು ಅವರಿಗೆ ಸಾಧ್ಯವಾಗಿಲ್ಲ.

## ರುಕ್ಮಿಣಿ

ರುಕ್ಮಿಣಿ ಚೌಲ್ಟ್ರಿ ಕೆಲಸಗಾರ್ತಿಯಾಗಿದ್ದು, ಆಕೆಯ ಪತಿ, ತನ್ನ ಮೂವರು ಮಕ್ಕಳು, ಸಹೋದರಿ ಮತ್ತು ಸಹೋದರಿಯ ಇಬ್ಬರು ಹೆಣ್ಣು ಮಕ್ಕಳೊಂದಿಗೆ ಅವಿಭಕ್ತ ಕುಟುಂಬದಲ್ಲಿ ವಾಸಿಸುತ್ತಿದ್ದಾರೆ. ಚೌಲ್ಟ್ರಿ

1. These are case studies that have been put together by Action Aid Association in the course of preparing for this Study

ಕೆಲಸಗಾರ್ತಿಯಾಗಿ ರುಕ್ಮಿಣಿ ದಿನಕ್ಕೆ ಸುಮಾರು 200–400 ರೂ ಗಳನ್ನೂ ಅವರು ಕೆಲಸ ಮಾಡುವ ಗಂಟೆಗಳ ಆಧಾರದ ಮೇಲೆ ದುಡಿಯುತ್ತಿದ್ದಾರೆ. ಅವರು ಕನಿಷ್ಠ 10–12 ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಯಾವುದೇ ಸಾಂಕ್ರಾಮಿಕ ರೋಗವಿಲ್ಲದ ಸಮಯದಲ್ಲೂ, ಮತ್ತು ತನ್ನ ಉದ್ಯೋಗದಾತನು ಸಮಯಕ್ಕೆ ಹಣವನ್ನು ಪಾವತಿಸಿದರೂ ಸಹ ರುಕ್ಮಿಣಿ ಪ್ರತಿದಿನ ತನ್ನ ಕುಟುಂಬದ ನಿರ್ವಹಣೆಗೆ ಬಳಲುತ್ತಿದ್ದರು. ಸರ್ಕಾರ ಮಂಜೂರು ಮಾಡಿದ ಎಂ ಸಿ ಟಿ ಸ್ಲಂ ಕ್ವಾರ್ಟರ್ಸ್‌ನಲ್ಲಿ ಆಕೆ ತನ್ನ ಕುಟುಂಬದೊಂದಿಗೆ ವಾಸಿಸುತ್ತಿದ್ದಾರೆ. ಅವರ ಮತ್ತು ಸಹೋದರಿ ಕುಟುಂಬವನ್ನು ಪೋಷಿಸಲು ಚೌಲ್ಟ್ರಿ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದಾರೆ ಮತ್ತು ಕೆಲವೊಮ್ಮೆ ಅವರು ಅನಾರೋಗ್ಯದಿಂದ ಬಳಲುತ್ತಿರುವಾಗ ಅವರ ಸಹೋದರಿಯ ಹೆಣ್ಣುಮಕ್ಕಳು ಕೆಲಸಕ್ಕೆ ಬರುತ್ತಾರೆ. ಚೌಲ್ಟ್ರಿ ಕೆಲಸಗಾರರಾಗಿ ತಮ್ಮ ಪಾಳಿಯಲ್ಲಿ, ರುಕ್ಮಿಣಿ ಮತ್ತು ಅವರ ಸಹೋದರಿ ಅವರು ರಾತ್ರಿಯಿಡೀ ಮದುವೆಯ ಹಾಲ್‌ಗಳಲ್ಲಿ ಉಳಿದುಕೊಂಡಿರುವಾಗ ಅಷ್ಟೇನು ಸುರಕ್ಷಿತವಾಗಿರುವುದಿಲ್ಲ ಆದರೆ ಮಲಗುವಾಗ ಒಬ್ಬಬ್ಬರು ಪಾಳಿಗಳನ್ನು ತೆಗೆದುಕೊಳ್ಳುವ ಮೂಲಕ ಸುರಕ್ಷತೆಯಿಂದಿರಲು ಪ್ರಯತ್ನಿಸುತ್ತಿದ್ದಾರೆ. ಅವರ ಸಹೋದರಿ ಮತ್ತು ತನ್ನ ಪತಿ ಗಳಿಸುತ್ತಿರುವ ಕನಿಷ್ಠ ಹಣದಿಂದ, ಅವರು ತಮ್ಮ ಜೀವನವನ್ನು ಪೂರೈಸಲು ಪ್ರಯತ್ನಿಸುತ್ತಿದ್ದಾರೆ. ಆದರೂ ಸಹ ಇನ್ನೂ ಬಿಲ್‌ಗಳನ್ನು ಪಾವತಿಸಲು, ಆಹಾರವನ್ನು ಪಡೆಯಲು ಮತ್ತು ಅವರ ಮಕ್ಕಳ ಶಾಲಾ ಶುಲ್ಕವನ್ನು ಪಾವತಿಸಲು ಸಾಧ್ಯವಾಗುತ್ತಿಲ್ಲ. ಆದರೆ ಲಾಕ್‌ಡೌನ್ ಮತ್ತು ಕ್ವಾರಂಟೈನ್ ನಿಜವಾಗಿಯೂ ರುಕ್ಮಿಣಿ ಮತ್ತು ಅವರ ಕುಟುಂಬದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯ ಮೇಲೆ ಪರಿಣಾಮ ಬೀರಿತು. ಮದುವೆ ಸಭಾಂಗಣಗಳು ಮತ್ತು ತುಂಬಿದ/ಕಿಕ್ಕಿರಿದ ಸಮಾರಂಭಗಳಿಗೆ / ಕೂಟಗಳಿಗೆ ಅವಕಾಶ ನೀಡದ ಕಾರಣ, ರುಕ್ಮಿಣಿ ಮತ್ತು ಅವರ ಸಹೋದರಿ ತಮ್ಮ ಕುಟುಂಬವನ್ನು ನಡೆಸಿಕೊಂಡು ಹೋಗಲು ಮತ್ತು ಇತರ ಸುಸ್ಥಿರ ಉದ್ಯೋಗಗಳನ್ನು ಹುಡುಕಲು ಸಾಧ್ಯವಾಗಲಿಲ್ಲ.

ಕುಟುಂಬವನ್ನು ನಡೆಸುವುದಕ್ಕೆ ಸಹಾಯ ಮಾಡಲು ಅವರು ಸ್ಥಳೀಯ ಲೇವಾದೇವಿದಾರರಿಂದ ಸಾಲವನ್ನು ಪಡೆಯಬೇಕಾಗಿತ್ತು. ಲಾಕ್‌ಡೌನ್ ಅವಧಿಯಲ್ಲಿ ಸರ್ಕಾರವು ಅಂತಹ ಕಾರ್ಮಿಕರಿಗೆ ನೀಡುವ ಸಾಮಾಜಿಕ ಭದ್ರತಾ ಯೋಜನೆಗಳನ್ನು ಪಡೆಯಲು ಆಕೆಯನ್ನು ಅಸಂಘಟಿತ ವಲಯದ ಕಾರ್ಮಿಕ ಎಂದು ಗುರುತಿಸುವ ಗುರುತಿನ ಚೀಟಿಯೂ ಸಹ ಅವಳ ಬಳಿ ಇಲ್ಲ.

## ಹನುಮಕ್ಕ

ಹನುಮಕ್ಕ 44 ವರ್ಷದ ಚೌಲ್ಟ್ರಿ ಕೆಲಸಗಾರ್ತಿಯಾಗಿದ್ದು, 20 ವರ್ಷಗಳಿಂದ ಚೌಲ್ಟ್ರಿ ಕೆಲಸ ಮಾಡುತ್ತಿದ್ದು, ಜನತಾ ಕಾಲೋನಿ ಸ್ಲಮ್ ನಲ್ಲಿ ವಾಸಿಸುತಿದ್ದಾರೆ. ಅವರಿಗೆ ಮಧುಮೇಹ/ ಸಕ್ಕರೆ ಖಾಯಿಲೆಯು ಇದೆ ಮತ್ತು ಹೃದಯದ ಸಮಸ್ಯೆ ಇದೆ. ಸಾಂಕ್ರಾಮಿಕ ರೋಗವು ಅವರ ಆರ್ಥಿಕ ಸ್ಥಿತಿಯಿಂದ ಮಾತ್ರವಲ್ಲದೆ , ಕೊರೋನಾದಿಂದ ಸಹೋದರಿಯನ್ನು ಕಳೆದುಕೊಂಡರು. ಅವರು ವಿಧವೆ, ಮತ್ತು ಅವಳ ಇಬ್ಬರು ಹೆಣ್ಣುಮಕ್ಕಳು ಮದುವೆಯಾಗಿದ್ದಾರೆ. ಆದರೆ ದುಃಖಕರವೆಂದರೆ, ಅವರು ಕೌಟುಂಬಿಕ ಹಿಂಸೆಗೆ ಬಲಿಯಾಗುತ್ತಿದ್ದಾರೆ, ಆದ್ದರಿಂದ ಅವರು ತಮ್ಮ ತಾಯಿಯೊಂದಿಗೆ ಇರಲು ನಿರ್ಧರಿಸಿದ್ದಾರೆ. ಮಗ ನಿರುದ್ಯೋಗಿ ಮತ್ತು ಮನೆಯ ಕಡೆಗೆ ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಸಾಂಕ್ರಾಮಿಕ ರೋಗವು ಅವರು ಸ್ವೀಕರಿಸುತ್ತಿದ್ದ ಏಕೈಕ ಆದಾಯದ ಮೂಲವನ್ನು ಅಡ್ಡಿಪಡಿಸಿತು.

ಸಾಮಾನ್ಯವಾಗಿ, ಅವರು 1 ರಾತ್ರಿ ಮತ್ತು 2 ಹಗಲು ಕೆಲಸ ಮಾಡುತ್ತಾಳೆ, ಇದರಿಂದ ಸುಮಾರು 550–650 ರೂಗಳನ್ನೂ ದುಡಿಯುತ್ತಿದ್ದರು. ಜೊತೆಗೆ ಬೇರೆಯವರ ಮನೆಗಳಲ್ಲಿ ಮನೆಕೆಲಸವನ್ನೂ ಮಾಡುತ್ತಾರೆ. ನೆರೆಹೊರೆಯವರು ಮತ್ತು ಚೌಲ್ಟ್ರಿ ಕೆಲಸಗಾರರೂ ಸಹ ಕೆಲಸದ ಅವಶ್ಯಕತೆ ಇದ್ದರೆ ಅವರಿಗೆ ತಿಳಿಸುತ್ತಾರೆ. ಮದುವೆ ಹಾಲ್‌ಗಳಲ್ಲಿ ಅವರು ಇರಬೇಕಾದ ರಾತ್ರಿಗಳನ್ನು ನಿಭಾಯಿಸುವುದು ಅಷ್ಟು ಸುಲಭವಲ್ಲ. ಸರಿಯಾದ ಸೌಲಭ್ಯಗಳನ್ನು ಒದಗಿಸುವುದಿಲ್ಲ, ಕೇವಲ ಹೊದಿಕೆ ಮತ್ತು ಕೆಲವೊಮ್ಮೆ ಅದನ್ನು ಸಹ ಒದಗಿಸುವುದಿಲ್ಲ. ಅವರು ಕೆಲಸಕ್ಕೆ ಹೋದಾಗಲೆಲ್ಲಾ ತನ್ನದೇ ಆದ ಹೊದಿಕೆಯನ್ನು ಹೊತ್ತುಕೊಂಡು ಹೋಗುತ್ತಾರೆ.

ಅವರು ಪಾತ್ರೆಗಳನ್ನು ಸ್ವಚ್ಛಗೊಳಿಸುತ್ತಾ, ತರಕಾರಿಗಳನ್ನು ಕತ್ತರಿಸುತ್ತಾ, ಹಾಲ್‌ಗಳನ್ನು ಗುಡಿಸುತ್ತಾ ಮತ್ತು ಒರೆಸುತ್ತಾ, ತಟ್ಟೆಗಳಿಗೆ ಊಟವನ್ನು ಬಡಿಸುತ್ತಾ ಮತ್ತು ಶುಚಿಗೊಳಿಸುವ ಕೆಲಸವನ್ನು ಮಾಡಬೇಕು. ಇತ್ಯಾದಿ.

ಅವರು ಕೆಲಸ ಮಾಡುವ ನಿರ್ದಿಷ್ಟ ಸಮಾರಂಭ/ಕಾರ್ಯದಲ್ಲಿ ಏನಾದರೂ ಉಳಿದಿದ್ದರೆ ಮಾತ್ರ ಆಹಾರವನ್ನು ಕೊಟ್ಟುಅವರು ಹಣ ಪಡೆಯುತ್ತಾರೆ. ಅವಳಿಗೆ ಕೆಲಸದ ಪರಿಸ್ಥಿತಿಗಳು ಸಹ ಉದ್ಯೋಗಿ ಸ್ನೇಹಿಯಾಗಿಲ್ಲ. ಅವರು ಒಂದು ದಿನ ರಜೆ ತೆಗೆದುಕೊಂಡರೆ ಅಥವಾ ತುರ್ತು ಪರಿಸ್ಥಿತಿಗಳ ಕಾರಣದಿಂದಾಗಿ ದಿನದ ಅರ್ಧದಾರಿಯಲ್ಲೇ ಹೊರಟು ಹೋದರೆ, ಅವಳನ್ನು ಅನಿಯಮಿತ ಎಂದು ಪರಿಗಣಿಸಲಾಗುತ್ತದೆ ಮತ್ತು ಉದ್ಯೋಗದಾತರು ಅವರನ್ನು ಮತ್ತೆ ಕೆಲಸಕ್ಕೆ ಕರೆಯುವುದಿಲ್ಲ. ಆಕೆಯ ಉದ್ಯೋಗದಾತರು ಮತ್ತು ಅವರ ಮೇಲಧಿಕಾರಿಗಳಲ್ಲಿ ಭ್ರಷ್ಟಾಚಾರದ ವ್ಯವಸ್ಥೆ ಇರುವುದರಿಂದ ಅವರು ಗಳಿಸುವ ಹಣದ ಮೊತ್ತ ಅವರು ಸ್ವೀಕರಿಸಬೇಕಾದದ್ದಕ್ಕಿಂತ ಸುಮಾರು ರೂ.100–200 ಕಡಿಮೆ ಇರುತ್ತದೆ ಮತ್ತು ಹಣವನ್ನು ಸ್ವೀಕರಿಸುವಲ್ಲಿಯೂ ಸಹ 1–2 ದಿನ ವಿಳಂಬವೂ ಆಗುತ್ತದೆ .

ಲಾಕ್‌ಡೌನ್ ನಿರ್ಬಂಧಗಳು ಮತ್ತು ಆದಾಯವಿಲ್ಲದ ಕಾರಣ, ತನ್ನ ಮಧುಮೇಹ ಮತ್ತು ಹೃದಯಕ್ಕೆ ಅಗತ್ಯವಿರುವ ಔಷಧಿಗಳನ್ನು ಖರೀದಿಸಲು ಅವರು ತುಂಬಾ ಕಷ್ಟಪಟ್ಟರು. ಮತ್ತು ಆಕೆಗೆ ತೀವ್ರವಾದ ಆರೋಗ್ಯ ಸಮಸ್ಯೆಗಳಿರುವುದರಿಂದ, ಅವರು ಉತ್ತಮವಾಗಿ ಕಾರ್ಯನಿರ್ವಹಿಸಲು ಮತ್ತು ಚೌಲ್ಟ್ರಿ ಕೆಲಸಕ್ಕೆ ನಿಯಮಿತವಾಗಿ ಹೋಗಲು ಸಾಧ್ಯವಾಗುವುದಿಲ್ಲ ಮತ್ತು ಈ ಕಾರಣದಿಂದಾಗಿ, ಅವರನ್ನು ಆಗಾಗ್ಗೆ ಕೆಲಸಕ್ಕೆ ಕರೆಯುವುದಿಲ್ಲ. ಅವರಿಗೆ ಅಸಂಘಟಿತವಲಯದ ಕಾರ್ಮಿಕರ ಗುರುತಿನ ಚೀಟಿ ಇಲ್ಲದ ಕಾರಣ ಸರ್ಕಾರದಿಂದ ಆರಂಭಿಸಲಾದ ಯಾವುದೇ ಸಾಮಾಜಿಕ ಭದ್ರತಾ ಯೋಜನೆಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

## ಕುಪ್ಪಮ್ಮ

ಕುಪ್ಪಮ್ಮ 43 ವರ್ಷದ ಚೌಲ್ಟ್ರಿ ಕೆಲಸಗಾರ್ತಿಯಾಗಿದ್ದು, ಜನತಾ ಕಾಲೋನಿ ಸ್ಲಂನಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ಅವರು ಪತಿ, ಮಗಳು ಮತ್ತು ಇಬ್ಬರು ಪುತ್ರರೊಂದಿಗೆ ವಾಸಿಸುತ್ತಿದ್ದಾರೆ. ಆಕೆಯ ಪತಿ ಸಾಂದರ್ಭಿಕವಾಗಿ ಕೆಲಸಕ್ಕೆ ಹೋಗುತ್ತಾರೆ ಮತ್ತು ಅವರ ಮಗಳು ದೈಹಿಕವಾಗಿ ಅಂಗವೈಕಲ್ಯ ಹೊಂದಿದ್ದಾಳೆ. ಆಕೆಯ ಒಬ್ಬ ಮಗನಿಗೆ ಮದುವೆಯಾಗಿದ್ದು, ಇನ್ನೊಬ್ಬ ಕೆಲಸ ಮಾಡುತ್ತಿದ್ದಾನೆ. ಸಾರ್ವಜನಿಕ ಸಭೆಗಳು ಮತ್ತು ಮದುವೆ ಮಂಟಪಗಳ ಬಳಕೆಗೆ ಲಾಕ್‌ಡೌನ್ ನಿರ್ಬಂಧಗಳಿಂದಾಗಿ ಅವರು ಕಳೆದ 2 ವರ್ಷಗಳಿಂದ ನಿರುದ್ಯೋಗಿಯಾಗಿದ್ದಾರೆ. ಆಕೆಯ ಮಾಸಿಕ ಕುಟುಂಬದ ಖರ್ಚುಗಳು ಹೆಚ್ಚಾಗಿ ಭರಿಸಲಾಗುತ್ತಿಲ್ಲ ಮತ್ತು ಕುಟುಂಬವನ್ನು ಪೋಷಿಸಲು ಸಾಲವನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಲಾಯಿತು. ಕಳೆದ 3 ತಿಂಗಳಿಂದ ಮನೆ ಬಾಡಿಗೆ ಪಾವತಿಸಿಲ್ಲ.

ಚೌಲ್ಟ್ರಿ ಕೆಲಸಗಾರ್ತಿಯಾಗಿರುವ ಕುಪ್ಪಮ್ಮ ಒಂದು ದಿನಕ್ಕೆ ಸುಮಾರು 250 ರೂ. ಮತ್ತು ರಾತ್ರಿಗೆ ಸುಮಾರು 500 ರೂ ದುಡಿಯುತ್ತಾರೆ. ರಾತ್ರಿಯ ಸಮಯದಲ್ಲಿ ಅವರು ಸ್ಥಳದಲ್ಲಿ ಉಳಿಯಬೇಕಾದಾಗ, ಅವರು ಮತ್ತು ಅವರ ಸಹೋದ್ಯೋಗಿಗಳು ಕೆಲವೊಮ್ಮೆ ಸ್ಟೋರ್ ರೂಂನಲ್ಲಿ ಅಥವಾ ಅಡುಗೆಮನೆಯಲ್ಲಿ ಮಲಗುವಂತೆ ಒತ್ತಾಯಿಸಲಾಗುತ್ತದೆ. ಅವರ ಸುರಕ್ಷತೆಗಾಗಿ ಯಾವುದೇ ಸರಿಯಾದ ಸೌಲಭ್ಯಗಳು ಅಥವಾ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಅವರು ಪಡೆಯುವ ಹಣವು ಒಂದೆರಡು ಜನರ ಮೂಲಕ ಬರುವುದರಿಂದ, ಅವರು ಪಡೆಯಬೇಕಿದ್ದಕ್ಕಿಂತ ಸುಮಾರು 100–200 ರೂ. ಕಡಿಮೆ ಇರುತ್ತದೆ. ಒಂದು ವಾರದಲ್ಲಿ ಸರಾಸರಿ 1–2 ಕೆಲಸದ ಕರೆಗಳು ಮತ್ತು ಇದು ಮಂಗಳಕರ ಋತುವಾಗಿದ್ದರೆ ಒಂದು ತಿಂಗಳಲ್ಲಿ 10 ಕೆಲಸದ ಕರೆಗಳು ಬರಬಹುದು.

ಅವರು ಕೆಲಸ ಮಾಡಬೇಕಾದ ಸ್ಥಳವು ಅವಳ ಮನೆಯಿಂದ ಸಾಕಷ್ಟು ದೂರದಲ್ಲಿರುವುದರಿಂದ ಮತ್ತು ಆದ್ದರಿಂದ ಅವರು ತುಂಬಾ ತಡವಾಗಿ ಮನೆಗೆ ಬರಬೇಕಾಗುತ್ತದೆ ಅಥವಾ ಅಲ್ಲಿಯೇ ಇರಬೇಕಾಗುತ್ತದೆ. ಅವರು ಸಾರಿಗೆಯಲ್ಲಿ ಖರ್ಚು ಮಾಡಬೇಕಾಗಿರುವುದರಿಂದ ಮತ್ತು ಇದು ತುಂಬಾ ಅನಾನುಕೂಲವಾಗಿರುವುದರಿಂದ

ಇದು ಮನೆಯಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಕೆಲಸದ ಕೂಲಿ ಪಾವತಿಯೊಂದಿಗೆ ಉಳಿದ ಆಹಾರವನ್ನು ಅವಳಿಗೆ ನೀಡಲಾಗುತ್ತದೆ.

## ಜಯಲಕ್ಷ್ಮಿ

ಜಯಲಕ್ಷ್ಮಿಗೆ 36 ವರ್ಷ, 2 ಹೆಣ್ಣು ಮಕ್ಕಳ ತಾಯಿ, ಇವರು ಜನತಾ ಕಾಲೋನಿ ಕೊಳೆಗೇರಿಯಲ್ಲಿ ವಾಸವಾಗಿದ್ದಾರೆ. ಆಕೆಗೆ ಯಾವುದೇ ಅಸಂಘಟಿತ ವಲಯದ ಗುರುತಿನ ಚೀಟಿ ಇಲ್ಲ ಮತ್ತು ಮೂಲತಃ ಕೆಲಸದ ಪುರಾವೆಗಳಿಲ್ಲ. ಅವರು ತನ್ನ ಹೆತ್ತವರ ಮನೆಯಲ್ಲಿ ವಾಸಿಸುತ್ತಿರುವವರು ಮತ್ತು ಕುಟುಂಬದ ಏಕೈಕ ನಿರ್ವಾಹಕಿ. ಚೌಲ್ಟಿ ಕೆಲಸಗಾರ್ತಿಯಾಗಿ, ಅವರು ಅಕಾಲಿಕ ಕೆಲಸದ ಸಮಯವನ್ನು ಹೊಂದಿದ್ದಾರೆ ಮತ್ತು ಕಡಿಮೆ ಪರಿಹಾರವನ್ನು ಹೊಂದಿದ್ದಾರೆ. ಅವರು ಚೌಲ್ಟಿ ಕೆಲಸಕ್ಕೆ ಹೋದಾಗಲೆಲ್ಲಾ ಸರಾಸರಿ 350–500 ರೂ ಪಡೆಯುತ್ತಾರೆ. ಅವರು ವಾರಕ್ಕೆ ಸರಾಸರಿ 2–3 ಬಾರಿ ಚೌಲ್ಟಿ ಕೆಲಸಕ್ಕೆ ಹೋಗುತ್ತಾರೆ. ಯಾವುದೇ ನೆರೆಹೊರೆಯವರು, ಚೌಲ್ಟಿ ಕೆಲಸಗಾರರೂ ಸಾಮಾನ್ಯವಾಗಿ ಕೆಲಸದ ಅವಶ್ಯಕತೆ ಇದ್ದರೆ ಅವರಿಗೆ ತಿಳಿಸುತ್ತಾರೆ. ಕೆಲವೊಮ್ಮೆ ಉದ್ಯೋಗದಾತರು ಹಣವನ್ನು ಸಮಯಕ್ಕೆ ಪಾವತಿಸುತ್ತಾರೆ ಮತ್ತು ಕೆಲವೊಮ್ಮೆ ಅವರು ಪಾವತಿಸುವುದಿಲ್ಲ. ಅವರು ಮತ್ತು ಅವಳ ಸಹೋದ್ಯೋಗಿಗಳನ್ನು ಕನಿಷ್ಠ ವೇತನಕ್ಕೆ ದೀರ್ಘ ಗಂಟೆಗಳ ಕಾಲ ಕೆಲಸ ಮಾಡಲು ಒತ್ತಾಯಿಸಲಾಗುತ್ತದೆ ಮತ್ತು ಅಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಮಲಗಲು ಅಥವಾ ವಿಶ್ರಾಂತಿ ಪಡೆಯಲು ಯಾವುದೇ ಸುರಕ್ಷತಾ ಮುನ್ನೆಚ್ಚರಿಕೆಗಳಿಲ್ಲ. ಅವರು ಪಡೆಯುವ ಹಣವೂ ಅವರು ಪಡೆಯಬೇಕಾದದ್ದಕ್ಕಿಂತ ಕಡಿಮೆ ಇರುತ್ತದೆ. ಉದ್ಯೋಗದಾತನು ಅವಳಿಗೆ ಬಹಳಷ್ಟು ಹಣವನ್ನು ಪಾವತಿಸುವ ದೊಡ್ಡ ಒಪ್ಪಂದವನ್ನು ಪಡೆದರೂ ಸಹ, ಅವರು ಇನ್ನೂ ಅದೇ ಮೊತ್ತದ 350–500 ರೂ ದುಡಿಯುತ್ತಿದ್ದಾರೆ. ವಾಸ್ತವವಾಗಿ, ಉದ್ಯೋಗಿ ಗ್ರಾಹಕರಿಂದ ಪಡೆಯುವ ಹಣದ ಬಗ್ಗೆ ಅವರು ಅಥವಾ ಯಾವುದೇ ಸಹೋದ್ಯೋಗಿಗಳಿಗೆ ತಿಳಿದಿರುವುದಿಲ್ಲ. ಸಂಬಳದ ಬಗ್ಗೆ ಯಾರಾದರೂ ಉದ್ಯೋಗದಾತರನ್ನು ಪ್ರಶ್ನಿಸಿದರೆ, ಅವರನ್ನು ಮತ್ತೆ ಕೆಲಸಕ್ಕೆ ಕರೆಯುವುದಿಲ್ಲ.

ಜಯಲಕ್ಷ್ಮಿಯವರಿಗೂ ಲಾಕ್‌ಡೌನ್ ತುಂಬಾ ಕಷ್ಟಕರವಾಗಿತ್ತು. 2 ಚಿಕ್ಕ ಹೆಣ್ಣು ಮಕ್ಕಳ ಒಂಟಿ ತಾಯಿಯಾಗಿ, ಅವರು ತಮ್ಮ ಜೀವನವನ್ನು ನಡೆಸಲು ಹೆಣಗಾಡುತ್ತಾರೆ. ಬಾಡಿಗೆ ಮನೆಯಲ್ಲಿ ವಾಸಿಸುವ ಮತ್ತು ಬಾಡಿಗೆ ಪಾವತಿಸಲು ಸಾಧ್ಯವಾಗದ ಇತರ ಚೌಲ್ಟಿ ಕೆಲಸಗಾರರ ಬಗ್ಗೆ ಅವರು ಸಹಾನುಭೂತಿ ಹೊಂದಿದ್ದಾರೆ. ಅವರು ಚೌಲ್ಟಿ ಕೆಲಸದಿಂದ ಗಳಿಸುವ ದೈನಂದಿನ ಕೂಲಿಯು, ಅವರ ಕುಟುಂಬವು ಸಾಂಕ್ರಾಮಿಕ ರೋಗದಿಂದ ಬದುಕುಳಿಯಲು ಮತ್ತು ಜೀವನವನ್ನು ಪೂರೈಸಲು ಸಾಕಾಗುತ್ತಿಲ್ಲ.

## ಅಮ್ಮು

ಅಮ್ಮು, 36 ವರ್ಷದ ಮೂರು ಮಕ್ಕಳ ತಾಯಿ, ಅವರು ತಮ್ಮ ತಾಯಿ ಮತ್ತು ಪತಿಯೊಂದಿಗೆ ಜನತಾ ಕಾಲೋನಿಯ ಕೊಳೆಗೇರಿಯಲ್ಲಿ ವಾಸಿಸುತ್ತಿದ್ದಾರೆ. ಆಕೆಯ ತಾಯಿ ದೈಹಿಕವಾಗಿ ಅಶಕ್ತಳಾಗಿದ್ದಾರೆ, ಆದ್ದರಿಂದ ಅವರು ಅಮ್ಮು ಜೊತೆ ಇರುತ್ತಾರೆ. ಆಕೆಯ ಪತಿ ಸ್ಥಳೀಯ ಮಾರುಕಟ್ಟೆಯಲ್ಲಿ ಹೂವುಗಳನ್ನು ಮಾರುತ್ತಾರೆ. ಅವರು ಬಾಡಿಗೆ ಮನೆಯಲ್ಲಿ ವಾಸಿಸುತ್ತಿಲ್ಲ. ಸಾಂಕ್ರಾಮಿಕ ರೋಗ ಮತ್ತು ಲಾಕ್‌ಡೌನ್‌ನ ಪರಿಣಾಮವಾಗಿ, ಅವರು ಮತ್ತು ಅವಳ ಪತಿ ಇಬ್ಬರೂ ಅಸಂಘಟಿತ ಕಾರ್ಮಿಕ ವಲಯದಲ್ಲಿ ಕೆಲಸ ಮಾಡುತ್ತಿರುವುದರಿಂದ, ಅವರಿಬ್ಬರೂ ಕಡಿಮೆ ಆದಾಯದ ವಹಿವಾಟುಗಳನ್ನು ಹೊಂದಿದ್ದರು. ಅವರು ತಮ್ಮ ಅಗತ್ಯಗಳನ್ನು ಪೂರೈಸಲು, ಮಕ್ಕಳ ಶಾಲಾ ಶುಲ್ಕ, ತಾಯಿಯ ಔಷಧಿ ಮತ್ತು ಸಾಮಾನ್ಯ ಮನೆಯ ಖರ್ಚುಗಳಿಗಾಗಿ ಸ್ಥಳೀಯ ಲೇವಾದೇವಿಗಾರರಿಂದ ಸಾಲವನ್ನು ತೆಗೆದುಕೊಂಡಿದ್ದಾರೆ. ಚೌಲ್ಟಿ ಕೆಲಸಗಾರ್ತಿಯಾಗಿ ಅಮ್ಮು ಸುಮಾರು 200–250 ರೂ., ಮತ್ತು ಅವರು ಇಡೀ ದಿನ ಕೆಲಸ ಮಾಡಿದರೆ ಸುಮಾರು 450–500 ರೂ. ದುಡಿಯುತ್ತಾಳೆ. ಆಕೆಯ ಕರ್ತವ್ಯಗಳು ಪಾತ್ರೆಗಳನ್ನು ತೊಳೆಯುವುದು, ಆಹಾರವನ್ನು ತೆರವುಗೊಳಿಸುವುದು ಮತ್ತು ಬಡಿಸುವುದು, ತರಕಾರಿಗಳನ್ನು ಕತ್ತರಿಸುವುದು ಇತ್ಯಾದಿಗಳು ಸೇರಿವೆ. ಕೆಲವೊಮ್ಮೆ ಕೆಲಸದ ಸ್ಥಳಗಳು ಅವಳ ಮನೆಯಿಂದ ಬಹಳ ದೂರದಲ್ಲಿವೆ, ಆದ್ದರಿಂದ

ಅವರು ಅಲ್ಲಿಯೇ ಸ್ಥಳದಲ್ಲಿ ರಾತ್ರಿ ಉಳಿದು ತನ್ನ ಕೆಲಸವನ್ನು ಮುಗಿಸಬೇಕಾಗುತ್ತದೆ. ಇದು ಅವಳ ಮತ್ತು ಅವಳ ಕುಟುಂಬ ಸದಸ್ಯರ ನಡುವೆ ಸಾಕಷ್ಟು ಉದ್ವಿಗ್ನತೆಯನ್ನು ಉಂಟುಮಾಡುತ್ತದೆ. ಸ್ಥಳದಲ್ಲಿ, ಸರಿಯಾದ ಮಲಗುವ ವ್ಯವಸ್ಥೆಗಳಿಲ್ಲ, ಮತ್ತು ಅದು ತುಂಬಾ ಸುರಕ್ಷಿತವಾಗಿಲ್ಲದ ಕಾರಣ ಆಕೆಗೆ ನಿದ್ರೆಯು ಬರುವುದಿಲ್ಲ.

ಸಮಾರಂಭ/ವಿವಾಹದಿಂದ ಏನಾದರೂ ಉಳಿದಿದ್ದರೆ, ಆಕೆಯ ಉದ್ಯೋಗದಾತರು ರಾತ್ರಿ 2–3 ಗಂಟೆಯ ಸುಮಾರಿಗೆ ಅವರಿಗೆ ಆಹಾರವನ್ನು ನೀಡುತ್ತಾರೆ. ಅಮ್ಮುಗೆ ನಿರಂತರ ಒಬ್ಬರೇ ಉದ್ಯೋಗದಾತರಿಲ್ಲ, ಅವರು ಕೆಲಸಕ್ಕೆ ಹೋದಾಗಲೆಲ್ಲಾ ಬೇರೆ ಬೇರೆ ಉದ್ಯೋಗದಾತರಿರುತ್ತಾರೆ. ಅವರಲ್ಲಿ ಕೆಲವರು ಸರಿಯಾದ ಮೊತ್ತದೊಂದಿಗೆ ಸಮಯಕ್ಕೆ ಹಣವನ್ನು ಪಾವತಿಸುತ್ತಾರೆ, ಮತ್ತು ಕೆಲವರು ಮೋಸ ಮಾಡುತ್ತಾರೆ ಮತ್ತು ಕಡಿಮೆ ಪಾವತಿಸುತ್ತಾರೆ. ಆದರೆ ಅವರು ತನ್ನ ಪರವಾಗಿ ನಿಲ್ಲಲು ಸಾಧ್ಯವಾಗುವುದಿಲ್ಲ ಏಕೆಂದರೆ ಅವರು ಹಾಗೆ ಮಾಡಿದರೆ, ಅವಳನ್ನು ಮತ್ತೆ ಕೆಲಸಕ್ಕೆ ಕರೆಯುವುದಿಲ್ಲ. ಯಾವುದೇ ತುರ್ತು ಪರಿಸ್ಥಿತಿಗಾಗಿ ಅವರು ಬೇಗನೆ ಹೊರಟುಹೋದರೆ, ಅವರು ಯಾವುದೇ ಹಣವನ್ನು ಕೊಡುವುದಿಲ್ಲ.

ಉದ್ಯೋಗಿಯು ಗ್ರಾಹಕರಿಂದ ಪಡೆಯುವ ಹಣದ ಬಗ್ಗೆ ಅವರು ಅಥವಾ ಅವಳ ಯಾವುದೇ ಸಹೋದ್ಯೋಗಿಗಳಿಗೆ ತಿಳಿದಿರುವುದಿಲ್ಲ. ಸಂಬಳದ ಬಗ್ಗೆ ಯಾರಾದರೂ ಉದ್ಯೋಗದಾತರನ್ನು ಪ್ರಶ್ನಿಸಿದರೆ, ಅವರನ್ನು ಮತ್ತೆ ಕೆಲಸಕ್ಕೆ ಕರೆಯುವುದಿಲ್ಲ.

## ವೆನ್ನಿಲಾ

ವೆನ್ನಿಲಾ 38 ವರ್ಷದ ತಾಯಿಯಾಗಿದ್ದು, ಸಂಜಯ್ ಕಾಲೋನಿಯ ಕೊಳೆಗೇರಿಯಲ್ಲಿ ಪತಿ ಮತ್ತು ಮಗಳೊಂದಿಗೆ ವಾಸಿಸುತ್ತಿದ್ದಾರೆ. ಹುಟ್ಟಿದ್ದು ತಮಿಳುನಾಡು ಆಗಿದ್ದರೂ ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರ ಮಗಳು 20 ವರ್ಷ ವಯಸ್ಸಿನವಳು ಮತ್ತು ಮನೆಗೆಲಸಕ್ಕೆ ಸಹಾಯ ಮಾಡುತ್ತಾಳೆ. ವೆನ್ನಿಲಾ ಸುಮಾರು 15 ವರ್ಷಗಳಿಂದ ಚೌಲ್ಟ್ರಿ ಕೆಲಸಗಾರಳಾಗಿದ್ದಾರೆ. ಅವರು ಮತ್ತು ಅವಳ ಪತಿ ಇಬ್ಬರೂ ಕುಟುಂಬಕ್ಕಾಗಿ ಹಣ ಸಂಪಾದಿಸಲು ಕೆಲಸ ಮಾಡುತ್ತಾರೆ. ಆದರೆ ಲಾಕ್‌ಡೌನ್‌ನಿಂದಾಗಿ ಅವರು ಮತ್ತು ಅವರ ಪತಿ ಸುಮಾರು 2 ವರ್ಷಗಳಿಂದ ಕೆಲಸವಿಲ್ಲದೆ ಉಳಿದಿದ್ದಾರೆ. ಅವರು ಬಹಳ ಸಮಯದಿಂದ ತಮ್ಮ ಬಾಡಿಗೆಯನ್ನು ಪಾವತಿಸಿಲ್ಲ. ಚೌಲ್ಟ್ರಿ ಕೆಲಸಗಾರರಾಗಿದ್ದ ವೆನ್ನಿಲಾ ರಾತ್ರಿಯ ಕೆಲಸದ ಅವಧಿಗೆ ಸುಮಾರು 700–800 ರೂ ಸಿಗಬೇಕಾಗಿದ್ದರೂ ಸಹ,ಅವರ ಮೇಲಧಿಕಾರಿಗಳು ಮತ್ತು ಉದ್ಯೋಗದಾತರ ಮೂಲಕ ವರ್ಗಾಯಿಸಿದ ನಂತರ, ಅವರಿಗೆ ಸುಮಾರು 500–600 ರೂ. ಸಿಗುತ್ತದೆ. ಆದರೆ ಈಗ ಅವರನ್ನು ಚೌಲ್ಟ್ರಿ ಕೆಲಸಕ್ಕೆ ಕರೆಯಲಾಗುತ್ತಿಲ್ಲ. ಸಾಕಷ್ಟು ಆಹಾರ ಖರೀದಿಸಲು ಸಾಧ್ಯವಾಗದ ಕಾರಣ ಕುಟುಂಬವು ಗಂಜಿಯನ್ನು ಕುಡಿದು ತಿನ್ನುವ ಮೂಲಕ ಬದುಕುತ್ತಿದೆ. ಅಂತಹ ಕಷ್ಟದ ಸಮಯದಲ್ಲಿ, ಚೌಲ್ಟ್ರಿ ಕೆಲಸಕ್ಕೆ ಕರೆದಾಗಲೆಲ್ಲಾ ಅವರು ತನ್ನ ಮಾಲೀಕರಿಗೆ ಸ್ವಲ್ಪ ಹೆಚ್ಚುವರಿ ಹಣವನ್ನು ಕೇಳಿದರೆ, ಮಾಲೀಕರು ಹೆಚ್ಚಿಗೆ ಹಣವನ್ನು ಕೊಡಲು ನಿರಾಕರಿಸುತ್ತಾರೆ ಮತ್ತು ನಂತರ ಅವರನ್ನು ಕೆಲಸಕ್ಕೆ ಕರೆಯುವುದನ್ನು ನಿಲ್ಲಿಸುತ್ತಾರೆ. ತನ್ನ ಮಗಳ ಕಾಲೇಜು ಶುಲ್ಕವನ್ನು ಪಾವತಿಸಲು ಸಾಧ್ಯವಾಗುತ್ತಿಲ್ಲ ಮತ್ತು ಆಕೆಯ ಕುಟುಂಬವು ಕಳೆದ 2 ವರ್ಷಗಳಿಂದ ಜೀವನ ಸಾಗಿಸಲು ಹೆಣಗಾಡುತ್ತಿದೆ. ಅವರು ಮತ್ತು ಅವಳ ಪತಿ ಕೆಲವು ರೀತಿಯ ಸಹಾಯವನ್ನು ಪಡೆಯಲು ಸ್ಥಳೀಯ ಪ್ರದೇಶದ ಸಲಹೆಗಾರರಿಗೆ ಇದನ್ನು ತಿಳಿಸಲು ಪ್ರಯತ್ನಿಸಿದರು, ಆದರೆ ಅವರು ಸಲಹೆಗಾರರಿಂದ ಯಾವುದೇ ಸಹಾಯವನ್ನು ಸ್ವೀಕರಿಸಲಿಲ್ಲ.

ಅವರು ಚೌಲ್ಟ್ರಿ ಕೆಲಸಗಾರಳಾಗಿ ನಿಯಮಿತವಾಗಿ ಕೆಲಸ ಮಾಡುತ್ತಿದ್ದಾಗಲೂ ಅವರು ಅನೇಕ ಕಷ್ಟಗಳನ್ನು ಎದುರಿಸಬೇಕಾಗಿತ್ತು. ಅವರು ಕೆಲಸ ಮಾಡುವ ಸ್ಥಳದಿಂದ ಹಿಂತಿರುಗಲು ತುಂಬಾ ದೂರದಲ್ಲಿದ್ದರೆ ಕೆಲವು ದಿನಗಳವರೆಗೆ ಮದುವೆ ಮಂಟಪ/ಸ್ಥಳದಲ್ಲಿ ರಾತ್ರಿ ಉಳಿಯಬೇಕಾಗಿತ್ತು. ಮಲಗುವ ಪರಿಸ್ಥಿತಿಗಳು ಚೆನ್ನಾಗಿರಲಿಲ್ಲ. ಅವರು ಮತ್ತು ಅವಳ ಸಹೋದ್ಯೋಗಿಗಳು ಕೆಲವೊಮ್ಮೆ ರಸ್ತೆಯ ಮೇಲೆ ಮಲಗಬೇಕಾಗಿತ್ತು, ಆದರೆ ಅವರು ಮನೆಯಿಂದ ತಂದ ಕಂಬಳಿ ಹೊರತುಪಡಿಸಿ ಏನೂ ಇರುವುದಿಲ್ಲ. ಸಮಾರಂಭ/ವಿವಾಹದ ಯಾವುದೇ ಉಳಿಕೆಗಳಿದ್ದಲ್ಲಿ ಆಕೆಗೆ ತಿನ್ನಲು ಆಹಾರವನ್ನು ನೀಡಲಾಗುತ್ತದೆ. ಅವರು ಪಾತ್ರೆಗಳನ್ನು ತೊಳೆಯುತ್ತಾಳೆ,

ಹಾಲ್‌ಗಳನ್ನು ಸ್ವಚ್ಛಗೊಳಿಸುತ್ತಾಳೆ, ಆಹಾರವನ್ನು ಬಡಿಸುತ್ತಾಳೆ, ಪ್ಲೇಟ್‌ಗಳನ್ನು ತೆರವುಗೊಳಿಸುತ್ತಾಳೆ ಮತ್ತು ಅಡುಗೆ ಗೆ ತರಕಾರಿಗಳನ್ನು ಕತ್ತರಿಸುತ್ತಾಳೆ.

ಸಾಂಕ್ರಾಮಿಕ ರೋಗದ ಮೊದಲು ಆಕೆಯನ್ನು ತಿಂಗಳಿಗೆ ಸರಾಸರಿ 10 ಬಾರಿ ಈ ಕೆಲಸಕ್ಕೆ ಕರೆಯಲಾಗುತ್ತಿತ್ತು, ತಿಂಗಳಿಗೆ 5000–6000 ರೂ. ಸಿಗುತಿತ್ತು. ಉದ್ಯೋಗದಾತನು ಗ್ರಾಹಕರಿಂದ ಪಡೆಯುವ ಹಣದ ಬಗ್ಗೆ ಅವರು ಅಥವಾ ಅವಳ ಇತರ ಸಹೋದ್ಯೋಗಿಗಳಿಗೆ ತಿಳಿದಿರುವುದಿಲ್ಲ. ಸಂಬಳದ ಬಗ್ಗೆ ಯಾರಾದರೂ ಉದ್ಯೋಗದಾತರನ್ನು ಪ್ರಶ್ನಿಸಿದರೆ, ಅವರನ್ನು ಮತ್ತೆ ಕೆಲಸಕ್ಕೆ ಕರೆಯುವುದಿಲ್ಲ. ಆಕೆಯ ಕೆಲವು ಉದ್ಯೋಗದಾತರು ಸ್ವಭಾವತಃ ಒಳ್ಳೆಯವರಾಗಿದ್ದಾರೆ ಮತ್ತು ಸಮಯಕ್ಕೆ ಪಾವತಿಸುತ್ತಾರೆ ಆದರೆ ಇತರರು ಅವಳಂತಹ ಚೌಲ್ಟ್ರಿ ಕೆಲಸಗಾರರಿಗೆ ಯಾವಾಗಲೂ ಒಳ್ಳೆಯವರಾಗಿರುವುದಿಲ್ಲ.

ಸಾಂಕ್ರಾಮಿಕ ರೋಗವು ಅವರ ಕುಟುಂಬಕ್ಕೆ ತುಂಬಾ ಕಷ್ಟಕರವಾಗಿತ್ತು. ಇತರ ಎನ್‌ಜಿಒಗಳು ಮತ್ತು ಪ್ರದೇಶದ ಕೆಲವು ರಾಜಕೀಯ ವ್ಯಕ್ತಿಗಳು ಪರಿಹಾರವಾಗಿ ವಿತರಿಸಿದ ಆಹಾರವನ್ನು ಪಡೆದು ಅವರು ಬದುಕಬೇಕಾಗಿತ್ತು. ಅವರು ಮತ್ತು ಅವರ ಮಗಳು ಮನೆಗಳಿಗೆ ಹೋಗಿ ಮನೆಕೆಲಸ ಮಾಡುತ್ತಿದ್ದರೂ, ಅವರು ತುಂಬಾ ಕಡಿಮೆ ಸಂಬಳ ಪಡೆಯುತ್ತಾರೆ ಮತ್ತು ಅವರ ಕುಟುಂಬವನ್ನು ನೆಡೆಸಲು ಆ ಹಣವು ಸಾಕಾಗುವುದಿಲ್ಲ.

## ಲಕ್ಷ್ಮಿ

ಲಕ್ಷ್ಮಿ ಸಂಜಯ್ ನಗರದ ಕೊಳೆಗೇರಿಯಲ್ಲಿ ವಾಸಿಸುವ 40 ರ ಹರೆಯದ ಮಹಿಳೆ. ಅವರ ಪತಿ ಕೆಲವು ವರ್ಷಗಳ ಹಿಂದೆ ನಿಧನರಾದರು ಮತ್ತು ಅವರ ಎಲ್ಲಾ ಮಕ್ಕಳೂ ಮದುವೆಯಾಗಿದ್ದಾರೆ ಮತ್ತು ದೂರ ಹೋಗಿದ್ದಾರೆ. ಅವರನ್ನು ನೋಡಿಕೊಳ್ಳಲು ಕುಟುಂಬ ಅಥವಾ ಸಂಬಂಧಿಕರು ಅಥವಾ ಸ್ನೇಹಿತರಿಲ್ಲ. ಆದ್ದರಿಂದ, ಲಾಕ್‌ಡೌನ್ ಹೇರಿದಾಗ ಮತ್ತು ಸಾರ್ವಜನಿಕ ಸ್ಥಳಗಳು ಮತ್ತು ಮದುವೆಗಳ ಮೇಲೆ ನಿರ್ಬಂಧಗಳನ್ನು ಹೇರಿದ್ದಾಗ, ಲಕ್ಷ್ಮಿಗೆ ಯಾವುದೇ ಆದಾಯ ಅಥವಾ ಕೆಲಸದ ಮೂಲವಿರಲಿಲ್ಲ. ತನ್ನನ್ನು ಉಳಿಸಿಕೊಳ್ಳಲು, ಬಾಡಿಗೆ ಪಾವತಿಸಲು ಮತ್ತು ಅಗತ್ಯ ವಸ್ತುಗಳನ್ನು ಖರೀದಿಸಲು ಸಹಾಯ ಮಾಡಲು ಅವರು ಅನೇಕ ಜನರಿಂದ ಸಾಲವನ್ನು ಪಡೆದಿದ್ದಾರೆ. ಆಕೆಯ ಸಾಲಗಳ ಮೇಲೆ ಬಹಳಷ್ಟು ಬಡ್ಡಿ ಸೇರಿದೆ ಮತ್ತು ಅವರು ಸಾಲವನ್ನು ತೀರಿಸಲು ಸ್ಥಿರವಾದ ಆದಾಯವನ್ನು ಹೊಂದಿಲ್ಲ. ಆಕೆಗೆ ದೈನಂದಿನ ಆಧಾರದ ಮೇಲೆ ಬಾಡಿಗೆ ಪಾವತಿಸಲು ಅಥವಾ ಆಹಾರವನ್ನು ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. ಸಾಂಕ್ರಾಮಿಕ ರೋಗದ ಮೊದಲು, ರಾತ್ರಿಯ ಕೆಲಸದ ಅವಧಿಗೆ ಅವರು ಸುಮಾರು ರೂ.600 ಸಂಪಾದಿಸುತ್ತಿದ್ದರು. ಪಾತ್ರೆಗಳನ್ನು ಸ್ವಚ್ಛಗೊಳಿಸುವ ಮೂಲಕ, ಆಹಾರವನ್ನು ಬಡಿಸುವ ಮೂಲಕ, ತರಕಾರಿಗಳನ್ನು ಕತ್ತರಿಸುವ ಮೂಲಕ, ಪ್ಲೇಟ್‌ಗಳನ್ನು ತೆರವುಗೊಳಿಸುವ ಮೂಲಕ ಚೌಲ್ಟ್ರಿ ಕೆಲಸಗಾರಳಾಗಿ ಕೆಲಸ ಮಾಡುತ್ತಾರೆ. ಮಾಸಿಕ ಸರಾಸರಿಯಲ್ಲಿ ಅವರು ಸುಮಾರು 8–9 ಬಾರಿ ಕೆಲಸಕ್ಕೆ ಹೋಗುತ್ತಿದ್ದರು. ಇದು ಆರ್ಥಿಕವಾಗಿ ಅವರನ್ನು ಉಳಿಸಿಕೊಳ್ಳಲು ಸಹಾಯ ಮಾಡಿತು. ರಾತ್ರಿಯ ತಂಗುವಿಕೆಗಳು ಯಾವಾಗಲೂ ಆರಾಮದಾಯಕ ಅಥವಾ ಸುರಕ್ಷಿತವಾಗಿರಲಿಲ್ಲ.

ಅವರನ್ನು ಅಸಂಘಟಿತ ವಲಯದ ಕಾರ್ಮಿಕ ಎಂದು ಗುರುತಿಸುವ ಗುರುತಿನ ಚೀಟಿಯನ್ನು ಅವರು ಹೊಂದಿಲ್ಲ ಮತ್ತು ಸರ್ಕಾರ ನೀಡುವ ಯೋಜನೆಗಳು ಮತ್ತು ನಿಬಂಧನೆಗಳ ಬಗ್ಗೆ ಅವಳಿಗೆ ತಿಳಿದಿರುವುದಿಲ್ಲ.

## ಮಹೇಶ್ವರಿ

ಮಹೇಶ್ವರಿ ಗೆ 38 ವರ್ಷ, 4 ಮಕ್ಕಳ ಒಂಟಿ ತಾಯಿ. ಆಂಜನಪ್ಪ ಗಾರ್ಡನ್ಸ್ನಲ್ಲಿರುವ ಮನೆಯಲ್ಲಿ ಮಕ್ಕಳು ಮತ್ತು ಇಬ್ಬರು ಸಹೋದರಿಯರೊಂದಿಗೆ ವಾಸವಾಗಿದ್ದಾಳೆ. ಆಕೆಯ ಸಹೋದರಿಯೊಬ್ಬಳು ದೃಷ್ಟಿಹೀನಳಾಗಿದ್ದಾಳೆ. ಮಹೇಶ್ವರಿ ಅವಳನ್ನು ನೋಡಿಕೊಳ್ಳುತ್ತಾಳೆ. ಆಕೆಗೆ ಕಾಲೇಜಿನಲ್ಲಿ ಓದುತ್ತಿರುವ ಒಬ್ಬ ಹುಡುಗಿ, ಪ್ರೌಢಶಾಲೆಯಲ್ಲಿ ಒಬ್ಬ ಹುಡುಗ ಮತ್ತು 2 ಹೆಣ್ಣುಮಕ್ಕಳು ಇದ್ದಾರೆ. ಚಿಕ್ಕ ವಯಸ್ಸಿನಿಂದಲೂ ಚೌಲ್ಟ್ರಿ ಕೆಲಸಗಾರ್ತಿಯಾಗಿ ಕೆಲಸ

ಮಾಡುತ್ತಿದ್ದಾಳೆ. ಅವರು ಇಡೀ ರಾತ್ರಿ ಕೆಲಸ ಮಾಡಿದರೆ ಸುಮಾರು 400 ರೂ. ಗಳಿಸುತ್ತಾಳೆ. ಆಕೆ ಕೆಲಸಕ್ಕೆ ಹೋಗಬೇಕಾದ ಸ್ಥಳಗಳಲ್ಲಿ ತಂಗುದಾಣ, ಮಲಗುವ ವ್ಯವಸ್ಥೆ ಮುಂತಾದ ಸರಿಯಾದ ಸೌಲಭ್ಯಗಳಿಲ್ಲ. ಸ್ಥಳವನ್ನು ಹುಡುಕುವುದು ಮತ್ತು ಮಲಗುವುದು ಅವಳ ಮತ್ತು ಅವಳ ಸಹೋದ್ಯೋಗಿಗಳಿಗೆ ಬಿಟ್ಟದ್ದು. ಅವರು ಆ ಸ್ಥಳಗಳಲ್ಲಿ ಸುರಕ್ಷಿತವಾಗಿರಲು ಅವರು ಪರಸ್ಪರ ಪಾಳಿಗಳನ್ನು ತೆಗೆದುಕೊಂಡು ಮಲಗುತ್ತಾರೆ. ಮಹೇಶ್ವರಿಗೆ ಒಂದು ಪೂರ್ಣ ದಿನದ ಕೆಲಸವೆಂದರೆ ಪಾತ್ರೆಗಳನ್ನು ತೊಳೆಯುವುದು, ತರಕಾರಿಗಳನ್ನು ಕತ್ತರಿಸುವುದು, ಆಹಾರವನ್ನು ಬಡಿಸುವುದು, ಆಹಾರದ ತಟ್ಟೆಗಳನ್ನು ತೆರವುಗೊಳಿಸುವುದು ಇತ್ಯಾದಿ.

ಕಳೆದ 2 ವರ್ಷಗಳಿಂದ ಮಹೇಶ್ವರಿಗೆ ಯಾವುದೇ ಕೆಲಸವನ್ನು ಇಲ್ಲ. ಅವರು ತನ್ನ ಕುಟುಂಬದ ಮುಖ್ಯಸ್ಥಳಾಗಿದ್ದು ಈಗ ತನ್ನ ಕುಟುಂಬವನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆಕೆಯ ಮನೆ ಬಾಡಿಗೆ ರೂ. 2000 ಮತ್ತು ಕಳೆದ 7 ತಿಂಗಳಿನಿಂದ ಆಕೆ ತನ್ನ ಬಾಡಿಗೆಯನ್ನು ಕೊಟ್ಟಿಲ್ಲ. ತನ್ನ ಬೆಳೆಯುತ್ತಿರುವ ಶಿಶುಗಳಿಗೆ ಪೌಷ್ಟಿಕಾಂಶಯುಕ್ತ ಆಹಾರವನ್ನು ನೀಡಲು ಸಾಧ್ಯವಾಗುತ್ತಿಲ್ಲ ಮತ್ತು ತನ್ನ ಮಗಳ ಕಾಲೇಜು ಶುಲ್ಕವನ್ನು ಪಾವತಿಸಲು ಸಹ ಸಾಧ್ಯವಾಗುತ್ತಿಲ್ಲ. ಅವಳ ಮಗಳು ಮನೆಗಳಲ್ಲಿ ಮನೆಕೆಲಸ ಮಾಡುವ ಮೂಲಕ ಸ್ವಲ್ಪ ಹಣವನ್ನು ಸಂಪಾದಿಸಿ ಮನೆ ನಡೆಸಲು ಸಹಾಯ ಮಾಡುತ್ತಾಳೆ. ಮಹೇಶ್ವರಿ ಕೆಲಸಕ್ಕೆ ಹೋದಾಗ ಅವರು ಮಕ್ಕಳನ್ನು ಮತ್ತು ಅವಳ ದೃಷ್ಟಿಹೀನ ಚಿಕ್ಕಮ್ಮನನ್ನು ನೋಡಿಕೊಳ್ಳುತ್ತಾಳೆ, ಆದರೆ ಏಳು ಸದಸ್ಯರ ಈ ಕುಟುಂಬವನ್ನು ಉಳಿಸಿಕೊಳ್ಳಲು ಮಹೇಶ್ವರಿಗೆ ಬರುವ ಹಣ ಸಾಕಾಗುವುದಿಲ್ಲ. ಅವರ ಬಳಿ ಪಡಿತರ ಚೀಟಿ ಇಲ್ಲ,

ಆಕೆ ಮತ್ತು ಆಕೆಯ ಮಗಳನ್ನು ಅಸಂಘಟಿತ ವಲಯದ ಕಾರ್ಮಿಕರು ಎಂದು ಗುರುತಿಸುವ ಗುರುತಿನ ಚೀಟಿ ಇಲ್ಲ. ಕಳೆದ 2 ವರ್ಷಗಳಿಂದ ಮಹೇಶ್ವರಿ ಮತ್ತು ಅವರ ಕುಟುಂಬದವರು ಕಷ್ಟಪಡುತ್ತಿದ್ದಾರೆ. ತನ್ನ ಮಗಳ ವಿದ್ಯಾಭ್ಯಾಸ, ತಂಗಿಯ ಆರೋಗ್ಯ ಮತ್ತು ತನ್ನ ಶಿಶು ಮಕ್ಕಳ ಬೆಳವಣಿಗೆಯ ಬಗ್ಗೆ ಚಿಂತಿತಳಾಗಿದ್ದಾಳೆ. ಅವರು ನಿರಂತರ ಒತ್ತಡದಲ್ಲಿದ್ದಾಳೆ ಮತ್ತು ತನ್ನ ಕುಟುಂಬದ ಭವಿಷ್ಯದ ಬಗ್ಗೆ ಚಿಂತಿಸುತಿದ್ದಾಳೆ.

## ಗೌರಿ

ಬೆಂಗಳೂರಿನ ಅಂಜನಪ್ಪ ಗಾರ್ಡನ್ನಲ್ಲಿ ವಾಸಿಸುತ್ತಿರುವ 32 ವರ್ಷದ ಗೌರಿ 2 ಮಕ್ಕಳ ಒಂಟಿ ತಾಯಿ. ಆಕೆಯ ಒಂದು ಮಗುವಿನ ವಯಸ್ಸು 10 ವರ್ಷ ಮತ್ತು ಇನ್ನೊಬ್ಬನಿಗೆ 3 ವರ್ಷ. ಆಕೆ ಚೌಲ್ಟ್ರಿ ಕೆಲಸಗಾರ್ತಿಯಾಗಿದ್ದು, ಒಂದು ದಿನದ ಕೆಲಸಕ್ಕೆ ಸುಮಾರು 400 ರೂ ಗಳಿಸುತ್ತಾಳೆ, ಆದರೆ ಈಗ ಅವಳನ್ನು ಯಾವುದೇ ಕೆಲಸಕ್ಕೆ ಕರೆಯಲಾಗುತ್ತಿಲ್ಲ. ಲಾಕ್‌ಡೌನ್ ನಿರ್ಬಂಧಗಳಿಂದಾಗಿ ಸಮಾರಂಭಗಳಲ್ಲಿ ಜನಸಂದಣಿ ತುಂಬಾ ಕಡಿಮೆಯಾಗಿದೆ, ಆದ್ದರಿಂದ ಆಕೆಗೆ ಕೇವಲ ರೂ. 250–300 ಸಿಗುತ್ತದೆ. ಅವರು ಸುಮಾರು 15 ಗಂಟೆಗಳ ಕಾಲ ಕೆಲಸ ಮಾಡುತಿದ್ದರು ಅಷ್ಟು ಮಾತ್ರ ಪಾವತಿಸುತ್ತಾರೆ. ಒಂಟಿ ತಾಯಿಯಾಗಿ, ತುಂಬಾ ಚಿಕ್ಕ ಹೆಣ್ಣುಮಕ್ಕಳೊಂದಿಗೆ, ಮತ್ತು ಅವಳಿಗೆ ಸಹಾಯ ಮಾಡಲು ಯಾವುದೇ ಕುಟುಂಬ ಅಥವಾ ಸ್ನೇಹಿತರಿಲ್ಲ, ಅವರು ಚೌಲ್ಟ್ರಿ ಕೆಲಸಕ್ಕೆ ಕರೆದಾಗಲೆಲ್ಲಾ ತನ್ನ ಮಕ್ಕಳನ್ನು ತನ್ನೊಂದಿಗೆ ಕರೆತರುತ್ತಾಳೆ. ಈ ಸಮಯದಲ್ಲಿ ಯಾರಿಗಾದರೂ ಕೆಲಸವಿಲ್ಲದಿದ್ದಾಗ ತನ್ನ ಮಕ್ಕಳನ್ನು ನೋಡಿಕೊಳ್ಳಲು ಅವರು ಹೇಳುತ್ತಾಳೆ. ಅವರು ಕೆಲಸಕ್ಕೆ ಹೋಗುವ ಕೆಲವು ಸ್ಥಳಗಳಲ್ಲಿ ಸ್ನಾನಗೃಹಗಳಿಲ್ಲ ಮತ್ತು ಕೆಲವು ಊಟ ಮತ್ತು ಮಲಗಲು ಸರಿಯಾದ ಸ್ಥಳಗಳಿಲ್ಲ. ಅವರಿಗೆ ಸಿಗುವುದು ಉಳಿದ ಆಹಾರ ಮತ್ತು ಕನಿಷ್ಠ ಕೂಲಿ ಮಾತ್ರ. ಈ ಕಷ್ಟದ ಸಮಯದಲ್ಲಿ ಗೌರಿ ತಮ್ಮ ಜೀವನವನ್ನು ಪೂರೈಸಲು ಪ್ರಯತ್ನಿಸುತ್ತಿದ್ದಾಳೆ. ಮನೆ ಬಾಡಿಗೆಯನ್ನು ಹೇಗಾದರೂ ನಿಭಾಯಿಸುತ್ತಾಳೆ, ಆದರೆ ಇನ್ನೂ ನೀರಿನ ಬಿಲ್ ಮತ್ತು ವಿದ್ಯುತ್ ಬಿಲ್ ಪಾವತಿಸಬೇಕಾಗಿದೆ. ಅವರು ಕೆಲವು ಮನೆಗಳಲ್ಲಿ ಮನೆಕೆಲಸ ಮಾಡುತ್ತಾಳೆ ಮತ್ತು ಕೆಲವು ಹೆಚ್ಚುವರಿ ಹಣವನ್ನು ಗಳಿಸಲು ಕೆಲವೊಮ್ಮೆ ಜನರ ಬಟ್ಟೆಗಳನ್ನು ಒಗೆಯುತ್ತಾಳೆ.

ಅಸಂಘಟಿತವಲಯದ ಕಾರ್ಮಿಕರೆಂದು ಗುರುತಿಸುವ ಪಡಿತರ ಚೀಟಿ ಅಥವಾ ಗುರುತಿನ ಚೀಟಿ ಇಲ್ಲದ ಕಾರಣ ಆಹಾರ ಖರೀದಿಸಲು ಹೆಣಗಾಡುತ್ತಿದ್ದಾಳೆ. ಆಕೆಯ ಹಿರಿಯ ಮಗಳು ಕೆಲಸಕ್ಕೆ ಹೋಗಲು ಅವಳಿಗೆ ಆನ್‌ಲೈನ್ ತರಗತಿಳಿರುವುದರಿಂದ ನಂತರದ ಸಮಯವನ್ನು ಕೆಲಸಕ್ಕೆ ನಿಗದಿಪಡಿಸಿಕೊಂಡಿದ್ದಾಳೆ, ಗೌರಿ ತನ್ನ ಮಗಳ ಶಾಲಾ

ಶುಲ್ಕವನ್ನು ಪಾವತಿಸುವಲ್ಲಿ ತುಂಬಾ ವಿಳಂಬವಾಗಿದ್ದಾಳೆ. ಈ ರೀತಿಯ ಕಷ್ಟದ ಸಮಯದಲ್ಲಿಯು ಸಹ, ಅವಳ ಮಾಲೀಕರು ಹಣವನ್ನು ಯಾವಾಗಲೂ ಸಮಯಕ್ಕೆ ಸರಿಯಾಗಿ ಕೊಡುವುದಿಲ್ಲ, ಮತ್ತು ಅವರು ಗಳಿಸುವ ಹಣವು ಯಾವಾಗಲೂ ಆಕೆಗೆ ಸಿಗಬೇಕಿದ್ದಕ್ಕಿಂತ ಸುಮಾರು 100–200 ರೂ ಕಡಿಮೆ ಇರುತ್ತದೆ. ಅಂತಹ ಸಮಯದಲ್ಲಿ ಗೌರಿಗೆ ಸಹಾಯ ಮಾಡಲು ಬೇರೆ ಕುಟುಂಬ ಅಥವಾ ಸ್ನೇಹಿತರು ಇಲ್ಲ.

ಅಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರ ನೀಡುವ ಯೋಜನೆಗಳ ಬಗ್ಗೆ ಆಕೆಗೆ ತಿಳಿದಿಲ್ಲ ಮತ್ತು ಪಡಿತರ ಚೀಟಿಯ ಅಗತ್ಯತೆಯ ಬಗ್ಗೆಯೂ ಅವಳಿಗೆ ತಿಳಿದಿಲ್ಲ.

# 4 ಅಧ್ಯಾಯ ನಾಲ್ಕು: ಸಾರಾಂಶ ಸಂಶೋಧನೆಗಳು ಮತ್ತು ಶಿಫಾರಸ್ಸುಗಳು

ಫೋಕಸ್ ಗ್ರೂಪ್ ಚರ್ಚೆಗಳ ಮೂಲಕ ಮಹಿಳಾ ಚೌಲ್ಟ್ರಿ ಕಾರ್ಮಿಕರಿಂದ ಪಡೆದ ಡೇಟಾವನ್ನು ಆಧರಿಸಿದ ಈ ಸಣ್ಣ ಅಧ್ಯಯನದ ಸಾರಾಂಶ ಸಂಶೋಧನೆಗಳು, ಕೇಸ್ ಸ್ಟಡೀಸ್ ಮತ್ತು ಈ ಕೆಲಸದ ಸಂದರ್ಭದ ವಿಶಾಲ ತಿಳುವಳಿಕೆಯ ಮೂಲಕ ದಾಖಲಿಸಲಾಗಿದೆ.

1. ಕೊಳೆಗೇರಿಗಳು, ಸಣ್ಣಪಟ್ಟಣಗಳು ಅಥವಾ ಕೆಳ ಮಧ್ಯಮ-ವರ್ಗದ ಪ್ರದೇಶಗಳಲ್ಲಿ ವಾಸಿಸುವ ನಗರ ಮತ್ತು ಗ್ರಾಮೀಣ ಬಡ ಸಮುದಾಯಗಳಿಂದ ಚೌಲ್ಟ್ರಿ ಕೆಲಸಗಾರರನ್ನು ಮತ್ತು ಜಾತಿ, ವರ್ಗ ಮತ್ತು ಲಿಂಗ ಶ್ರೇಣಿಯಲ್ಲಿ ಅತ್ಯಂತ ಕಡಿಮೆ ಇರುವವರನ್ನು ತೆಗೆದುಕೊಳ್ಳಲಾಗಿದೆ.

2. ಅವರಲ್ಲಿ ಬಹುಪಾಲು ಮಹಿಳೆಯರು, ಮತ್ತು ವಿಧವೆಯರಾಗಿರುವುದರಿಂದ, ಅಥವಾ ಮದ್ಯವ್ಯಸನಿ ಗಂಡ ಅಥವಾ ಕೆಲಸ ಮಾಡಲು ಸಾಧ್ಯವಾಗದ ಗಂಡ ಕಾರಣ ಕುಟುಂಬದಲ್ಲಿ ಏಕೈಕ ವೇತನದಾರರು ಮತ್ತು ಅವರಲ್ಲಿ ಹೆಚ್ಚಿನ ಮಹಿಳೆಯರು ಒಂಟಿಯಾಗಿದ್ದಾರೆ.

3. ಕೆಲಸವು ಅಗೋಚರವಾಗಿರುತ್ತದೆ ಏಕೆಂದರೆ ಇದು ಮೂಲಭೂತವಾಗಿ ಶುಚಿಗೊಳಿಸುವಿಕೆಯ ಸುತ್ತ ಸುತ್ತುತ್ತದೆ, ಇದನ್ನು ಕೀಳು ಎಂದು ಪರಿಗಣಿಸಲಾಗುತ್ತದೆ ಮತ್ತು ಆದ್ದರಿಂದ ಕೀಳು ಮತ್ತು ಅವಮಾನಕರವಾಗಿದೆ. ಇದು ಅನೌಪಚಾರಿಕ ಕೆಲಸದ ವಲಯದ ಅಡಿಯಲ್ಲಿ ಬರುತ್ತದೆ, ಇದು ಸಂಪೂರ್ಣ ನಿಯಂತ್ರಣದ ಕೊರತೆ, ಕನಿಷ್ಠ ವೇತನ ಮತ್ತು ಯೋಗ್ಯ ಕೆಲಸದ ಪರಿಸ್ಥಿತಿಗಳು ಸೇರಿದಂತೆ ಯಾವುದೇ ಕಾರ್ಮಿಕ ಹಕ್ಕುಗಳಿಲ್ಲ, ಕಾರ್ಮಿಕರ ಘನತೆ ಇಲ್ಲ, ಆರೋಗ್ಯ ರಕ್ಷಣೆ ಸೇರಿದಂತೆ ಸಾಮಾಜಿಕ ಭದ್ರತೆಯ, ರಕ್ಷಣೆಯ ಸಂಪೂರ್ಣ ಕೊರತೆಗಳಿದೆ. (ಉದಾಹರಣೆಗೆ ಔಪಚಾರಿಕ ವಲಯಕ್ಕೆ ಸಿಗುವ ರಕ್ಷಣಾತ್ಮಕ ಕಾರ್ಮಿಕ ಕಾನೂನುಗಳು ಮತ್ತು ಪಿಂಚಣಿ ಪ್ರಯೋಜನಗಳು ಇಲ್ಲ). ಕೋವಿಡ್ ಮತ್ತು ಲಾಕ್‌ಡೌನ್‌ನ ಎರಡು ವರ್ಷಗಳ ಅವಧಿಯಲ್ಲಿ ಬಹುತೇಕ ಎಲ್ಲರೂ ತುಂಬಾ ತೀವ್ರವಾಗಿದ ಹೊಡೆತ ಅವರು ಇನ್ನೂ ಚೇತರಿಸಿಕೊಳ್ಳದ ಜೀವನೋಪಾಯದ ಒಟ್ಟು ನಷ್ಟದಲ್ಲಿದ್ದಾರೆ.ಕಾರ್ಮಿಕರೆಂದು ಗುರುತಿಸುವ ಯಾವುದೇ ಗುರುತಿನ ಚೀಟಿ ಇಲ್ಲದ ಕಾರಣ ದಿನಗೂಲಿ ಕಾರ್ಮಿಕರಿಗೂ ಸರ್ಕಾರ ಘೋಷಿಸಿದ ಯಾವುದೇ ಪ್ರಯೋಜನಗಳನ್ನು ಅವರಲ್ಲಿ ಯಾರೂ ಪಡೆಯಲು ಸಾಧ್ಯವಾಗಲಿಲ್ಲ.

4. ಅವರ ಸರಾಸರಿ ಆದಾಯ ಎರಡು ದಿನಕ್ಕೆ ರೂ 500 – 700 ರ ನಡುವೆ ಇರುತ್ತದೆ ಮತ್ತು ಅವರು ತಿಂಗಳಿಗೆ ಗರಿಷ್ಠ 15 ದಿನಗಳವರೆಗೆ ಕೆಲಸ ಮಾಡುತ್ತಾರೆ ಮತ್ತು ಮಾತುಕತೆಗಳಿಗೆ ಅವಕಾಶವಿಲ್ಲ.

5. ಉದ್ಯೋಗದಾತ/ನೌಕರರ ಸಂಬಂಧವು ಅಸ್ಪಷ್ಟವಾಗಿರುವುದರಿಂದ ಮತ್ತು ಎರಡು ಅಥವಾ ಮೂರು ಹಂತದ ಗುತ್ತಿಗೆದಾರರ ಹೊಣೆಗಾರಿಕೆಯನ್ನು ಸ್ಥಾಪಿಸಲು ಕಷ್ಟವಾಗುತ್ತದೆ.

6. ಉದ್ಯೋಗಿ ಮತ್ತು ಉದ್ಯೋಗದಾತರ ನಡುವೆ ಯಾವುದೇ ರೀತಿಯ ಒಪ್ಪಂದವಿಲ್ಲದ ಕಾರಣ, ಅಸಂಘಟಿತ ಕಾರ್ಮಿಕರಂತೆ ಮೂಲಭೂತ ಹಕ್ಕುಗಳು ಮತ್ತು ಸೇವೆಗಳನ್ನು ಪ್ರವೇಶಿಸಲು ಸಾಧ್ಯವಾಗುವಂತಹ ಕಾರ್ಮಿಕ ಎಂದು ತಮ್ಮ ಗುರುತನ್ನು ಸ್ಥಾಪಿಸಲು ಅವರಿಗೆ ಯಾವುದೇ ಆಧಾರವಿಲ್ಲ.

7. ಕೆಲಸದ ಲಿಂಗ ತಾರತಮ್ಯದ ಸ್ವರೂಪವು ಅವರಿಗೆ ಕಾರ್ಮಿಕ ಮೌಲ್ಯ ಮತ್ತು ಮನ್ನಣೆಯನ್ನು ಕೊಡುವುದಿಲ್ಲ. ಆದರೆ ಮಹಿಳೆಯರನ್ನು ಲೈಂಗಿಕ ಕಿರುಕುಳ ಮತ್ತು ಶೋಷಣೆಗೆ ಹೆಚ್ಚು ಒಡ್ಡುತ್ತದೆ. ಅವರ ತಂಡದಲ್ಲಿರುವ ಕಿರಿಯ ಮಹಿಳೆಯರಿಗೆ ಸ್ಥಳೀಯ ಉಪ ಗುತ್ತಿಗೆದಾರರು ಒದಗಿಸಿದ ರಕ್ಷಣೆಯೊಂದೇ ರಕ್ಷಣಾ ಪದರವಾಗಿದೆ. ಚೌಲ್ಟ್ರಿಯಲ್ಲಿನ ಕೆಲಸದ ಮತ್ತು ಜೀವನ ಪರಿಸ್ಥಿತಿಗಳು ಅಸುರಕ್ಷಿತವಾಗಿರುವುದರ ಜೊತೆಗೆ ಅತ್ಯಂತ ಅವಮಾನಕರವಾಗಿದೆ.

8. ಜಾತಿ ಮತ್ತು ವರ್ಗ ತಾರತಮ್ಯ ಮತ್ತು ಶೋಷಣೆಯು ಈ ಕೆಲಸದ ಅಂತರ್ಗತ ಲಕ್ಷಣವಾಗಿದೆ, ಈ ದೌರ್ಜನ್ಯದ ಪರಿಹಾರಕ್ಕಾಗಿ ಯಾವುದೇ ವೇದಿಕೆಗಳಿಲ್ಲ ಏಕೆಂದರೆ ಅವರಿಗೆ ಚೌಕಾಸಿ ಮಾಡುವ ಶಕ್ತಿ ಅಥವಾ ಟ್ರೇಡ್ ಯೂನಿಯನ್ ಸದಸ್ಯತ್ವಗಳು ಮತ್ತು ಸರಿಯಾದ ಸಂಪರ್ಕಗಳಿಲ್ಲ.

9. ತಮ್ಮ ಸ್ವಂತ ಹಕ್ಕುಗಳಿಗಾಗಿ ಹೋರಾಡಲು ಅಧಿಕಾರವನ್ನು ಪಡೆಯಬಹುದಾದ ಈ ಮಹಿಳೆಯರನ್ನು ಒಟ್ಟುಗೂಡಿಸುವುದು ಅಸಾಧ್ಯವಾಗಿದೆ, ಏಕೆಂದರೆ ಮನೆಕೆಲಸದ ಹೆಣ್ಣುಮಕ್ಕಳಂತೆ ಅವರು ಪ್ರತ್ಯೇಕವಾಗಿ ಒಬ್ಬೊಬ್ಬರೇ ಕೆಲಸ ಮಾಡುತ್ತಾರೆ. ಅವರು ಗುಂಪಾಗಿ ಕೆಲಸ ಮಾಡುತ್ತಿದ್ದಲ್ಲಿಯೂ ಸಹ, ಒಂದೇ ಪ್ರದೇಶದಿಂದ ಬಂದವರಾಗಿರುವುದರಿಂದ ಉಪಗುತ್ತಿಗೆದಾರರಾಗಿರುವ ಸಮುದಾಯದ ಹಿರಿಯ ಮಹಿಳೆಯ ಮೂಲಕ ನಿಷ್ಠೆಯನ್ನು ಖಾತ್ರಿಪಡಿಸಿಕೊಳ್ಳಲಾಗುತ್ತದೆ.

10. ಅವರು ಆರ್ಥಿಕ ಶೋಷಣೆ ಅಥವಾ ಲೈಂಗಿಕ ಹಿಂಸೆಯನ್ನು ಅನುಸಿದಾಗ ನ್ಯಾಯ ಕೇಳಬಹುದಾದ ಕಾರ್ಮಿಕ ನ್ಯಾಯಾಲಯಗಳು ಅಥವಾ ಲೈಂಗಿಕ ಕಿರುಕುಳ ತಡೆ ಸಮಿತಿಗಳಂತಹ ವೇದಿಕೆಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿ ಇವರಿಗಿಲ್ಲ.

## ಶಿಫಾರಸುಗಳು

ಅಸುರಕ್ಷಿತ, ಅನೌಪಚಾರಿಕ ಮತ್ತು ಅನಿಯಂತ್ರಿತ ಸ್ವಭಾವದ ಕೆಲಸದ ಸನ್ನಿವೇಶವು, ಚೌಲ್ಟಿ ಕಾರ್ಮಿಕರನ್ನು ಲಿಂಗ, ವರ್ಗ ಮತ್ತು ಜಾತಿ ಶೋಷಣೆ ಮತ್ತು ತಾರತಮ್ಯಕ್ಕೆ ಗುರಿಯಾಗುವಂತೆ ಮಾಡುತ್ತದೆ ಅವರ ಕಾರ್ಮಿಕ ಘನತೆಯನ್ನು ಮರುಸ್ಥಾಪಿಸಲು ಮತ್ತು ಮೂಲಭೂತ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಈ ಕೆಳಗಿನ ಶಿಫಾರಸುಗಳನ್ನು ಮಾಡಲಾಗಿದೆ:

1. ಎಣಿಕೆ: ಈ ಕೆಲಸವನ್ನು ಗುರುತಿಸುವ ಮತ್ತು ಅಂಗೀಕರಿಸುವ ಮೊದಲ ಹೆಜ್ಜೆಯೆಂದರೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಕಾರ್ಮಿಕ ಇಲಾಖೆಯು ಚೌಲ್ಟಿಗಳು ಮತ್ತು ಇತರ ಸಂಸ್ಥೆಗಳಲ್ಲಿನ ಕಾರ್ಮಿಕರ ವಾರ್ಡ್/ಪಂಚಾಯತವಾರು ಎಣಿಕೆಯನ್ನು ಮಾಡಬೇಕು.

2. ನೋಂದಣಿ: ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ, 2008 ಅಥವಾ ಹೊಸ ಸಾಮಾಜಿಕ ಭದ್ರತಾ ಕೋಡ್‌ನ ನಿಬಂಧನೆಗಳ ಅಡಿಯಲ್ಲಿ ಅನೌಪಚಾರಿಕ ಕೆಲಸಗಾರರಾಗಿ ಜಿಲ್ಲಾಡಳಿತದ ಮೂಲಕ ಅವರ ನೋಂದಣಿಯನ್ನು ಖಚಿತಪಡಿಸಿಕೊಳ್ಳುವುದು ಎರಡನೇ ಹಂತವಾಗಿದೆ. ಅವರಿಗೆ ಕಾನೂನಿನ ಅಡಿಯಲ್ಲಿ ಎಲ್ಲಾ ಪ್ರಯೋಜನಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುತ್ತದೆ.

3. ಕೆಲಸದ ಒಪ್ಪಂದಗಳು/ಉದ್ಯೋಗ ಪತ್ರಗಳು: ಪ್ರತಿಯೊಬ್ಬ ಗುತ್ತಿಗೆದಾರನು ಉಪಗುತ್ತಿಗೆದಾರನಿಗೆ ನೀಡಿದ ಉದ್ಯೋಗದ ಪತ್ರಗಳು ಇರಬೇಕು, ಪ್ರತಿ ಉದ್ಯೋಗಿಯ ಹೆಸರುಗಳು ಮತ್ತು ವೇತನವನ್ನು ನಿರ್ದಿಷ್ಟಪಡಿಸುವ ಆಧಾರದ ಮೇಲೆ ಅವರು ಲಭ್ಯವಿರುವ ಪ್ರಯೋಜನಗಳನ್ನು ಪ್ರವೇಶಿಸಲು ಎಲ್ಲಾ ಅಸಂಘಟಿತ ಕಾರ್ಮಿಕರು ಕಾರ್ಮಿಕ ಗುರುತಿನ ಕಾರ್ಡ್ಗಳನ್ನು ಪಡೆಯಬಹುದು.

4. ಗುತ್ತಿಗೆದಾರರ ನೋಂದಣಿ: ಎಲ್ಲಾ ಗುತ್ತಿಗೆದಾರರನ್ನು ವಾರ್ಡುವಾರು ಅಥವಾ ಪಂಚಾಯತ್ ಅಥವಾ ಪುರಸಭೆಗಳಲ್ಲಿ ನೋಂದಾಯಿಸಬೇಕು, ಅಂದರೆ ಚೌಲ್ಟಿಗಳಲ್ಲಿನ ಕಾರ್ಮಿಕರಿಗೆ ಯೋಗ್ಯವಾದ ಕೆಲಸದ ಪರಿಸ್ಥಿತಿಗಳನ್ನು ಖಾತ್ರಿಪಡಿಸಲು ಅವರು ಹೊಣೆಗಾರರು ಮತ್ತು ಜವಾಬ್ದಾರರಾಗಿರುತ್ತಾರೆ.

5. ಕಾರ್ಮಿಕರ ಅನುಕೂಲ ಕೇಂದ್ರಗಳು: ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆಯ ಅಧ್ಯಾಯ 4 ರ 9 ನೇ ಪರಿಚ್ಛೇದದ ಅಡಿಯಲ್ಲಿ ಇಂತಹ ಕೇಂದ್ರಗಳನ್ನು ಕಡ್ಡಾಯಗೊಳಿಸಬೇಕು:

   » ಲಭ್ಯವಿರುವ ಸಾಮಾಜಿಕ ಭದ್ರತಾ ಯೋಜನೆಗಳ ಬಗ್ಗೆ ಮಾಹಿತಿಯನ್ನು ಕೊಡಿ

- ›› ಅಸಂಘಟಿತ ಕಾರ್ಮಿಕರಿಗೆ ಎಲ್ಲಾ ನೋಂದಣಿ ಹಂತಗಳಲ್ಲೂ ಸಹಾಯ ಮಾಡಿ
- ›› ಸೂಕ್ತ ಯೋಜನೆಗಳಿಗಾಗಿ ದಾಖಲಾತಿಗೆ ಸಹಾಯ ಮಾಡಿ

ಹೊಸ ಸಾಮಾಜಿಕ ಭದ್ರತಾ ಸಂಹಿತೆಯ ಅಡಿಯಲ್ಲಿ ರೂಪಿಸಬೇಕಾದ ನಿಯಮಗಳು ಪ್ರತಿ ವಾರ್ಡುಗಳಲ್ಲಿ ಕಾರ್ಮಿಕರ ಅನುಕೂಲ ಕೇಂದ್ರಗಳಂತಹ ವ್ಯವಸ್ಥೆಗಳನ್ನು ಸ್ಥಾಪಿಸಬೇಕು, ಅಂದರೆ ಚೌಲ್ಟ್ರಿ ಕಾರ್ಮಿಕರಿಗೂ ಅವರ ಹಕ್ಕುಗಳನ್ನು ಪಡೆಯಲು ಅನುಕೂಲವಾಗುತ್ತದೆ.

6. ಚೌಲ್ಟ್ರಿಗಳು, ಮದುವೆ ಮಂಟಪಗಳು ಮತ್ತು ಇತರ ರೀತಿಯ ಸಂಸ್ಥೆಗಳನ್ನು ಕೆಲಸದ ಸ್ಥಳಗಳಾಗಿ ನೋಂದಾಯಿಸುವುದು: ಮುಜರಾಯಿ, ಕಾರ್ಮಿಕ ಮತ್ತು ಇತರ ಸಂಬಂಧಪಟ್ಟ ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಚೌಲ್ಟ್ರಿಗಳು ಮತ್ತು ಮದುವೆ ಹಾಲ್‌ಗಳನ್ನು ನೋಂದಾಯಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಹಾಗು ಕನಿಷ್ಠ ವೇತನ ಮತ್ತು ಸರಿಯಾದ ಕೆಲಸದ ಪರಿಸ್ಥಿತಿಗಳು ಸೇರಿದಂತೆ ಕಾರ್ಮಿಕ ಕಾರ್ಮಿಕರ ಹಕ್ಕುಗಳು ಉಲ್ಲಂಘನೆಯಾಗದಂತೆ ಖಚಿತಪಡಿಸಿಕೊಳ್ಳಬೇಕು.

7. ಕನಿಷ್ಠ ವೇತನಗಳು, ಹೆಚ್ಚುವರಿ ಕೆಲಸಕ್ಕೆ ಬೋನಸ್ ಮತ್ತು ಬ್ಯಾಂಕ್ ಖಾತೆಗಳು: ಕನಿಷ್ಠ ವೇತನವು ಗೃಹ ಕಾರ್ಮಿಕರಿಗೆ ಸುಮಾರು 13,000 ರೂ. ಇದೆ. ಚೌಲ್ಟ್ರಿ ಕೆಲಸಗಾರರಿಗೂ ಇದೇ ಪ್ರಮಾಣದಲ್ಲಿ ಹಾಕಬೇಕು ಮತ್ತು ಈ ಮೊತ್ತವನ್ನು ನಿರ್ಧಿಷ್ಟಪಡಿಸಿ ಇದನ್ನು ಸಮಯದೊಳಗೆ ಬೋನಸ್‌ನೊಂದಿಗೆ ಪಾವತಿಸಬೇಕು. ಆದ್ದರಿಂದ ಕೆಲಸದ ಕನಿಷ್ಠ ಕೂಲಿಯು ಓವರ್‌ಟೈಮ್ ಮತ್ತು ಬೋನಸ್ ಹೊರತುಪಡಿಸಿ ಅವರು ಮಾಡುವ ಎರಡು ದಿನಗಳ ಕೆಲಸಕ್ಕೆ ಅಂದಾಜು ರೂ 1000 ಆಗಿರಬೇಕು. ಪಾವತಿಯನ್ನು ಮಾಡುವ ಗುತ್ತಿಗೆದಾರನು ನೌಕರರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡುವ ಮೂಲಕ ಮತ್ತು ಸ್ವತಂತ್ರವಾಗಿ ಪಾವತಿಸಬೇಕಾದ ಉಪ–ಗುತ್ತಿಗೆದಾರರಿಗೆ ಪಾವತಿಯನ್ನು ಹಸ್ತಾಂತರಿಸಬಾರದು.

8. ಕೆಲಸದ ಜಾಗಗಳು: ಸ್ನಾನಗೃಹಗಳ ಜೊತೆಗೆ ಖಾಸಗಿ ಕೊಠಡಿಗಳನ್ನು ಎಲ್ಲಾ ಚೌಲ್ಟ್ರಿ ಕೆಲಸಗಾರರಿಗೆ ಸಮವಸ್ತ್ರ ಮತ್ತು ಕೈಗವಸುಗಳಂತಹ ಇತರ ರಕ್ಷಣಾ ಸಾಧನಗಳೊಂದಿಗೆ ಒದಗಿಸಬೇಕು. ಸಾಧ್ಯವಿರುವಲ್ಲೆಲ್ಲಾ ಶಿಶುವಿಹಾರಗಳನ್ನು ಒದಗಿಸಬೇಕು ಅಥವಾ ಕನಿಷ್ಠ ಸರ್ಕಾರವು ಸ್ಥಾಪಿಸಿದ ಸಮುದಾಯ ಕ್ರೆಚ್‌ಗಳಲ್ಲಿ ಮಹಿಳೆಯರು ತಮ್ಮ ಮಕ್ಕಳನ್ನು ಬಿಡುತ್ತಾರೋ, ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

9. ಸಾರಿಗೆ ವ್ಯವಸ್ಥೆ: ಕೆಲಸ ಮುಗಿದ ನಂತರ ಯಾವಾಗಲೂ ತಡರಾತ್ರಿಯಲ್ಲಿ ಹಿಂತಿರುಗುವ ಮಹಿಳೆಯರ ಬಲಹೀನತೆಯನ್ನು ಗಮನದಲ್ಲಿಟ್ಟುಕೊಂಡು ಅವರ ಮನೆಗಳಿಗೆ ಸುರಕ್ಷಿತ ಸಾರಿಗೆಯನ್ನು ಒದಗಿಸುವುದು ಗುತ್ತಿಗೆದಾರ/ಚೌಲ್ಟ್ರಿ ಮಾಲೀಕರ ಜವಾಬ್ದಾರಿಯಾಗಿದೆ.

10. ಸಾಮಾಜಿಕ ರಕ್ಷಣೆ ಮತ್ತು ಕೌಶಲ್ಯ ಅಭಿವೃದ್ಧಿ: ಜಾತಿ ಆಧಾರಿತ ತಾರತಮ್ಯ ಮತ್ತು ಉಲ್ಲಂಘನೆಗಳನ್ನು ಪರಿಶೀಲಿಸಲು ಪರಿಶಿಷ್ಟ ಜಾತಿ/ಜನಾಂಗದ ಆಯೋಗ, ಸಮಾಜ ಕಲ್ಯಾಣ ಇಲಾಖೆಗಳು, ಮಹಿಳಾ ಆಯೋಗ ಮತ್ತು ಕಾರ್ಮಿಕ ಇಲಾಖೆಗಳ ಮೂಲಕ ಸಾಮಾಜಿಕ ರಕ್ಷಣೆಯ ಪ್ರವೇಶವನ್ನು ಬಲಪಡಿಸುವುದು, ವೃದ್ಧಾಪ್ಯ ಪಿಂಚಣಿಗಳ ಮೇಲೆ ಕೇಂದ್ರೀಕರಿಸಿ ಸೂಕ್ತ ರಕ್ಷಣಾ ಕ್ರಮಗಳನ್ನು ಒದಗಿಸುವುದು ಮತ್ತು ಹೆಚ್ಚಿನ ಗಳಿಕೆಯನ್ನು ಸಕ್ರಿಯಗೊಳಿಸಲು ಆರೋಗ್ಯ, ವಸತಿ, ಔದ್ಯೋಗಿಕ ಆರೋಗ್ಯ ಮತ್ತು ಕೌಶಲ್ಯ ಅಭಿವೃದ್ಧಿ. ವಿಶೇಷವಾಗಿ ಚೌಲ್ಟ್ರಿ ಕಾರ್ಮಿಕರ ಮಕ್ಕಳು ಬಡತನ ಮತ್ತು ಅವನತಿಯ ಚಕ್ರದಿಂದ ಹೊರಬರಲು ಸಾಧ್ಯವಾಗುವಂತೆ ತರಬೇತಿ ಮತ್ತು ಶಿಕ್ಷಣದೊಂದಿಗೆ ಬೆಂಬಲಿಸಬೇಕು.

11. ಕೌಶಲ್ಯ ಅಭಿವೃದ್ಧಿ: ಅಡುಗೆ ಮಾಡುವವರು ಮತ್ತು ಈವೆಂಟ್ ಮ್ಯಾನೇಜ್‌ಮೆಂಟ್ ಏಜೆನ್ಸಿಗಳ ಬೆಳವಣಿಗೆಯೊಂದಿಗೆ ಈ ಪ್ರದೇಶಗಳ ಕಿರಿಯ ಮಹಿಳೆಯರು ಉತ್ತಮ ಕೆಲಸದ ಪರಿಸ್ಥಿತಿಗಳೊಂದಿಗೆ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಸಮವಸ್ತ್ರದಲ್ಲಿ ಸಜ್ಜುಗೊಳಿಸುವುದು ಇತ್ಯಾದಿಗಳು ಅವರಿಗೆ ಹೆಚ್ಚಿನ

ಕಾರ್ಮಿಕ ಘನತೆಯನ್ನು ನೀಡುತ್ತದೆ. ಯುವತಿಯರು ತಮ್ಮ ಕೆಲಸವನ್ನು ಹೆಚ್ಚು ಆತ್ಮವಿಶ್ವಾಸದಿಂದ ಮತ್ತು ವೃತ್ತಿಪರವಾಗಿ ನಿಭಾಯಿಸಲು ಹೆಚ್ಚು ವ್ಯವಸ್ಥಿತ ತರಬೇತಿಯೊಂದಿಗೆ ಇದರ ವ್ಯಾಪ್ತಿಯನ್ನು ವಿಸ್ತರಿಸಬೇಕು.

12. ಕೋವಿಡ್ ಸಮಯದಲ್ಲಿ ಜೀವನೋಪಾಯದ ನಷ್ಟಕ್ಕೆ ಪರಿಹಾರ: ಕೋವಿಡ್‌ನ ಎರಡು ವರ್ಷಗಳಲ್ಲಿ ಜೀವನೋಪಾಯದ ಒಟ್ಟು ನಷ್ಟದ ಸಂದರ್ಭದಲ್ಲಿ ಅವರು ನೋಂದಾಯಿಸಿದ ಇತರ ಅಸಂಘಟಿತ ಕಾರ್ಮಿಕರಂತೆ ಸಂಪೂರ್ಣವಾಗಿ ಯಾವುದೇ ಪರಿಹಾರವನ್ನು ಪಡೆದಿಲ್ಲ, ಸರ್ಕಾರವು ಸಮಾನ ಪರಿಹಾರ ಮೊತ್ತವನ್ನು ವಿತರಿಸಬೇಕು ಮತ್ತು ಈ ಅವಧಿಯಲ್ಲಿ ಮಾಡಿದ ಸಾಲಗಳ ಮೇಲಿನ ಬಡ್ಡಿ ಮನ್ನಾ ಮಾಡಬೇಕು.

13. ತಾರತಮ್ಯವನ್ನು ನಿಷೇಧಿಸುವ ಸಾರ್ವಜನಿಕ ಸೂಚನೆಗಳು: ಲೈಂಗಿಕ ಕಿರುಕುಳ ಮತ್ತು ಜಾತಿ ತಾರತಮ್ಯವು ಅಪರಾಧ ಮತ್ತು ಕಾನೂನಿನಲ್ಲಿ ಶಿಕ್ಷಾರ್ಹವಾಗಿದೆ ಎಂದು ತಿಳಿಸುವ ಎಲ್ಲಾ ಚೌಲ್ಟ್ರಿಗಳು ಮತ್ತು ಅಂಥಹ ಕೆಲಸದ ಸ್ಥಳಗಳು ಸಾರ್ವಜನಿಕ ಸೂಚನೆಗಳನ್ನು ಹೊಂದಿರಬೇಕು. ಮತ್ತು ಅಂತಹ ಯಾವುದೇ ಘಟನೆಗಳು ಕಂಡುಬಂದಲ್ಲಿ ಚೌಲ್ಟ್ರಿ ಮಾಲೀಕರನ್ನು ಸಹ ಜವಾಬ್ದಾರರಾಗಿರಬೇಕಾಗುತ್ತದೆ.

14. ಸ್ಥಳೀಯ ದೂರು ಸಮಿತಿಗಳ ಬಗ್ಗೆ ತಿಳುವಳಿಕೆ: POSH ಕಾಯಿದೆಯ ನಿಬಂಧನೆಯ ಅಡಿಯಲ್ಲಿ ಜಿಲ್ಲಾ ಅಧಿಕಾರಿಯು ಆಯಾ ಜಿಲ್ಲೆಗೆ ಸ್ಥಳೀಯ ದೂರುಗಳ ಸಮಿತಿಯನ್ನು ರಚಿಸಬೇಕು. ಅದು ಅನೌಪಚಾರಿಕ ವಲಯದಲ್ಲಿ ಮಹಿಳಾ ಕಾರ್ಮಿಕರಿಂದ ಲೈಂಗಿಕ ಕಿರುಕುಳದ ದೂರುಗಳನ್ನು ಸ್ವೀಕರಿಸುತ್ತದೆ ಮತ್ತು ನಿವಾರಿಸುತ್ತದೆ. ಈ ಸಮಿತಿಗಳ ಅಸ್ತಿತ್ವದ ಬಗ್ಗೆ ಮಹಿಳೆಯರಿಗೆ ಅರಿವು ಮೂಡಿಸಬೇಕು ಮತ್ತು ಅವರು ತಮ್ಮ ಸ್ವಂತ ಪ್ರಯತ್ನಗಳ ಹೊರತಾಗಿಯೂ ಸ್ಥಳೀಯ ಗುತ್ತಿಗೆದಾರರು ಮತ್ತು ಚೌಲ್ಟ್ರಿ ಮಾಲೀಕರಿಂದ ಸಮಸ್ಯೆಯನ್ನು ಎದುರಿಸುತ್ತಿದ್ದರೆ ಪರಿಹಾರವನ್ನು ಕೇಳಲು ಹೋಗಲು ಪ್ರೋತ್ಸಾಹಿಸಬೇಕು.

15. ಕಾರ್ಮಿಕ ಇಲಾಖೆಯಿಂದ ಮೇಲ್ವಿಚಾರಣೆ: ಕೆಲಸದ ಜಾಗವನ್ನೂ ಸೇರಿದಂತೆ ಮೂಲಭೂತ ಕಾರ್ಮಿಕ ಹಕ್ಕುಗಳ ಉಲ್ಲಂಘನೆ ಆಗುತ್ತಿದೆಯೇ ಎಂದು ಪರಿಶೀಲಿಸಲು ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳು ಈ ಸ್ಥಳಗಳಿಗೆ ನಿತ್ಯ ಭೇಟಿ ನೀಡಬೇಕು.

16. ಒಟ್ಟುಗೂಡಿಸುವಿಕೆ: ನಿರ್ದಿಷ್ಟ ಪ್ರದೇಶಗಳಲ್ಲಿ ಈ ಕಾರ್ಮಿಕರು ಅವರ ಹಕ್ಕುಗಳ ಬಗ್ಗೆ ತಿಳುವಳಿಕೆ ಪಡೆಯಲು ಒಗ್ಗಟ್ಟಾಗುತ್ತಿದ್ದಾರೆಯೇ, ಕಾರ್ಮಿಕರಾಗಿ ತಮ್ಮ ನೋಂದಣಿಯನ್ನು ಮಾಡಿಕೊಂಡಿದ್ದಾರೆಯೇ ಮತ್ತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಅಗತ್ಯವಾದ ವಿಶ್ವಾಸವನ್ನು ಗಳಿಸಿದ್ದಾರೆಯೇ ಎಂದು ಖಚಿತಪಡಿಸಿಕೊಳ್ಳುವುದು ನಾಗರಿಕ ಸಮಾಜದ ಸಂಘಟನೆಗಳು ಮತ್ತು ಕಾರ್ಮಿಕ ಯೂನಿಯನ್‌ಗಳ ಜವಾಬ್ದಾರಿಯಾಗಿದೆ.

17. ಸಮಿತಿ: ವಿಭಿನ್ನ ಲಿಂಗ, ಜಾತಿ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಹೊಂದಿರುವ ಈ ಸ್ವರೂಪದ ಉದ್ಯೋಗದ ವಿಭಿನ್ನ ಆಯಾಮಗಳನ್ನು ಪರಿಶೀಲಿಸಲು ಕಾರ್ಮಿಕ, ಸಮಾಜ ಕಲ್ಯಾಣ, ಮುಜರಾಯಿ, ಮಹಿಳಾ ಮತ್ತು ಎಸ್‌ಸಿ/ಎಸ್‌ಟಿ ಆಯೋಗ ಮತ್ತು ನಗರ ಮತ್ತು ಗ್ರಾಮೀಣ ಬಡವರ ಜೊತೆ ಕೆಲಸ ಮಾಡುವ ಸಂಸ್ಥೆಗಳು ಮತ್ತು ಒಕ್ಕೂಟಗಳ ಸದಸ್ಯರನ್ನು ಒಳಗೊಂಡ ಸಮಿತಿಯೊಂದು ಸ್ಥಾಪನೆಯಾಗಬೇಕು. ಲಿಂಗ ಮತ್ತು ಜಾತಿ ಶೋಷಣೆಯ ಸಾಂಸ್ಥಿಕ ಮತ್ತು ತಾರತಮ್ಯದ ಮಾನದಂಡಗಳಿಗೆ ಸಂಬಂಧಿಸಿದಂತೆ ಅವರು ಅಂತಹ ಕೆಲಸದ ಸ್ಥಳಗಳಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಬರೆದು ಬೋರ್ಡ್ ಗಳನ್ನು ಹಾಕಿಸಬೇಕು. ಮತ್ತು ಇವುಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಲಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಈ ಕೆಲಸದ ಸ್ಥಳಗಳಲ್ಲಿ ಈ ನೀತಿಸಂಹಿತೆಗಳನ್ನು ಅನುಸರಿಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಹೊಣೆಗಾರಿಕೆಯ ಕಾರ್ಯವಿಧಾನಗಳನ್ನು ಜಾರಿಗೆ ತರಬೇಕು. ಸಮಿತಿಯು ಕಾರ್ಮಿಕರಿಗೆ ಘನತೆ ಮತ್ತು ಹಕ್ಕುಗಳನ್ನು ಪುನಃಸ್ಥಾಪಿಸಲು ಸಹಾಯ ಮಾಡುವ ವ್ಯವಸ್ಥಿತ ಮಾರ್ಗಗಳನ್ನು ಪರಿಶೀಲಿಸಬೇಕು, ಕೌಶಲ್ಯಗಳನ್ನು ಸುಧಾರಿಸಲು ಮತ್ತು ಅವರ ಮಕ್ಕಳಿಗೆ ಶೈಕ್ಷಣಿಕ ಅವಕಾಶಗಳನ್ನು ಖಚಿತಪಡಿಸಿಕೊಳ್ಳಬೇಕು.

ಅನುಬಂಧ

# ಚೌಲ್ಟಿ ಕೆಲಸಗಾರರೊಂದಿಗೆ FGD ಗಾಗಿ ಪ್ರಶ್ನೆಗಳು

## I. ಹಿನ್ನೆಲೆ/ವೈಯಕ್ತಿಕ ವಿವರಗಳು

1. ನೀವು ಎಲ್ಲಿಂದ ಬಂದವರು (ಸ್ಥಳೀಯ/ವಲಸಿಗ/ನಗರ ಆಧಾರಿತ/ಗ್ರಾಮದಿಂದ)?
2. ನೀವು/ನಿಮ್ಮ ಪತಿ ಯಾವ ಕೆಲಸ ಮಾಡುತ್ತೀರಿ?
3. ನಿಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ – ಅಧ್ಯಯನ / ಕೆಲಸ?
4. ನೀವು ಯಾವ ರೀತಿಯ ಮನೆಯಲ್ಲಿ ಇರುತ್ತೀರಿ – ಇದು ನಿಮ್ಮದೇ/ಬಾಡಿಗೆ/ಗುತ್ತಿಗೆಗೆ ನೀಡಲಾಗಿದೆಯೇ?
5. ಕೊಳೆಗೇರಿ/ವಸಾಹತು ಕ್ರಮಬದ್ಧವಾಗಿದೆಯೇ?
6. ಆದರ್ಶ ಜೀವನದ ನಿಮ್ಮ ಕನಸು ಏನು?

## II. ಕೆಲಸದ ಪರಿಸ್ಥಿತಿಗಳು

1. ನೀವು ಈ ಕೆಲಸವನ್ನು ಎಷ್ಟು ಸಮಯದಿಂದ ಮಾಡುತ್ತಿದ್ದೀರಿ/ಇದರ ಬಗ್ಗೆ ನಿಮಗೆ ಹೇಗೆ ಗೊತ್ತು?
2. ನೀವು ಯಾವ ಚೌಲ್ಟ್ರಿಯಲ್ಲಿ ಕೆಲಸ ಮಾಡುತ್ತಿದ್ದೀರಿ. ನೀವು ಒಂದಕ್ಕಿಂತ ಹೆಚ್ಚು ಕೆಲಸ ಮಾಡುತ್ತಿದ್ದೀರಾ?
3. ನೀವು ನೇರವಾಗಿ ಅಥವಾ ಗುತ್ತಿಗೆದಾರರ ಮೂಲಕ ಕೆಲಸ ಮಾಡುತ್ತಿದ್ದೀರಾ?
4. ದಿನಕ್ಕೆ ನೀವು ಪಡೆಯುವ ಸರಾಸರಿ ಪಾವತಿ ಎಷ್ಟು/ಒಂದು ತಿಂಗಳಲ್ಲಿ ಎಷ್ಟು ದಿನಗಳು ನೀವು ಕೆಲಸ ಮಾಡುತ್ತೀರಿ?
5. ನೀವು ಎಷ್ಟು ಗಂಟೆ ಕೆಲಸ ಮಾಡುತ್ತೀರಿ ಮತ್ತು ನೀವು ಮಾಡಬೇಕಾದ ಕೆಲಸ ಯಾವುದು?
6. ನೀವು ಎಷ್ಟು ಬಾರಿ ರಾತ್ರಿಯಲ್ಲಿ ಉಳಿಯಬೇಕು ಮತ್ತು ನೀವು ಯಾವ ಸೌಲಭ್ಯಗಳನ್ನು ಪಡೆಯುತ್ತೀರಿ?
   - ಮಲಗಲು
   - ತಿನ್ನುವುದು
   - ಸ್ನಾನಗೃಹ ಇತ್ಯಾದಿ
7. ನಿಮ್ಮ ಗುತ್ತಿಗೆದಾರರು/ಉದ್ಯೋಗದಾತರು ನಿಮಗೆ ಹೆಚ್ಚುವರಿ ಪ್ರಯೋಜನಗಳನ್ನು ನೀಡುತ್ತಾರೆಯೇ:
   - ಸಾಲಗಳು
   - ವೈದ್ಯಕೀಯ ಬೆಂಬಲ

» ಮಕ್ಕಳಿಗೆ ಶಿಕ್ಷಣ ಬೆಂಬಲ

» ವರ್ಕರ್ ಕಾರ್ಡ್‌ಗಳನ್ನು ಸುಗಮಗೊಳಿಸುವುದೇ?

8. ಉದ್ಯೋಗದಾತರು/ಗುತ್ತಿಗೆದಾರರು ನಿಮ್ಮ ಅಗತ್ಯತೆಗಳು ಮತ್ತು ತೊಂದರೆಗಳ ಬಗ್ಗೆ ತಿಳುವಳಿಕೆ ಹೊಂದಿದ್ದಾರೆಯೇ?

9. ಲಾಕ್‌ಡೌನ್ ಸಮಯದಲ್ಲಿ ನೀವು ಯಾವ ತೊಂದರೆಗಳನ್ನು ಎದುರಿಸಿದ್ದೀರಿ? ಮನೆ/ಅಸಂಘಟಿತ ಕಾರ್ಮಿಕರಿಗೆ ಸರ್ಕಾರ ನೀಡಿರುವ ಪರಿಹಾರದ ಬಗ್ಗೆ ನಿಮಗೆ ತಿಳಿದಿದೆಯೇ ಮತ್ತು ನೀವು ಅವರನ್ನು ಪ್ರವೇಶಿಸಲು ಸಾಧ್ಯವೇ?

10. ನೀವು ಮಾಡುವ ಕೆಲಸವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ನೀವು ನೋಡುವ ಮತ್ತು ಅನುಭವಿಸುವ ರೀತಿಯಲ್ಲಿ ವಿವರಿಸಿ.

## III. ಮಹಿಳಾ ಕೆಲಸಗಾರರು: ವೈಯಕ್ತಿಕ ಭದ್ರತೆ/ಸಾಮಾಜಿಕ ಭದ್ರತೆ ಮತ್ತು ಸಾಮಾಜಿಕ ಕಳಂಕ

1. ನೀವು ಮಾಡುವ ಕೆಲಸವನ್ನು ಕೇವಲ ಮಹಿಳೆಯರು ಮಾತ್ರ ಮಾಡುತ್ತಾರೆಯೇ ಅಥವಾ ಪುರುಷರೂ ಇದ್ದಾರೆಯೇ? ಎಷ್ಟು? ಜಾತಿ/ಧರ್ಮದ ವಿಷಯದಲ್ಲಿ ಈ ಕೆಲಸಕ್ಕೆ ಸಂಬಂಧಿಸಿದ ಯಾವುದೇ ನಿರ್ದಿಷ್ಟ ಸಮುದಾಯಗಳಿವೆಯೇ?

2. ಸುತ್ತಮುತ್ತಲಿನ ಜನರು ಈ ಕೆಲಸವನ್ನು ಹೇಗೆ ವೀಕ್ಷಿಸುತ್ತಾರೆ? ಈ ಕೆಲಸಕ್ಕೆ ಸಂಬಂಧಿಸಿದ ಯಾವುದೇ ಕಳಂಕವಿದೆಯೇ ಏಕೆಂದರೆ ನೀವು:

   » ಮಹಿಳೆ

   » ಖಅ/ಖಖ/ದಲಿತ?

3. ಮದುವೆಗಳಿಗೆ ಬರುವವರು ಅಥವಾ ಮದುವೆಯನ್ನು ಆಯೋಜಿಸುವವರು ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ?

4. ಲೈಂಗಿಕ ಕಿರುಕುಳದ ವಿಷಯದಲ್ಲಿ ಮಹಿಳೆಯರು ಅನುಭವಿಸಿದ ಯಾವುದೇ ಅನುಭವಗಳ ಬಗ್ಗೆ ನೀವು ಕೇಳಿದ್ದೀರಾ ಅಥವಾ ಅಂತಹ ಅನುಭವವನ್ನು ನೀವು ಅನುಭವಿಸಿದ್ದೀರಾ?

5. ಲೈಂಗಿಕ ಕಿರುಕುಳ ತಡೆಗಟ್ಟುವ ಕಾನೂನಿನ ಬಗ್ಗೆ ನೀವು ಕೇಳಿದ್ದೀರಾ ಮತ್ತು ನೀವು ಅದನ್ನು ಅನುಭವಿಸಿದರೆ ಎಲ್ಲಿಗೆ ಹೋಗಿ ಪರಿಹಾರವನ್ನು ಪಡೆಯಲು ಪ್ರಯತ್ನಿಸಬಹುದು?

6. ನೀವು ಕೆಲಸಕ್ಕೆ ಮತ್ತು ಹಿಂತಿರುಗಲು ಹೇಗೆ ಪ್ರಯಾಣಿಸುತ್ತೀರಿ? ತಡವಾದರೆ ಉದ್ಯೋಗದಾತರು/ಗುತ್ತಿಗೆದಾರರು ನಿಮ್ಮ ಮನೆಗೆ ಸುರಕ್ಷಿತವಾಗಿ ಮರಳಲು ಅನುಕೂಲ ಮಾಡಿಕೊಡುತ್ತಾರೆಯೇ

7. ನೀವು ಕೆಲಸಕ್ಕೆ ಹೋದಾಗ ನಿಮ್ಮ ಮಕ್ಕಳೊಂದಿಗೆ ನೀವು ಏನು ಮಾಡುತ್ತೀರಿ?

8. ನಿಮ್ಮಂತಹ ಅಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರದ ಬಳಿ ಇರುವ ಯೋಜನೆಗಳ ಬಗ್ಗೆ ಕೇಳಿದ್ದೀರಾ? ನೀವು ಯಾವುದೇ ಕೆಲಸಗಾರರ ಐಡಿ ಕಾರ್ಡ್‌ಗಳನ್ನು ಹೊಂದಿದ್ದೀರಾ?

9. ನಿಮ್ಮ ಕೆಲಸ ಮತ್ತು ವಲಯದಲ್ಲಿ ನೀವು ಯಾವ ಬದಲಾವಣೆಗಳನ್ನು ನೋಡಲು ಬಯಸುತ್ತೀರಿ?

ಫೋಟೋ: ಅಧ್ಯಯನದ ವರದಿಯಲ್ಲಿ ಕಂಡುಕೊಂಡ ಅಂಶಗಳು ಮತ್ತು ಶಿಫಾರಸ್ಸುಗಳನ್ನು ಬೆಂಗಳೂರಿನಲ್ಲಿ ಚೌಲ್ಟ್ರಿ ಕಾರ್ಮಿಕರ ಜೊತೆ ಹಂಚಿಕೊಂಡ ಕ್ಷಣ.


actionaid

**ActionAid Association (India)**

www.actionaidindia.org

@actionaidindia

actionaid_india

actionaidcomms

@company/actionaidindia

Actionaid Association
139, Richmond Road
Bengaluru -560 025.
+91-80-4365 0615/650